# ಯುಗಪಲ್ಲಟ

## ಯು.ಆರ್. ಅನಂತಮೂರ್ತಿ

*ನೀನಾಸಮ್ ಸಂಸ್ಕೃತಿ ಶಿಬಿರ ೨೦೦೦ ದಲ್ಲಿ ೧೫-೧೦-೨೦೦೦ರಂದು ನೀಡಿದ ಪ್ರಾಸ್ತಾವಿಕ ಉಪನ್ಯಾಸ; ಸಂಗ್ರಹ - ಜಶವಂತ ಜಾಧವ*

ಈ ಶಿಬಿರದ ವಿಷಯ 'ಕಳೆದ ಶತಮಾನ-ಹೊಸ ಶತಮಾನ' ದ ಬಗ್ಗೆ ಈ ಕ್ಷಣಕ್ಕೆ ನನ್ನ ಮನದಲ್ಲಿ ಹರಿದು ಬರುತ್ತಿರುವ ಕೆಲವೊಂದು ಸ್ಥೂಲ ಯೋಜನೆಗಳನ್ನು ನಿಮ್ಮೊಂದಿಗೆ ಹಾಗೆಯೆ ಹಂಚಿಕೊಳ್ಳುತ್ತಿದ್ದೇನೆ.

ಒಂದು ರೀತಿಯಲ್ಲಿ, 'ಇಪ್ಪತ್ತನೆಯ ಶತಮಾನ-ಇಪ್ಪತ್ತೊಂದನೆಯ ಶತಮಾನ'ಗಳೆಂದು ಹೀಗೆ ಕಾಲವನ್ನು ವಿಭಜಿಸುವ ಕ್ರಮವೆ ಕೃತಕವಾದ್ದು. ಶತಮಾನ-ದಶಕ-ವರ್ಷಗಳು ಹೀಗೆ ಯಾವುದೊ ನಿರ್ದಿಷ್ಟ ದಿನ-ಕ್ಷಣಗಳಲ್ಲಿ ಪಲ್ಲಟವಾಗುವವೆಂಬ ತಿಳವಳಿಕೆಯೆ ಅಪ್ರಾಕೃತಿಕ ಹಾಗೂ ಅರ್ಥಹೀನವಾದ್ದು. ಇವೆಲ್ಲ ನಮ್ಮ ಕಲ್ಪನೆಗಳಷ್ಟೆ. ನಾವು ಕಲ್ಪಿಸಿಕೊಂಡ ಕಾಲಮಾನದ ಆಧಾರದ ಮೇಲೆ ಮಾತ್ರ ನಿನ್ನೆ ಇಪ್ಪತ್ತನೆಯ ಶತಮಾನವಾಗಿರುತ್ತದೆ, ಇಂದು ಇಪ್ಪತ್ತೊಂದನೆಯದಾಗಿರುತ್ತದೆ.

ಆದರೆ, ಹಿಂದೆ, ನಮ್ಮ ಕಥನಕಾರರು ಯುಗಪರಿವರ್ತನೆಯನ್ನು ಮಾನವ ಕುಲದ ಒಟ್ಟೂ ಮನೋಧರ್ಮದ ಪರಿವರ್ತನೆಯ ಮೂಲಕ ಸೂಚಿಸುತ್ತಿದ್ದರು. ನಾವು ನಮ್ಮ ಬಾಲ್ಯದಲ್ಲಿ ಕೇಳಿದ ಕಥೆಯೊಂದು ಈ ರೀತಿಯದು: ಧರ್ಮರಾಯನ ಆಳ್ವಿಕೆಯಲ್ಲಿ, ಒಬ್ಬಾತ ತಾನು ಕೆಲಕಾಲದ ಹಿಂದೆ ಕೊಂಡುಕೊಂಡ ಮನೆಯ ಹಿತ್ತಲಲ್ಲಿ ಅಗೆಯುತ್ತಿದ್ದಾಗ ನಿಧಿಯೊಂದನ್ನು ಕಂಡನಂತೆ. ತಕ್ಷಣ ಆತ ಮನೆಯ ಹಳೆಯ ಮಾಲಿಕನ ಬಳಿಹೋಗಿ, ತಾನು ಆತನಿಂದ ಕೊಂಡದ್ದು ಮನೆಯನ್ನು ಮಾತ್ರವೆಂದೂ, ಹಾಗಾಗಿ ಆ ನಿಧಿ ತನಗಲ್ಲದೆ ಆತನಿಗೇ ಸೇರಿದುದೆಂದೂ ಹೇಳಿದನಂತೆ. ಮೊದಲಿನ ಮಾಲಿಕನೊ ತಾನು ಮನೆಯೊಟ್ಟಿಗೆ ಆ ಇಡೀ ನಿವೇಶನ ಹಾಗೂ ಅದರಲ್ಲಿ ಇದ್ದಿರಬಹುದಾದ ಎಲ್ಲ ರೀತಿಯ ವಸ್ತುಗಳನ್ನೂ ಸೇರಿಸಿ ಮಾರಿದ್ದೆಂದೂ, ಯಾವುದಕ್ಕೂ ಒಮ್ಮೆ ಮನೆಯನ್ನು ಮಾರಿದ ನಂತರ ತನ್ನ ಹಕ್ಕುದಾರಿಕೆಯೆಲ್ಲ ಮುಗಿದುಹೋಯಿತೆಂದೂ, ಹಾಗಾಗಿ ಆ ನಿಧಿ ತನಗಲ್ಲದೆ ಅವನಿಗೆಯೇ ಸೇರಿದ್ದೆಂದೂ



ಉತ್ತರಿಸಿದನಂತೆ. ಪರಸ್ಪರ ಎಷ್ಟು ಬೇಡಿಕೊಂಡರೂ ಸಮಸ್ಯೆ ಬಗೆಹರಿಯದೆ ಅವರು ಕೊನೆಗೆ ಧರ್ಮರಾಯನ ಬಳಿ ತೆರಳಿದರು; ಅವನೆದುರೂ ಅವವೆ ವಾದಗಳನ್ನು ಮಂಡಿಸಿದರು. ಧರ್ಮರಾಯನಿಗೂ ತಕ್ಷಣಕ್ಕೆ ಪರಿಹಾರ ತೋಚದೆ ಆತ ತುಸು ಯೋಚಿಸಿ ಮರುದಿನ ನಿರ್ಣಯ ಕೊಡುತ್ತೇನೆಂದ. ಒಪ್ಪಿಕೊಂಡು ಹೋದ ಅವರು ಮರುದಿನ ಮತ್ತೆ ಅವನೆದುರು ಹಾಜರಾದರು. ಆದರೆ ಅಂದು ಮಾತ್ರ ಅವರಿಬ್ಬರ ಧಾಟಿಯೆ ಬದಲಾಗಿತ್ತು. ಹಳೆಯ ಮಾಲೀಕ ತಾನು ಮಾರಿದ್ದು ಮನೆ ಮತ್ತು ನಿವೇಶನವನ್ನಷ್ಟೆ ಹೊರತು ಆ ಜಾಗದಲ್ಲಿ ಅಡಿಗಿದ್ದ ನಿಧಿಯನ್ನಲ್ಲವೆಂದೂ, ಆ ಕಾರಣ ನಿಧಿ ತನಗೆಯೆ ಸೇರಿದ್ದೆಂದೂ ವಾದಿಸಿದರೆ ಹೊಸ ಮಾಲೀಕ ತಾನು ಮನೆಯನ್ನು ಕೊಂಡಾದ ನಂತರ ಅದರ ನಿವೇಶನದಲ್ಲಿ ಅಕಸ್ಮಾತ್ತಾಗಿ ಸಿಗಬಹುದಾದ ಎಲ್ಲ ಸಂಪತ್ತಿಗೂ ತಾನೆ ಹಕ್ಕುದಾರನೆಂದೂ ಹಠ ಹಿಡಿದ. ವ್ಯಾಜ್ಯದ ಸೂಕ್ಷ್ಮತೆಗಿಂತ ಹೆಚ್ಚಾಗಿ ವಾದಿಗಳ ಬದಲಾದ ನಿಲುವುಗಳಿಂದ ದಂಗಾದ ಧರ್ಮರಾಯ ಆಗ ಕಾಲಜ್ಞಾನಿಗಳಾದ ತನ್ನ ತಮ್ಮಂದಿರು ನಕುಲ-ಸಹದೇವರನ್ನು ಕರೆಸಿದ; ವಾದಿಗಳಲ್ಲಿ ರಾತ್ರೋರಾತ್ರಿ ಆದಂಥ ಇಂಥ ವಿಲಕ್ಷಣ ಬದಲಾವಣೆಗೆ ಕಾರಣವೇನಿರಬಹುದೆಂದು ಕೇಳಿದ. ಅವರು ಉತ್ತರಿಸಿದರು: 'ದ್ವಾಪರಯುಗ ಸರಿದು ಕಲಿಯುಗ ಕಾಲಿಟ್ಟಿದೆ ಅಷ್ಟೆ.'

ಹೀಗೆ, ಯುಗಪಲ್ಲಟದ ಪ್ರಕ್ರಿಯೆಯೆನ್ನುವುದು ಇಷ್ಟು ನಾಟಕೀಯವಾಗಿ ಆಗಬಹುದೆನ್ನುವ ಕಲ್ಪನೆ ನಮ್ಮ ಪೂರ್ವಿಕರಿಗಿತ್ತು. ಅಂಥ ದೃಷ್ಟಿಯಿಂದ ನೋಡಿದರೆ ಇಪ್ಪತ್ತನೆಯ ಶತಮಾನವೂ ಕಲಿಗಾಲವೆ, ಇಪ್ಪತ್ತೊಂದನೆಯ ಶತಮಾನವೂ ಕಲಿಗಾಲವೆ, ಇಪ್ಪತ್ತೆರಡನೆಯದೂ ಅಷ್ಟೆಯೆ. ಪುರಾಣ ಕಾಲಕಲ್ಪನೆಯಲ್ಲಿ ಇವೆಲ್ಲ ಕಲಿಯುಗದ ಮುಂದುವರೆದ ಭಾಗಗಳಷ್ಟೆ ಹೊರತು ಬಹಳ ದೊಡ್ಡ ಬದಲಾವಣೆಗಳ ಘಟ್ಟಗಳೇನಲ್ಲ.

ಕಾಲದ ಹರಿವನ್ನು ಇನ್ನೊಂದು ದೃಷ್ಟಿಕೋನದಿಂದಲೂ ನೋಡುವುದುಂಟು. ಇದು ಚರಿತ್ರೆಯ ದೃಷ್ಟಿಕೋನ. ಇಂದು ನಮ್ಮನ್ನು ಹೆಚ್ಚಾಗಿ ಆಳುತ್ತಿರುವುದೆ ಇದು. ನನಗನಿಸುತ್ತಿದೆ – ಸುಮಾರು ಅರವತ್ತು-ಎಪ್ಪತ್ತು ವರ್ಷಗಳ ಹಿಂದೆ ಭಾರತದ ಬಹುಪಾಲು ಜನರಿಗೆ ತಾವು ಇಪ್ಪತ್ತನೆಯ ಶತಮಾನದಲ್ಲಿ ಬದುಕುತ್ತಿದ್ದೇವೆಂಬ ಕಲ್ಪನೆಯೆ ಇರಲಿಲ್ಲ. ಆದರೆ ಅನಂತರದಲ್ಲಿ, ವಿಶೇಷವಾಗಿ ಕಳೆದ ಇಪ್ಪತ್ತು-ಮೂವತ್ತು ವರ್ಷಗಳಿಂದೀಚೆಗಿನ ಅವಧಿಯಲ್ಲಿ, ಇಂಥ ಚಾರಿತ್ರಿಕ ಕಾಲಕಲ್ಪನೆ ನಮ್ಮಲ್ಲಿ ಬಲವಾಗಿ ಬೆಳೆಯುತ್ತ ಬಂದಿದೆ. ಎಷ್ಟರ ಮಟ್ಟಿಗೆಂದರೆ, ಇಂದಿನ ಭಾರತದಲ್ಲಿ ತಾವು ಇಪ್ಪತ್ತೊಂದನೆಯ ಶತಮಾನದಲ್ಲಿ ಬಾಳುತ್ತಿದ್ದೇವೆಂಬ ಕಲ್ಪನೆಯಿಲ್ಲದವರಿಗೆ ಚರಿತ್ರೆಯಲ್ಲಿ ಯಾವ ಸ್ಥಾನವೂ ಇಲ್ಲ, ಜಗತ್ತಿನಲ್ಲಿ ಯಾವ ಜೀವನೋಪಾಯವೂ ಇಲ್ಲ

ಎನ್ನುವಂತಾಗಿ ಹೋಗಿದೆ. ಈ ಪ್ರಜ್ಞೆಗೆ ಹೊರತಾದವರು ಇಂದು ಬಹುಪಾಲು ಬಡವರೊ ಭಿಕ್ಷುಕರೊ ಆಗಿರುತ್ತಾರೆ.

ಇದು ಬಹಳಷ್ಟು ದೇಶಗಳ ಮಟ್ಟಿಗೂ ಸತ್ಯ. ಹಲವು ವರ್ಷಗಳ ಹಿಂದೆ ರಷಿಯಾಕ್ಕೆ ಭೇಟಿ ನೀಡಿದ್ದಾಗ ನಾನು ಕಂಡ ಪ್ರಸಂಗವೊಂದು ಇದನ್ನು ಪ್ರತಿಬಿಂಬಿಸುವಂಥದಾಗಿತ್ತು. ಆಗ ರಷಿಯಾದಲ್ಲಿ ಹಳೆಯ ಸರ್ವಾಧಿಕಾರಿ ಸ್ಟಾಲಿನ್ ತೀರಿಕೊಂಡು ಎಷ್ಟೋ ವರ್ಷಗಳು ಸಂದು ಬ್ರೆಜ್ನೆವ್ ಆಳ್ವಿಕೆ ಬಲವಾಗಿದ್ದ ಕಾಲ. ನಮ್ಮ ಪ್ರವಾಸದಲ್ಲಿ ಆತಿಥೇಯರು ನಮ್ಮನ್ನು ಮಾಸ್ಕೊದಲ್ಲಿದ್ದ ತಮ್ಮ ರಾಷ್ಟ್ರನಾಯಕ ಲೆನಿನ್‌ನ ಸಮಾಧಿಗೆ ಕರೆದೊಯ್ಯುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ನನಗೋ, ರಾಜಕಾರಣಿ ಲೆನಿನ್‌ಗಿಂತ ಲೇಖಕ ಟಾಲ್‌ಸ್ಟಾಯ್‌ನ ಬಗ್ಗೆ ಹೆಚ್ಚು ಪ್ರೀತಿ-ಗೌರವ; ಮೊದಲು ಅವನ ಹಳ್ಳಿ-ಮನೆಗಳನ್ನು ನೋಡುವ ಹಂಬಲ. ನನ್ನ ಹಠಕ್ಕೆ ವ್ಯವಸ್ಥಾಪಕರು ಕೊನೆಗೂ ಮಣಿದರು. ದೂರದ ಟಾಲ್‌ಸ್ಟಾಯ್ ಊರಿಗೆ ಸಾಗುವಾಗ ಹಾದಿಯ ನಡುವೆ ಬಾಯಾರಿಸಿಕೊಳ್ಳಲೆಂದು ನಾವೆಲ್ಲರಸ್ತೆಬದಿಯ ಹೊಟೆಲೊಂದನ್ನು ಹೊಕ್ಕೆವು. ಅಲ್ಲಿ ಹೊಟೆಲ್‌ನ ಎದುರಿಗೆ ತುಂಬು ವೃದ್ಧೆ ಜಿಪ್ಸಿಯೊಬ್ಬಳು ಕುಳಿತಿದ್ದಳು; ಅಗಾಧ ದೇಹದ, ಸುಕ್ಕು ತುಂಬಿದ ಮುಖದ ಆಕೆ ಕಲ್ಲಿನ ಮೂರ್ತಿಯೊಂದು ಪ್ರತಿಷ್ಠಾಪಿತವಾದಂತೆ ಅಲ್ಲಾಡದೆ ಕುಳಿತಿದ್ದಳು. ನಾವು ಹೊಟೆಲ್‌ನ ಬಾಗಿಲ ಬಳಿ ಹೋಗುತ್ತಿದ್ದಂತೆಯೆ ಆಕೆ, ನಾವು ಊರಿಗೆ ಹೊಸಬರೆನ್ನುವುದನ್ನು ಪತ್ತೆಹಿಡಿದೋ ಏನೋ, ನಮ್ಮನ್ನು ಕೈಮಾಡಿ ಕರೆದಳು. ಜೊತೆಗಿದ್ದ ದುಭಾಷಿ ಆಕೆಯ ಹತ್ತಿರ ಹೋಗಬಾರದೆಂದೂ, ಅಂಥವರು ಸಾಮಾನ್ಯವಾಗಿ ಅತಿಥಿಗಳ ಹಣ, ಕ್ಯಾಮೆರಾ ಇತ್ಯಾದಿಗಳನ್ನು ಕದಿಯುತ್ತಾರೆಂದೂ ನಮ್ಮನ್ನು ಎಚ್ಚರಿಸಿದ. ನಾನು ಅವಳಿಗೆ ಗಮನ ಕೊಡದೆಯೆ ಕುತೂಹಲದಿಂದ ಹತ್ತಿರ ಹೋಗುತ್ತಿದ್ದಂತೆಯೆ ಆಕೆ ತನ್ನ ರವಿಕೆಯೊಳಗಿಂದ ಪದಕವೊಂದನ್ನು ಹೊರತೆಗೆದು 'ಸ್ಟಾಲಿನ್, ಸ್ಟಾಲಿನ್' ಎಂದು ಹೆಮ್ಮೆಯಿಂದ ಹೇಳಿದಳು. ರಷಿಯನ್ ಮಿತ್ರರಲ್ಲಿ ವಿಚಾರಿಸಿದಾಗ ನನಗೆ ತಿಳಿದುಬಂದಿತು: ಹಿಂದೆ, ದೇಶದ ಜನಸಂಖ್ಯೆ ಕಡಿಮೆಯಿದ್ದಾಗ, ಹೆಚ್ಚು ಮಕ್ಕಳನ್ನು ಪಡೆದವರಿಗೆ ಸ್ಟಾಲಿನ್ ಇಂಥ ಪದಕಸಮೇತ ಪುರಸ್ಕಾರವನ್ನು ನೀಡುತ್ತಿದ್ದನಂತೆ. ಈಕೆ ಹನ್ನೆರಡು ಮಕ್ಕಳನ್ನು ಹೆತ್ತಿದ್ದರಿಂದ ಈಕೆಗೆ ಬಹುದೊಡ್ಡ ಪದಕವೆ ಸಿಕ್ಕಿತಂತೆ. ಜಿಪ್ಸಿ ವೃದ್ಧೆ ಅದನ್ನೆ ಈಗ ಎಲ್ಲರಿಗೂ ತೋರಿಸಿ ಬೀಗುತ್ತಿದ್ದಳು. ತನ್ನ ಕಥೆ ಅತಿಥಿಗಳಿಗೂ ತಿಳಿಯಿತೆಂದು ಕಂಡ ಬಳಿಕ ಆಕೆ ನನ್ನ ಬಳಿ ಗುಟ್ಟಾಗಿ ಭಿಕ್ಷೆ ಬೇಡಿದಳು. ನನಗೆ ಅರ್ಧ ಗಾಬರಿಯೂ ಅರ್ಧ ಸಂತೋಷವೂ ಆದುವು. ಗಾಬರಿಯೇಕೆಂದರೆ, ಕಮ್ಯುನಿಸ್ಟ್ ರಷಿಯಾದಲ್ಲಿ ಭಿಕ್ಷೆ ಬೇಡುವುದೂ ಕೊಡುವುದೂ ಶಿಕ್ಷಾರ್ಹ ಅಪರಾಧಗಳಾಗಿದ್ದವು. ಅದೆ ಹೊತ್ತಿಗೆ, ಕಮ್ಯುನಿಸ್ಟರ ಮಾರ್ಗದ ಬಗ್ಗೆ



ಕೆಲವೊಂದು ಮೂಲಭೂತ ಅನುಮಾನಗಳಿದ್ದ ನನಗೆ, ಸರ್ವಸಮಾನತೆಯನ್ನು ಸಾಧಿಸಿ, ಬಡತನವನ್ನು ಸಂಪೂರ್ಣ ಬಡಿದೋಡಿಸಿದ್ದೇವೆಂಬ ಅವರ ಮಾತು ಬರಿ ಬಡಾಯಿಯೆಂದು ತಿಳಿದು ಸಮಾಧಾನವಾಯಿತು. ನಾನೂ ಗುಟ್ಟಾಗಿ ಆ ಜಿಪ್ಸಿಗೆ ಒಂದಿಷ್ಟು ಹಣವನ್ನು ಕೊಟ್ಟೆ; ಆಕೆಯೂ ಅಷ್ಟೆ ಚುರುಕಾಗಿ ಯಾರ ಕಣ್ಣಿಗೂ ಕಾಣದಂತೆ ಅದನ್ನು ಜೇಬಿಗಿಳಿಸಿಕೊಂಡಳು. ಬ್ರೆಜ್ನೆವ್ ತನ್ನೆಲ್ಲ ಬಲವನ್ನು ಬಳಸಿ ಸ್ಟಾಲಿನ್‌ನ ನೆನಪೆ ಅಳಿಸಿಹೋಗುವಂತೆ ಆಳುತ್ತಿದ್ದ ಕಾಲವದು. ಆಗ ಎಲ್ಲೊ ಅಲ್ಲಿ ಇಲ್ಲಿ ಪರಮಾಪ್ತರ ನಡುವೆ ಪಿಸುಮಾತಿನಲ್ಲಿ ಸ್ಟಾಲಿನ್‌ನ ಪ್ರಸ್ತಾಪವಾಗುತ್ತಿತ್ತೆ ಹೊರತು ಸಾರ್ವಜನಿಕವಾಗಿ ಅವನ ಹೆಸರನ್ನೂ ಹೇಳುವಂತಿರಲಿಲ್ಲ. ಆಗ ಜನಸಾಮಾನ್ಯರಿರಲಿ ಕಮ್ಯುನಿಸ್ಟ್ ಪಕ್ಷದವರೂ ಸಹ ಆತ ಕೊಟ್ಟ ಪ್ರಶಸ್ತಿ - ಪದಕಗಳನ್ನು ತೋರಿಸಿ ಬೀಗುವುದು ಊಹೆಗೂ ಮೀರಿದುದಾಗಿತ್ತು. ಅಂಥ ಸಂದರ್ಭದಲ್ಲಿ ಆ ಜಿಪ್ಸಿ ಹೆಣ್ಣು ಇತಿಹಾಸದ ಬದಲಾವಣೆಗಳ ಪರಿವೆಯೆ ಇಲ್ಲದೆ ಬದುಕುತ್ತಿದ್ದಳು; ಬ್ರೆಜ್ನೆವ್ ಯುಗದಲ್ಲಿ ಸ್ಟಾಲಿನ್ ಯುಗವನ್ನು ನೆಚ್ಚಿಕೊಂಡಿದ್ದಳು. ಚರಿತ್ರೆಗೆ ಆಕೆಯನ್ನು ಸ್ಪರ್ಶಿಸಲು ಸಾಧ್ಯವಾಗಿರಲಿಲ್ಲ. ಚಾರಿತ್ರಿಕ ಅರ್ಥದಲ್ಲಿ ಆಕೆ ಕಾಲಾತೀತಳಾಗಿ ಜೀವಿಸಿಕೊಂಡಿದ್ದಳು.

ಹೀಗೆ ಚರಿತ್ರೆಯಿಂದ ಅಬಾಧಿತವಾಗಿರಬೇಕೆಂದರೆ ಒಂದೋ ಸದಾ ಸಂಚಾರಿಯಾಗಿರಬೇಕು; ಇಲ್ಲ ಇದ್ದಲ್ಲೆ ಇದ್ದುಬಿಡಬೇಕು. ಉದಾಹರಣೆಗೆ, ಕಲ್ಲುಬಂಡೆ ಬೆಟ್ಟಗಳಿಗೆ, ಮರಗಿಡಗಳಿಗೆ ನಮ್ಮ ರೀತಿಯ ಚಾರಿತ್ರಿಕ ಕಾಲದ ಕಲ್ಪನೆಯಿರುವುದಿಲ್ಲ. ಹಾಗೆಯೆ, ನೆಲೆಯೂರದೆ ನಿತ್ಯ ಅಲೆದಾಡುವ ಗೋಸಾಯಿ ಜಂಗಮರಿಗೂ ಸಹ. ಅಂಥವರಿಗೆ ಇಪ್ಪತ್ತನೆಯ - ಇಪ್ಪತ್ತೊಂದನೆಯ ಶತಮಾನಗಳ ಲೆಕ್ಕವೆ ಇರದಿರುವುದು ಸಾಧ್ಯ. ಆದರೆ ನಮ್ಮಂಥ ಸಂಸಾರಿಗಳು, ಮಾರುಕಟ್ಟೆಯಲ್ಲಿ ಕೊಳ್ಳುವವರು - ಮಾರುವವರು, ಶಾಲಾ ಕಾಲೇಜು ಕಚೇರಿಗಳಿಗೆ ಹೋಗುವವರಿಗೆ, ಅರ್ಥಾತ್ ಈ ನಾಗರಿಕತೆಯಿಂದ ಏನನ್ನಾದರೂ ಲಾಭ ಪಡೆಯುವವರಿಗೆ ಮತ್ತು ಏನಾದರೂ ಕೊಡುಗೆ ನೀಡುವವರಿಗೆ ನಮ್ಮ ಚಾರಿತ್ರಿಕ ಕಾಲದ ಪರಿವೆಯಿಲ್ಲದೆಯೆ ಆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಅಸಾಧ್ಯ.

ಚರಿತ್ರೆಯ ಕಾಲಕಲ್ಪನೆಯನ್ನು ಅನುಸರಿಸದ ಜನ ಭಾರತದಲ್ಲಿ ಹಿಂದೆ ದೊಡ್ಡ ಸಂಖ್ಯೆಯಲ್ಲಿದ್ದರು, ಮಾತ್ರವಲ್ಲ ಇಂದಿಗೂ ಇದ್ದಾರೆ. ಓದು ಬರಹ ಬರದಿದ್ದರೂ ತಮ್ಮದು ಯಾವ ದಶಕ ಯಾವ ಶತಮಾನವೆಂಬುದು ತಿಳಿಯದಿದ್ದರೂ ಇಂಥ ಜನರಿಗೆ ಇಂದು ಯಾವ ತಿಥಿ-ನಕ್ಷತ್ರ-ವಾರವೆಂಬುದರ ಅರಿವಿರುತ್ತದೆ. ಅಂದರೆ ಕಾಲದ ಹರಿವನ್ನು ಅಳೆಯಲು ಅವರು ಬಳಸುವ ಮಾನಗಳೆ ಬೇರೆ. ನಮ್ಮ ಕ್ಯಾಲೆಂಡರ್ ಅವರಿಗೆ ಗೊತ್ತಿಲ್ಲದಿದ್ದರೆ ಅವರ ಪಂಚಾಂಗ ನಮಗೆ ಗೊತ್ತಿರುವುದಿಲ್ಲ. ಹಾಗೆ

ಪಂಚಾಂಗದ ಕಾಲದಲ್ಲಿ ಬದುಕುತ್ತಿದ್ದವರಿಗೆ, ಎಪ್ಪತ್ತು-ಎಂಬತ್ತು ವರ್ಷಗಳ ಹಿಂದಿನ ತನಕವೂ, ತಾವು ಚಾರಿತ್ರಿಕ ಕಾಲಮಾನದ ಪ್ರಕಾರ ಇಪ್ಪತ್ತೊಂದನೆಯ ಶತಮಾನದಲ್ಲಿ ಬದುಕುತ್ತಿದ್ದೇವೆಂದು ತಿಳಿದುಕೊಳ್ಳುವ ಅಗತ್ಯವೂ ಇರಲಿಲ್ಲ. ಅಷ್ಟರಮಟ್ಟಿಗೆ ಅವರು ತಮ್ಮ ತಮ್ಮ ಪಾಡಿಗೆ ಬಾಳಿಕೊಂಡಿದ್ದರು. ಬ್ರಿಟಿಷರು ಬಂದು, ತಮ್ಮೊಡನೆ ಚಾರಿತ್ರಿಕ ಕಾಲಕಲ್ಪನೆಯನ್ನು ತಂದು, ಇಲ್ಲಿ ವರ್ಷಗಟ್ಟಲೆ ಅಧಿಕಾರ ಚಲಾಯಿಸಿದರೂ ಸಹ ಅವರಿಗೆ ಎಲ್ಲ ಭಾರತೀಯರನ್ನೂ ಸ್ಪರ್ಶಿಸಲಾಗಲಿ ಆಳಲಾಗಲಿ ಆಗಲಿಲ್ಲ. ಅಸಂಖ್ಯ ಜನ ಅವರ ಪ್ರಭುತ್ವಕ್ಕೆ ಯಾವ ರೀತಿಯಲ್ಲೂ ಒಳಪಡದಂತಿದ್ದರು. ಹಾಗಾಗಿಯೆ ಗಾಂಧಿಗೆ ಅವರನ್ನೆಲ್ಲ ಸಂಘಟಿಸಿ ಅಂಥದೊಂದು ಚಳವಳಿಯನ್ನು ಹೂಡಲು ಸಾಧ್ಯವಾಯಿತು.

ಚಾರಿತ್ರಿಕ ಕಾಲಕಲ್ಪನೆ ಆಧುನಿಕ ಪ್ರಭುತ್ವ ಹಾಗೂ ಆಧುನಿಕ ನಾಗರಿಕತೆಯ ರೂಪದಲ್ಲಿಯೂ ಪ್ರಕಟಗೊಳ್ಳುತ್ತದೆ. ಆಧುನಿಕ ಸರ್ಕಾರಿ ವ್ಯವಸ್ಥೆಗಳು ನಾಗರಿಕತೆಯ ಚಾರಿತ್ರಿಕ ಅಭಿವೃದ್ಧಿಯ ಕಲ್ಪನೆಯೊಂದನ್ನು ಕಟ್ಟಿಕೊಂಡು, ತಮ್ಮ ಪ್ರಜೆಗಳನ್ನೆಲ್ಲ ಅದಕ್ಕೆ ಬಗ್ಗಿಸಲು ಪ್ರಯತ್ನಿಸುತ್ತವೆ. ಇಂಥ ವ್ಯವಸ್ಥೆ ಜನ-ಸಮುದಾಯ-ದೇಶಗಳನ್ನು ಮುಂದುವರೆದವರು ಮತ್ತು ಹಿಂದುಳಿದವರು ಎಂದು ತನ್ನ ಮೂಗಿನ ನೇರಕ್ಕೆ ವಿಂಗಡಿಸಿ, ಹಿಂದುಳಿದವರನ್ನು ಮುಂದೆ ತರುವ ನೆಪದಲ್ಲಿ ಅವರನ್ನೂ ತನ್ನ ಅಡಿಯಾಳುಗಳಾಗಿಸಿಕೊಳ್ಳಲು ಹವಣಿಸುತ್ತಿರುತ್ತದೆ. ವ್ಯವಸ್ಥೆಯನ್ನು ಯಾವ ರೀತಿಯಲ್ಲೂ ಗಣಿಸದೆ, ಯಾವ ರೀತಿಯಲ್ಲೂ ಅದನ್ನು ಆಧರಿಸದೆ ಸಂಪೂರ್ಣ ಸ್ವಾವಲಂಬಿಗಳಾಗಿ ಬಾಳುತ್ತಿರುವ ಜನ-ಜನಾಂಗಗಳು ನಮ್ಮಲ್ಲಿ ಇಂದಿಗೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇಂಥವರನ್ನು ಒಲಿಸಿಕೊಳ್ಳಲೆಂದೆ ಸರ್ಕಾರಗಳು ಉಚಿತ ಧಾನ್ಯದವಸ, ಅಗ್ಗದರದ ಸಕ್ಕರೆ-ಸೀಮೆಎಣ್ಣೆಯಂತಹ ಕಾರ್ಯಕ್ರಮಗಳನ್ನು ರೂಪಿಸುವುದು; ಆ ಮೂಲಕವಾದರೂ ಅವರಿಗೆ ತಮ್ಮ ಅಸ್ತಿತ್ವವನ್ನು ಮಹತ್ವವನ್ನು ಮನದಟ್ಟು ಮಾಡಿಕೊಡಲು ಹೆಣಗುವುದು. ನಗರವಾಸಿಗಳು, ನೌಕರಸ್ಥರು, ಆಧುನಿಕ ನಾಗರಿಕತೆಯ ಭಾಗವಾಗಿರುವ ನಮಗಾದರೊ ನಮ್ಮ ದಿನನಿತ್ಯದ ವ್ಯವಹಾರ-ವಿಹಾರಗಳಲ್ಲಿ, ಸಂಬಳ-ಸಾರಿಗೆಗಳಲ್ಲಿ, ಬೆಲೆ-ತೆರಿಗೆಗಳಲ್ಲಿ ಸರ್ಕಾರದ ಅಸ್ತಿತ್ವ ಕ್ಷಣಕ್ಷಣಕ್ಕೂ ಕಾಣುತ್ತಿರುತ್ತದೆ; ಸರ್ಕಾರದ ಮೇಲಿನ ನಮ್ಮ ಅವಲಂಬನೆ ಪ್ರತಿಕ್ಷಣಕ್ಕೂ ಹೆಚ್ಚಾಗುತ್ತಿರುತ್ತದೆ. ಮೇಲೆ ವಿವರಿಸಿದಂಥವರಿಗೆ ಮಾತ್ರ ಎಷ್ಟೋ ಬಾರಿ ಸರ್ಕಾರದ ಅರ್ಥವೆ ತಿಳಿದಿರುವುದಿಲ್ಲ. ಆದರೆ, ಸರ್ಕಾರ ಅವರನ್ನು ಹೆಚ್ಚು ಹೆಚ್ಚು ಮುಟ್ಟುತ್ತಿದ್ದಂತೆ ಅವರಿಗೆ ತಾವು ಯಾವ ಶತಮಾನ ದಿನಮಾನದಲ್ಲಿ ಬದುಕುತ್ತಿದ್ದೇವೆಂಬ ಚಾರಿತ್ರಿಕ ಕಾಲಕಲ್ಪನೆಯೂ ಹೆಚ್ಚಾಗುತ್ತದೆ.



ಇಂಥ ಕಾಲಕಲ್ಪನೆಗಳಿಗೆ ರಾಜಕೀಯ ಆಯಾಮವೂ ಒಂದುಂಟು. ಉದಾಹರಣೆಗೆ, ನಾವಿಂದು ಹೆಚ್ಚು ಬದುಕುತ್ತಿರುವುದು ನಮ್ಮ ಪೂರ್ವಜರ ಕಲ್ಪನೆಯ ಕಾಲದಲ್ಲಲ್ಲ, ಬದಲಾಗಿ ಪಶ್ಚಿಮ ಸೃಷ್ಟಿಸಿದ ಕಾಲಕಲ್ಪನೆಯಲ್ಲಿ. ನಮ್ಮ ಪ್ರಸ್ತುತ ಅಭಿವೃದ್ಧಿಯ ಪರಿಕಲ್ಪನೆಗಳು ಬಹುಪಾಲು ಪಶ್ಚಿಮದವನ್ನು ಅನುಸರಿಸುವಂಥವೆ ಆಗಿವೆ. ನಾವು ಚರಿತ್ರೆಯಲ್ಲಿ ಮುಂದುವರಿದಿದ್ದೇವೆಯೊ ಇಲ್ಲ ಹಿಂದುಳಿದಿದ್ದೇವೆಯೊ ಎನ್ನುವುದನ್ನು ಪಶ್ಚಿಮದ ಮಾನದಂಡಗಳ ಮೂಲಕ ಅಳೆದುಕೊಳ್ಳುತ್ತಿರುತ್ತೇವೆ. ಇದರ ಅರ್ಥ ಇಷ್ಟೆ: ನಮ್ಮ ಪ್ರಗತಿ-ವಿಗತಿಗಳನ್ನು ನಾಗರಿಕತೆ-ಅನಾಗರಿಕತೆಗಳನ್ನು, ಅಂದರೆ ನಮ್ಮ ಇಡಿ ಯುಗಧರ್ಮವನ್ನು, ಆ ಮೂಲಕ ನಮ್ಮ ಮನೋಧರ್ಮವನ್ನು, ಪಶ್ಚಿಮವೆ ನಿಯಂತ್ರಿಸುತ್ತಿರುತ್ತದೆ. ಇದು, ಅಮೆರಿಕಾದಲ್ಲಿ ತಜ್ಞನೆಂದು ಹೆಸರು ಮಾಡಿದ ವೈದ್ಯನೊಬ್ಬ ಬಂದು ನಮ್ಮ ಪ್ರಧಾನಿಯವರ ಮಂಡಿಚಿಪ್ಪನ್ನು ಚಿಕಿತ್ಸೆ ಮಾಡುವುದರಿಂದ ಹಿಡಿದು, ನಮ್ಮದೊಂದು ಸರ್ಕಾರ ಯೋಗ್ಯವೊ ಅಯೋಗ್ಯವೊ ಎಂಬುದು ಅಮೆರಿಕಾದ ಅಧ್ಯಕ್ಷನ ಮೂಲಕ ನಿರ್ಣಯವಾಗುವುದರ ತನಕ ವ್ಯಾಪಿಸಿರುತ್ತದೆ. ಎಷ್ಟೋ ಬಾರಿ ನಮ್ಮ ದೇಶಗಳ ಒಳಗಿನ ಏಳು-ಬೀಳುಗಳಿಗೂ ಅಮೆರಿಕಾವೆ ಕಾರಣವಾಗಿರುತ್ತದೆ. ಇಪ್ಪತ್ತನೆಯ ಶತಮಾನದ ಬಹುಮುಖ್ಯ ವಿದ್ಯಮಾನಗಳಲ್ಲೊಂದಾದ ಕಮ್ಯುನಿಸ್ಟ್ ರಷಿಯಾ ಛಿದ್ರಗೊಂಡ ಹಿನ್ನೆಲೆಯನ್ನೆ ನೋಡಿ. ಅಮೆರಿಕೆಯ ಆಗಿನ ಅಧ್ಯಕ್ಷ ರೊನಾಲ್ಡ್ ರೀಗನ್, ಮುಂದೆಂದೊ ಒಂದುದಿನ ರಷಿಯಾದೊಡನೆ ಬಾಹ್ಯಾಕಾಶದಲ್ಲಿ ಕಾದಾಡುವ ಸಂಭವ ಬರಬಹುದು ಎನ್ನುವ ಹುಚ್ಚು ಕಲ್ಪನೆಯನ್ನು ನೆಪವಾಗಿಟ್ಟುಕೊಂಡು, ಅಪಾರ ವೆಚ್ಚದ 'ಸ್ಟಾರ್‌ವಾರ್ಸ್' ಯೋಜನೆಯನ್ನು ರೂಪಿಸಿದ. ಅದರಡಿ ಅಮೆರಿಕಾ ಇನ್ನಿಲ್ಲದಂಥ ಬಾಹ್ಯಾಕಾಶ ಕ್ಷಿಪಣಿ-ಅಸ್ತ್ರ-ಉಪಗ್ರಹ-ತಂತ್ರೋಪಕರಣಗಳನ್ನು ಉತ್ಪಾದಿಸಿತು. ಶಸ್ತ್ರಾಸ್ತ್ರ ಸ್ಪರ್ಧೆಯಲ್ಲಿ ಅದು ಅಷ್ಟು ಮೇಲುಗೈಯಾದುದನ್ನು ಕಂಡು ಕರುಬಿದ ಕಳವಳಗೊಂಡ ರಷಿಯಾ ಅದನ್ನು ಮೀರಿಸಲೆಂದು ತಾನೂ ಅಗಾಧ ಪ್ರಮಾಣದ ಹಣವನ್ನು ಅಂಥದೆ ಚಟುವಟಿಕೆಗಳಿಗೆಂದು ವ್ಯಯಿಸಿತು. ಕೊನೆಗೂ ಇಬ್ಬರೂ ಅನುಮಾನಿಸಿದಂತಹ ಘೋರ ಯುದ್ಧವೇನೂ ನಡೆಯಲಿಲ್ಲ. ಆದರೆ, ಇಡಿ ಪ್ರಕರಣದ ವ್ಯಂಗ್ಯವೆಂದರೆ, ಹೊರಗಿನ ಬಲವನ್ನು ಹತ್ತಿಪ್ಪತ್ತು ಪಟ್ಟು ಹೆಚ್ಚಿಸಿಕೊಂಡ ರಷಿಯಾ ಒಳಗಿನ ಬಲವನ್ನು ಸಂಪೂರ್ಣ ಕಳೆದುಕೊಂಡು ಕುಸಿದುಹೋಯಿತು. ಅಸ್ತ್ರಗಳಿಗೆ ಅಪಾರ ಹಣ ಸುರಿದ ಸರ್ಕಾರ ಪ್ರಜೆಗಳಿಗೆ ಆಹಾರ ಕೊಡಲಾಗದೆ, ಆಂತರಿಕ ಅಶಾಂತಿಗೆ ಹಾಗೂ ದೇಶ ವಿಭಜನೆಗೆ ತಾನೆ ಕಾರಣವಾಯಿತು; ಅನ್ಯ ರೀತಿಯಲ್ಲಿ ಬದುಕಹೊರಟು ಆತ್ಮನಾಶ ಕಂಡಿತು.

ಆಧುನಿಕ ಚೀನಾ ದೇಶದ್ದು ಮತ್ತೊಂದು ಬಗೆಯ ಕಥೆ. ಕ್ರಾಂತಿಯ ಉನ್ಮಾದ

ದಲ್ಲಿ ಮಾವೊ ತ್ಸೆ ತುಂಗ್ ಹೊಸ ಚೀನಾವೊಂದನ್ನು ಕಟ್ಟಲೆಂದು ಒಂದು 'ಲಾಂಗ್ ಮಾರ್ಚ್' ನಡೆಸಿದ. ಆದರೆ ಅವನ ಕನಸಿನ ಕೊನೆಯೂ ಅಮೆರಿಕಾವೆ ಆಗಿದ್ದರಿಂದ ಅದು ಅಂತಿಮವಾಗಿ 'ಲಾಂಗ್ ಮಾರ್ಚ್ ಟು ಕೊಕಾಕೋಲಾ' ವಾಗಿ ಮಾರ್ಪಟ್ಟಿತು.

ಹೀಗೆ, ಇಪ್ಪತ್ತನೆಯ ಶತಮಾನದಲ್ಲಿ ಎಷ್ಟೊಂದು ದೇಶಗಳು, ಎಷ್ಟೊಂದು ಜನ ಸಮುದಾಯಗಳು ಸ್ವಾತಂತ್ರ್ಯವನ್ನು ಗಳಿಸಿಕೊಂಡವು, ಹಾಗಾಗಿ ಅದು ಸ್ವಾತಂತ್ರ್ಯ ಸಮೃದ್ಧಿಯ ಶತಮಾನವಲ್ಲವೆ ಎಂದು ನಾವು ಸಂಭ್ರಮಿಸುತ್ತಿರುವಂತೆಯೆ, ಇದು ನಮ್ಮ ಭ್ರಮೆಯಷ್ಟೆ ಆಗಿರಬಹುದೆ ಎನ್ನುವ ಸಂದೇಹವೂ ಕಾಡತೊಡಗುತ್ತದೆ; ಶತಮಾನದ ಸತ್ಯದ ಮತ್ತೊಂದು ಮುಖ ಕಾಣತೊಡಗುತ್ತದೆ. ಇಪ್ಪತ್ತನೆಯ ಶತಮಾನದ ಕೊನೆಯ ಕೆಲವು ವರ್ಷಗಳಲ್ಲಂತೂ ಆ ಶತಮಾನದ ಚರಿತ್ರೆ ಹಾಗೂ ಸ್ವರೂಪವನ್ನು ಒಂದೆ ರಾಷ್ಟ್ರ ನಿರ್ಧರಿಸುತ್ತಿದೆ ಎನ್ನುವುದು ಸ್ಪಷ್ಟವಾಗಲಾರಂಭಿಸಿತು. ಹೀಗೆ, ಇಪ್ಪತ್ತನೆಯ ಶತಮಾನ, ನಾವು ನಮ್ಮ ನಮ್ಮ ಜೀವನಕ್ರಮಗಳನ್ನು ಅನುಸರಿಸುವ ಅವಕಾಶಗಳನ್ನು ಹಾಗೂ ನಮ್ಮ ನಮ್ಮ ಬಹುರೂಪಿ ಸಂಸ್ಕೃತಿಗಳನ್ನು ಕಾಪಾಡಿಕೊಳ್ಳುವ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ ಕಾಲಘಟ್ಟವೂ ಆಗಿದೆ; ಇದೀಗ ಪ್ರಾರಂಭವಾಗಿರುವ ಇಪ್ಪತ್ತೊಂದನೆಯ ಶತಮಾನ ಈ ಪ್ರಕ್ರಿಯೆಯನ್ನು ಮುಂದುವರೆಸಿ ಪೂರ್ಣಗೊಳಿಸುವಂತೆ ಕಾಣುತ್ತಿದೆ.

ಇಲ್ಲಿಯೂ ಒಂದು ದ್ವಂದ್ವವಿದೆ. ಈ ಎರಡು ಶತಮಾನಗಳ ಇಂಥ ಪ್ರಕ್ರಿಯೆಯಿಂದ ಬರಿಯೆ ಕೆಟ್ಟದ್ದೆ ಹೊರತು ಒಳ್ಳೆಯದೇನೂ ಸಾಧ್ಯವಿಲ್ಲ ಎಂದೇನಿಲ್ಲ. ಅದರಲ್ಲಿ ಒಳ್ಳೆಯದರ ಸಾಧ್ಯತೆಯೆ ಇಲ್ಲದಿದ್ದಲ್ಲಿ ಬಹುಜನರು ಅದನ್ನು ಹೀಗೆ ಆಶ್ರಯಿಸುತ್ತಿರಲಿಲ್ಲ. ಪ್ರತಿಷ್ಠಿತ ಹಾಗೂ ಅಧಿಕಾರಾರೂಢ ಸಂಗತಿ-ಶಕ್ತಿಗಳಿಗೆ ಯಾವಾಗಲೂ ಒಂದು ಆಕರ್ಷಣೆಯ ಗುಣವಿರುತ್ತದೆ. ಹಾಗೆಯೆ, ನಾವು ಕನಸಿನಲ್ಲಿ ಕಲ್ಪಿಸಿಕೊಂಡು ಹೇಳುವ ವಿಷಯಗಳಿಗೆ ಇನ್ನೊಂದೆ ರೀತಿಯ ಆಕರ್ಷಕ ಶಕ್ತಿಯಿರುತ್ತದೆ. ವಾಸ್ತವ ಹಾಗೂ ಕಲ್ಪನೆಗಳ ನಡುವೆ ಈ ವೈರುಧ್ಯ ಎಂದಿಗೂ ಸಮಸ್ಯಾತ್ಮಕವಾದುದು. ಬದುಕಿನ ಆದರ್ಶ ಕ್ರಮವೆಂದು ನಾವು ಕಲ್ಪಿಸಿಕೊಂಡದ್ದು ಒಂದಾಗಿರುತ್ತದೆ; ವಾಸ್ತವದಲ್ಲಿ ನಾವು ಬದುಕು ನಡೆಸುವ ಕ್ರಮ ಬೇರೆಯಾಗಿರುತ್ತದೆ. ಉದಾಹರಣೆಗೆ, ಟೆಲಿವಿಷನನ್ನು, ಅದರಲ್ಲಿಯ ಕಾರ್ಯಕ್ರಮಗಳನ್ನು ಎಷ್ಟೆ ಖಂಡಿಸಿದರೂ ಸಹ ನಾವು ಸಂಜೆ ಮನೆಗೆ ಮರಳುತ್ತಿದ್ದಂತೆಯೆ ಅದೆ ಕಾರ್ಯಕ್ರಮಗಳನ್ನು ನೋಡುತ್ತಾ ಗಂಟೆಗಟ್ಟಲೆ ಕಾಲ ಕಳೆಯುತ್ತೇವೆ. ಪಾಶ್ಚಿಮಾತ್ಯ ವಿಜ್ಞಾನವನ್ನು ಎಷ್ಟು ಟೀಕಿಸಿದರೂ ಕೂಡ ನಮ್ಮ ನಿತ್ಯಕ್ರಿಯೆಗಳಲ್ಲಿ ಅದಕ್ಕೆಯೆ ಜೋತುಬೀಳುತ್ತೇವೆ. ಅವರ ನಾಗರಿಕತೆಯನ್ನು ಚಿಂತನೆಯ ಸ್ತರದಲ್ಲಿ ತಿರಸ್ಕರಿಸುತ್ತಿರುವ ವೇಳೆಯಲ್ಲಿಯೆ



ಅದರ ಒಂದೊಂದೆ ಅಂಶವನ್ನು ಅಳವಡಿಸಿಕೊಳ್ಳುತ್ತಿರುತ್ತೇವೆ. ಎಷ್ಟೋ ಬಾರಿ ನಮಗೆ ವೈಯಕ್ತಿಕವಾಗಿ ಇಷ್ಟವಿಲ್ಲದ್ದನ್ನು ಮನೆಯವರಿಗಾಗಿ ಮಕ್ಕಳಿಗಾಗಿ ಸಹಿಸಿಕೊಂಡು ನಿಧಾನವಾಗಿ ಅದಕ್ಕೆ ಹೊಂದಿಕೊಳ್ಳಲಾರಂಭಿಸುತ್ತೇವೆ. ಹೀಗೆ ನಾವು ಬಹುಜನರು ಬದುಕು ಸಾಗಿಸುವ ಕ್ರಮದಲ್ಲಿಯೆ ಅನೇಕ ಅನ್ಯ ಸಂಸ್ಕೃತಿಗಳ ಸಂಗತಿಗಳಿಗೆ ವಾದಾತೀತವಾದ ಶಕ್ತಿಯೊಂದು ಲಭಿಸಿರುತ್ತದೆ.

ಹಿಂದೆ, ಅನ್ಯವನ್ನು ಹೀಗೆ ಒಳಬಿಟ್ಟುಕೊಳ್ಳುವುದನ್ನು ತಡೆಯುವ ಅನೇಕ ಕ್ರಮಗಳು ನಮ್ಮಲ್ಲಿದ್ದವು. ನಮ್ಮ ಪೂರ್ವಜರ ಮಡಿವಂತಿಕೆ, ಸಂಪ್ರದಾಯ ಶರಣತೆಗಳು ಅಂಥ ತಡೆಗೋಡೆಗಳಾಗಿದ್ದವು. ಇವನ್ನು ಭಾರತದ ಎಲ್ಲ ಜಾತಿಮತಗಳವರೂ ಪರಿಪಾಲಿಸುತ್ತಿದ್ದರು; ತಿನ್ನುವುದು-ಕುಡಿಯುವುದು, ಉಡುವುದು-ಕೊಡುವುದು ಇತ್ಯಾದಿಯಾಗಿ ಜೀವನದ ಎಲ್ಲ ಚಟುವಟಿಕೆಗಳಲ್ಲಿಯೂ ಇದನ್ನು ಅನುಸರಿಸುತ್ತಿದ್ದರು. ಆ ಮೂಲಕ, ಇಡಿಯ ವಿಶ್ವವೆ ಬಂದು ದಾಳಿಯಿಟ್ಟರೂ ಅದನ್ನು ಪ್ರತಿರೋಧಿಸುವಂತಹ ಶಕ್ತಿ ನಮ್ಮ ಸಮುದಾಯಗಳಿಗಿತ್ತು.

ಹಿಂದಿನ ಭಾರತ, ತಾನು ಯಾವ ಶತಮಾನದಲ್ಲಿ ಬದುಕಿದ್ದೇನೆ ಎನ್ನುವುದನ್ನು ಅರಿಯದ ಭಾರತ ಅನ್ಯದ ಅತಿಪ್ರಭಾವವನ್ನು ಹೀಗೆ ಶಿಷ್ಟತೆ-ಅಶಿಷ್ಟತೆ, ಸಭ್ಯತೆ-ಅಸಭ್ಯತೆ, ರುಚಿ-ಅರುಚಿಗಳ ಪರಿಕಲ್ಪನೆಗಳ ಮೂಲಕ ತಡೆಯಲೆತ್ನಿಸಿತ್ತು; '...ನ ಪ್ರಮದಿತವ್ಯಂ' 'ಇದನ್ನು ದಾಟತಕ್ಕದಲ್ಲ' ಎನ್ನುವಂತಹ ಬುದ್ಧಿ-ಭಾವ ಜನ್ಯವಾದ ನಿರ್ದೇಶನಗಳಿಂದ ತನ್ನನ್ನು ಕಾಪಾಡಿಕೊಳ್ಳಲೆತ್ನಿಸಿತ್ತು. ಆದರೆ ಆಧುನಿಕ ವೈಚಾರಿಕರಾದ ನಾವು ಅದನ್ನು ಸಂಕುಚಿತ ಮನೋಭಾವ ಎಂದು ಖಂಡಿಸಿದೆವು; ಅದನ್ನು ನಾಶಗೊಳಿಸಿ ಹೊಸದೊಂದು ಸಮಾಜವನ್ನು ಕಟ್ಟಲೆಳಸಿದೆವು. ಅಂದು ಹಾಗೆ ನಡೆದುಕೊಂಡದ್ದರ ಬಗ್ಗೆ ನನಗೆ ವಿಷಾದವೇನಿಲ್ಲ; ಅದು ಆ ಚಾರಿತ್ರಿಕ ಸಂದರ್ಭದ ಅನಿವಾರ್ಯತೆ ಯಾಗಿತ್ತೆಂದೆ ಭಾವಿಸುವವನು ನಾನು. ಆದಾಗ್ಯೂ, ಇಂದು ಬೇರೊಂದೆ ಗೊಂದಲ ನಮ್ಮನ್ನು ಕಾಡತೊಡಗಿದೆ; ಆಧುನಿಕ ಪಶ್ಚಿಮದ ಆಕ್ರಮಣದೆದುರು ನಮ್ಮ ನಮ್ಮ ಸ್ವಂತಿಕೆಯನ್ನು ಸಂರಕ್ಷಿಸಿಕೊಳ್ಳುವ ಕ್ರಮ ಯಾವುದಿರಬಹುದೆಂಬುದು ತೋಚದಾಗಿದೆ. ಮಾರ್ಕ್ಸ್‌ವಾದಕ್ಕೆ ಅಂಥ ಶಕ್ತಿಯಿದೆಯೆಂದು ನಾವು ಕೆಲವರು ಹಿಂದೊಮ್ಮೆ ನಂಬಿಕೊಂಡಿದ್ದುಂಟು. ಆ ಭ್ರಮೆ ಬಹುಬೇಗನೆ ಕಳೆದುಹೋಯಿತು; ಎಷ್ಟರಮಟ್ಟಿಗೆ ಎಂದರೆ ಸ್ವತಃ ಮಾರ್ಕ್ಸ್‌ವಾದವೇ ತನ್ನನ್ನು ಉಳಿಸಿಕೊಳ್ಳುವಲ್ಲಿ ಸೋತುಹೋಯಿತು. ಹೀಗೆ, ಹಿಂದೆ ನಿಜ ಕಾರಣಗಳಿಗಾಗಿಯೆ ಪರಂಪರೆಯನ್ನು ಧಿಕ್ಕರಿಸಿದ್ದ ನಮಗೆ ಇಂದು ಅದರ ಮತ್ತೊಂದು ಮಗ್ಗುಲು ಅರಿವಿಗೆ ಬರತೊಡಗಿದೆ; ಸಂಸ್ಕೃತಿಗಳಿಗೆ ರಾಜಕೀಯ ಶಕ್ತಿಯೂ ಇರುತ್ತದೆಯೆಂಬುದು ಅಸ್ಪಷ್ಟವಾಗಿಯಾದರೂ ಗೋಚರಿಸತೊಡಗಿದೆ.

••• ••• •••

ಕಳೆದ ಶತಮಾನದ ವಿದ್ಯಮಾನಗಳು ತಂದಿಟ್ಟ, ಈ ಶತಮಾನ ಇನ್ನಷ್ಟು ತೀವ್ರಗೊಳಿಸುತ್ತಿರುವ, ಇಂಥ ಸವಾಲುಗಳನ್ನು ಎದುರಿಸುವುದು ಹೇಗೆ? ನಮ್ಮ ಮನಸ್ಸು ಭಾಷೆ ಸಂಸ್ಕೃತಿ ಸ್ವಂತಿಕೆಗಳನ್ನು ಕಾಪಾಡಿಕೊಳ್ಳುವುದು ಹೇಗೆ?

ಇಂಥ ಬಿಕ್ಕಟ್ಟನ್ನು ಬಗೆಹರಿಸುವುದು ಕಡುಕಷ್ಟದ ಮಾತೆ ಹೌದು. ಈ ರೀತಿಯ ಸನ್ನಿವೇಶಗಳಲ್ಲಿ ಹಲವರು ಹಲವು ಬಗೆಗಳಲ್ಲಿ ಪ್ರತಿಸ್ಪಂದಿಸುವುದುಂಟು.

ಉದಾಹರಣೆಗೆ – ಕೆಲವು ತಿಂಗಳುಗಳ ಹಿಂದೆ ಅಮೆರಿಕಾದ ಹೂಸ್ಟನ್ ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನವೊಂದು ನಡೆಯಿತು. ಬಹುಪಾಲು ಬಲು ಶ್ರೀಮಂತರಾದ ಅಮೆರಿಕ ನ್ನಡಿಗರು ಸಹಜವಾಗಿಯೆ ಆ ಸಮಾರಂಭವನ್ನು ಆಯೋಜಿಸುವಲ್ಲಿ ಹೇರಳ ಹಣ ವ್ಯಯಿಸಿದ್ದರು. ಅಲ್ಲಿ ಸ್ವಲ್ಪ ಕಾಲ ಕಳೆಯುತ್ತಿದ್ದಂತೆಯೆ ನನಗೆ ವಿಚಿತ್ರ ಅನುಮಾನ ವೊಂದು ಕಾಡತೊಡಗಿತು. ಅತ್ಯುತ್ಸಾಹದಿಂದ ಕಾರ್ಯಕ್ರಮವನ್ನು ಸಂಘಟಿಸಿದ್ದ ಹಿರಿಯರಿಗೆಲ್ಲ ತಮ್ಮ ಮೂಲ ನಾಡು-ಭಾಷೆಗಳ ಬಗ್ಗೆ ಅತೀವ ಪ್ರೀತಿಯಿದ್ದುದೇನೊ ನಿಜ. ಆದರೆ ಅವರು ೧೯೫೦ -'೬೦ -'೭೦ರ ದಶಕಗಳಲ್ಲಿ ಇಲ್ಲಿ ಓದಿದ್ದ ಕನ್ನಡವನ್ನೆ ಪರಮ ಕನ್ನಡವೆಂದು ಭಾವಿಸಿಕೊಂಡಿದ್ದರು. ಆ ನಂತರದ ಕನ್ನಡದ ಬಗ್ಗೆ ಅವರಿಗೆ ಅರಿವಾಗಲಿ ಆಸಕ್ತಿಯಾಗಲಿ ಇದ್ದಂತೆ ತೋರಲಿಲ್ಲ. ಕನ್ನಡದ ಚಾರಿತ್ರಿಕ ಕಾಲಮಾನವನ್ನು ಅನುಸರಿಸಿ ಹೇಳುವುದಾದರೆ, ಅವರು ಗತ ಕನ್ನಡ ಕಾಲದಲ್ಲಿ ವಿಹರಿಸುತ್ತಿದ್ದರು, ಹರ್ಷಿಸುತ್ತಿದ್ದರು. ಇನ್ನು, ಅವರ ಮಕ್ಕಳು ಮೊಮ್ಮಕ್ಕಳು ಬಹುಪಾಲು ಹೊಂದಿದ್ದುದು ಕನ್ನಡದ ಪ್ರಾಥಮಿಕ ಪರಿಚಯವನ್ನು ಮಾತ್ರ. ಅದೂ ಕ್ರಮೇಣ ಸಂಪೂರ್ಣ ಅಳಿಸಿಹೋಗುವಂಥದ್ದೆ. ಇದೆ ರೀತಿ ಅಲ್ಲಿಯ ಭಾರತೀಯರು ತಮ್ಮ ಮೂಲ ಸಂಸ್ಕೃತಿ ಹಾಗೂ ದೇಶದ ನೆನಪನ್ನು ಉಳಿಸಿಕೊಳ್ಳಲೆಂದು ದಸರಾ ದೀಪಾವಳಿ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ. ಒಂದು ಅರ್ಥದಲ್ಲಿ, ತಮ್ಮ ಗುರುತನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಅವರಿಗೆ ಭಾಷೆಗಿಂತ ಧಾರ್ಮಿಕ ಆಚರಣೆಗಳು ಹಾಗೂ ದೇವಸ್ಥಾನಗಳೆ ಹೆಚ್ಚು ಮುಖ್ಯವಾಗಿವೆ. ಆ ದೇವಸ್ಥಾನಗಳೊ ಇಲ್ಲಿಯವರ ಕಣ್ಣಿಗೆ ಷಾಪಿಂಗ್ ಕಾಂಪ್ಲೆಕ್ಸ್‌ಗಳಂತೆ ಕಾಣುವುದುಂಟು. ಅಲ್ಲಿ ಶಿವನನ್ನು ಒಂದಿಷ್ಟು, ವಿಷ್ಣುವನ್ನು ಒಂದಿಷ್ಟು, ಗ್ರಹಗಳನ್ನು ಒಂದಿಷ್ಟು ಕೊಳ್ಳಬಹುದೆಂಬಂತೆ ತೋರುತ್ತದೆ. ಅಲ್ಲಿ ತೀರ್ಥ ಪ್ರಸಾದಗಳನ್ನು ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲಿ ಕೊಡುತ್ತಾರೆ; ಆ ದೇಗುಲಗಳು ಒಂದೆಡೆ ಸಾಂಪ್ರದಾಯಿಕ ಮಡಿಮೈಲಿಗೆಯ ಕಲ್ಪನೆಯನ್ನು ಬಿಟ್ಟುಕೊಟ್ಟಂತೆಯೂ, ಇನ್ನೊಂದೆಡೆ ಆಧುನಿಕ ಶುಚಿ-ಅಶುಚಿಗಳ ಮಡಿವಂತಿಕೆಗೆ ಅಂಟಿಕೊಂಡಂತೆಯೂ ತೋರುತ್ತವೆ.



ಆಸ್ಪತ್ರೆಗಳಂತೆ ಅತಿಸ್ವಚ್ಛವಾಗಿರುವ ಆ ದೇವಸ್ಥಾನಗಳಿಗೆ ನಮ್ಮ ಇಲ್ಲಿಯ ದೇವಸ್ಥಾನಗಳಿಗಿರುವ 'ಕಾರಣಿಕ' ಇರಲು ಸಾಧ್ಯವಿಲ್ಲ. ಅಂಥ ದೇವಸ್ಥಾನವಲ್ಲದ ದೇವಸ್ಥಾನಗಳ ಮೂಲಕವಾಗಿಯಾದರೂ ಅವರು ತಾವು ನಗಣ್ಯರಾಗುವುದನ್ನು ಅಮೆರಿಕೆಯಲ್ಲಿ ಅನಾಮಿಕರಾಗುವುದನ್ನು ತಡೆಯಲು ಯತ್ನಿಸುತ್ತಿರುತ್ತಾರೆ.

ಇದಕ್ಕೆ ತೀರಾ ಭಿನ್ನವಾದ ಇನ್ನೊಂದು ಮಾದರಿಯೂ ಉಂಟು. ವಿದೇಶಿ-ಭಾರತೀಯರಲ್ಲಿ ಮೂಲ ಗುಜರಾತಿಗಳ ಬಹುದೊಡ್ಡ ಸಮುದಾಯವೊಂದಿದೆ. ಈ ಗುಜರಾತಿಗಳು ಬಹುಮಟ್ಟಿಗೆ ಬಡ ಹಾಗೂ ಮಧ್ಯಮ ವರ್ಗಗಳಿಗೆ ಸೇರಿದವರು. ಚಾಕರಿ ಹುಡುಕಿ ಅನ್ಯ ದೇಶಗಳಿಗೆ ತೆರಳುವ ಇವರು ಅಲ್ಲಿ ನೆಲೆಯೂರಿ ನಿಂತ ಮೇಲೆ ತಮ್ಮ ಅಪ್ಪ-ಅಮ್ಮ-ತಮ್ಮ-ತಂಗಿ-ಭಾವ-ಮೈದುನರೆಲ್ಲರನ್ನೂ ತಮ್ಮಲ್ಲಿಗೆ ಕರೆಸಿಕೊಳ್ಳುತ್ತಾರೆ; ಎಲ್ಲ ಸೇರಿ ಅಂಗಡಿಗಳನ್ನು ಹೊಟೆಲ್‌ಗಳನ್ನು ಮೊಟೆಲ್‌ಗಳನ್ನು ನಡೆಸುತ್ತ – ಅಂದರೆ ಸರ್ವಸಾಮಾನ್ಯವಾಗಿ ದೈಹಿಕ ಶ್ರಮದ ಕೆಲಸ ಮಾಡುತ್ತ – ಯಥೇಚ್ಛ ಹಣ ಗಳಿಸುತ್ತಾರೆ. ಇಷ್ಟಾದರೂ ಅವರು ತಮ್ಮ ಮೂಲ ಗುಜರಾತಿ ಸಂಸ್ಕೃತಿಯನ್ನು ಕಳೆದುಕೊಳ್ಳುವುದಿಲ್ಲ. ಹಬ್ಬ ಹರಿದಿನಗಳು, ಮದುವೆಮುಂಜಿಗಳು ಹಾಡು ಕುಣಿತಗಳೆಲ್ಲದರಲ್ಲಿ ಅವರು ತಮ್ಮತನವನ್ನು ಬಹುಪಾಲು ಉಳಿಸಿಕೊಂಡಿರುತ್ತಾರೆ.

ಇವೆರಡು ಮಾದರಿಗಳನ್ನು ನೋಡುತ್ತ ನನಗೊಂದು ವಿಷಯ ಹೊಳೆಯಿತು. ನನ್ನ ಈ ಸೂತ್ರೀಕರಣದಲ್ಲಿ ಕೊಂಚ ಉತ್ಪ್ರೇಕ್ಷೆಯಿರುವುದು ನಿಜ; ಆದರೆ ಅದು ಸದ್ಯದ ವಾಸ್ತವವನ್ನು ಬಹು ಸೂಕ್ತವಾಗಿ ಪ್ರತಿಬಿಂಬಿಸುತ್ತದೆಯೆಂದು ನಾನು ತಿಳಿದಿದ್ದೇನೆ. ಆ ಸೂತ್ರ ಇದು: ನಮ್ಮಲ್ಲಿಯ ಬುದ್ಧಿವಂತರೆಲ್ಲ ಇಂದು ಹೆಚ್ಚಾಗಿ ಮೆಡಿಸಿನ್, ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್‌ಗಳಂತಹ ಆಧುನಿಕ ವೃತ್ತಿಕ್ಷೇತ್ರಗಳತ್ತ ವಾಲುತ್ತಿದ್ದಾರೆ. ಇಂಥ ವರ್ಗಕ್ಕೆ ತನ್ನ ಮೂಲ ಭಾಷೆಯನ್ನು ಉಳಿಸಿಕೊಳ್ಳುವ ಯಾವ ಅನಿವಾರ್ಯತೆಯೂ ಇಲ್ಲ. ಹಾಗೆ ನೋಡಿದರೆ, ತಮ್ಮ ತಮ್ಮ ಭಾಷೆಗಳನ್ನು ಬಿಟ್ಟು ಇಂಗ್ಲಿಷನ್ನು ಕಲಿಯುವುದರಲ್ಲಿಯೇ ಅವರಿಗೆ ಹೆಚ್ಚು ಲಾಭವಿರುವುದು. ಕನ್ನಡದಂತಹ ಭಾಷೆಗಳು ಇವರಿಗೆ ಯಾವ ರೀತಿಯಲ್ಲೂ ಜೀವನೋಪಾಯದ ಹಾಗೂ ಧನಸಂಪಾದನೆಯ ಮಾರ್ಗಗಳಾಗಲಾರವು. ಅದೆ ಮೇಲೆ ಪ್ರಸ್ತಾಪಿಸಿದ ಗುಜರಾತಿಗಳಂತೆ ಪಾರಂಪರಿಕ ವೃತ್ತಿಗಳಲ್ಲಿ ತೊಡಗಿಕೊಂಡವರಿಗೆ ತಮ್ಮ ಮೂಲ ಭಾಷೆಯನ್ನು ಬಿಟ್ಟುಕೊಡಬೇಕಾದಂತಹ ಲೌಕಿಕ ಒತ್ತಡವೇನಿಲ್ಲ.

ಹೀಗೆ, ವೃತ್ತಿಸಂಬಂಧಿ ಒತ್ತಡದಿಂದ ಪರಭಾಷೆಯನ್ನು ಆಧರಿಸಬೇಕಾದವರು ಸಾಮಾನ್ಯವಾಗಿ ಭಾವನಾತ್ಮಕ, ಇಲ್ಲ ಆಧ್ಯಾತ್ಮಿಕ ಪ್ರೇರೇಪಣೆಯಿಂದ ತಮ್ಮ ಸ್ವಂತ ಭಾಷೆಯನ್ನು ಹೇಗಾದರೂ, ಸಾಂಕೇತಿಕವಾಗಿಯಾದರೂ, ಉಳಿಸಿಕೊಳ್ಳಲು

ಹೆಣಗುತ್ತಾರೆ. ಹೀಗೊಂದು ಭಾಷೆಯನ್ನು ಉಳಿಸಿಕೊಂಡಲ್ಲಿ ಅದು ನಿಜವಾಗಿ ಉಳಿದಂತಾಗುವುದಿಲ್ಲ. ಅದು ದೈನಂದಿನ ವ್ಯವಹಾರ-ವೃತ್ತಿಗಳಲ್ಲಿ ಬಳಕೆಯಾದಾಗಲಷ್ಟೆ ನಿಜವಾಗಿ ಉಳಿದಂತಾಗುವುದು.

ಈ ಪ್ರಕ್ರಿಯೆಗೆ ಇನ್ನೂ ಒಂದು ಆಯಾಮವಿದೆ. ಇಪ್ಪತ್ತನೆಯ ಶತಮಾನದ ಬಹುಮುಖ್ಯವಾದೊಂದು ಧ್ಯೇಯ ಕಾರ್ಲ್‌ಮಾರ್ಕ್ಸ್‌ನ 'ಜಗತ್ತಿನ ಶ್ರಮಜೀವಿಗಳೆ, ಎಲ್ಲ ಒಂದಾಗಿ' ಎನ್ನುವ ಕರೆಯನ್ನು ಪ್ರತಿಧ್ವನಿಸುವಂಥದ್ದಾಗಿತ್ತು. ಈಗ, ಅದೆ ಶತಮಾನದ ಅಂತ್ಯಭಾಗದಲ್ಲಿ, ಆ ಧ್ಯೇಯ 'ಜಗತ್ತಿನ ಪ್ರತಿಷ್ಠಿತರೆ, ಪ್ರಬಲರೆ, ಎಲ್ಲ ಒಂದಾಗಿ' ಎಂದು ತಿರುಚಿಹೋಗಿರುವಂತೆ ತೋರುತ್ತಿದೆ. ಜಾಗತೀಕರಣದ ಒಂದು ಅಕಲ್ಪಿತ ಫಲವೆಂಬಂತೆ ಜಗತ್ತಿನ ಅಧಿಕಾರಸ್ಥರೆಲ್ಲ ಹೀಗೆ ಸಂಘಟಿತರಾಗಿರುವಂತಿದೆ. ಇದು ಯಾವ ನಿರ್ಣಾಯಕ ಹಂತವನ್ನು ಮುಟ್ಟಿದೆಯೆಂದರೆ, ಹಿಂದೆ ಇಡೀ ಜಗತ್ತನ್ನಾಳಿದ ಯುರೋಪಿನ ಒಳಗಡೆಯೆ ಇಂದು ಸಣ್ಣ ಸಣ್ಣ ಭಾಷೆಗಳು ತಮ್ಮ ಅಸ್ತಿತ್ವವನ್ನುಳಿಸಿಕೊಳ್ಳಲು ಸೆಣಸಾಡುತ್ತಿವೆ. ಇವು ಸಣ್ಣ ಸಮುದಾಯಗಳಿಗೆ ಸೇರಿದವಾದರೂ ಶ್ರೀಮಂತ ಭಾಷೆಗಳು. ಉದಾಹರಣೆಗೆ, ಕೆರ್ಕ್‌ಗಾರ್ಡ್‌ನಂತಹ ಧೀಮಂತ ಚಿಂತಕನನ್ನು ರೂಪಿಸಿದ ಡ್ಯಾನಿಷ್ ಭಾಷೆಯಾಡುವ ಡೆನ್ಮಾರ್ಕ್ ದೇಶ ಇಂದು ಯುರೋಪಿನ ಹೊಸ ಏಕರೂಪತೆಯ ಸಂಕೇತವಾದ ಯುರೊ ಡಾಲರ್ ವ್ಯವಸ್ಥೆಯನ್ನು ಪ್ರತಿಭಟಿಸುತ್ತಿದೆ. ಆರ್ಥಿಕ ಒಡಂಬಡಿಕೆಯ ಸಂಗತಿಯೊಂದು ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನೆ ಅಲುಗಾಡಿಸಬಹುದೆಂದು ಅಲ್ಲಿಯ ಜನ ಆತಂಕಗೊಂಡಿದ್ದಾರೆ. ಇವರ ಹೋರಾಟ ಎಷ್ಟು ದಿನ ನಡೆಯುತ್ತದೊ ಗೊತ್ತಿಲ್ಲ; ತೀವ್ರ ಪ್ರಯತ್ನದ ಹೊರತಾಗಿಯೂ ಅವರ ಭಾಷೆ ಉಳಿಯದೆಹೋಗಬಹುದು. ಅಂಥದೆ ಹೋರಾಟ ಪಕ್ಕದ ಬ್ರಿಟನ್‌ನಲ್ಲಿಯೂ ನಡೆಯುತ್ತಿದ್ದು, ಅಲ್ಲಿ ತಮ್ಮ ಸ್ವಂತಿಕೆಯನ್ನು ಸಂರಕ್ಷಿಸಿಕೊಳ್ಳಬೇಕೆನ್ನುವವರು ಬಹುಪಾಲು ಸಂಪ್ರದಾಯವಾದಿಗಳಾಗಿ ಬದಲಾಗಿದ್ದಾರೆ.

ಇದು ದುಃಖದ ವಿಷಯ; ಸ್ವಂತಿಕೆಯನ್ನು ಉಳಿಸಿಕೊಳ್ಳುವ ಸಮುದಾಯಗಳ ಹೋರಾಟದಲ್ಲಿ ಸಂಪ್ರದಾಯವಾದಿಗಳು ಪ್ರವೇಶಿಸಿದರೆಂದಲ್ಲಿ ಆ ಹೋರಾಟದ ಸತ್ವ ಹೆಚ್ಚು ಕಾಲ ಉಳಿಯಲಾರದು. ಬದಲಾಗಿ, ಇಂಥ ಬಯಕೆ ಇಂದು ಚೈತನ್ಯವನ್ನು ಪಡೆದುಕೊಂಡಿರುವ ಹೊಸ ವರ್ಗಗಳ ಮೂಲಕ ವ್ಯಕ್ತವಾದಾಗಲಷ್ಟೆ ಪರಂಪರೆಗಳನ್ನು ಕಾಪಾಡಿಕೊಳ್ಳಬಹುದು. ವಿಪರ್ಯಾಸವೆಂದರೆ, ಇಂದು, ಕನ್ನಡದ ಮಟ್ಟಿಗಂತೂ ಆರ್ಥಿಕ, ಬೌದ್ಧಿಕ, ಸಾಮಾಜಿಕ ಶಕ್ತಿಯಿರುವ ವರ್ಗಗಳು ಹೆಚ್ಚು ಸಾಫ್ಟ್‌ವೇರ್ ಕ್ಷೇತ್ರದೆಡೆಗೆ ಧಾವಿಸುತ್ತಿವೆ; ಕನ್ನಡಕ್ಕಂತ ಹೆಚ್ಚು ಇಂಗ್ಲಿಷ್ ಅನಿವಾರ್ಯವಾಗಿರುವ ರಂಗಕ್ಕೆ ಸಾಗುತ್ತಿವೆ. ಈ ವರ್ಗಗಳು ಅಂತಿಮವಾಗಿ ನಮ್ಮ ನಗರಕೇಂದ್ರಗಳಿಂದ



ಅಮೆರಿಕಾಕ್ಕೆ ವಲಸೆ ಹೋಗುತ್ತವೆ. ಇನ್ನು ಇಲ್ಲಿ ಹಿಂದೆ ಉಳಿದುಕೊಂಡ ಶ್ರಮಿಕವರ್ಗಗಳಲ್ಲಿ ಇಂಥ ಚೈತನ್ಯವನ್ನು ಸದ್ಯಕ್ಕಂತೂ ಕಾಣಲು ಸಾಧ್ಯವಿಲ್ಲ. ನಮ್ಮ ಪ್ರಸ್ತುತ ರಾಜಕಾರಣ ಅಂಥದೊಂದು ಪರಿಸ್ಥಿತಿಯನ್ನು ನಿರ್ಮಿಸಿ, ಅದನ್ನು ಪೋಷಿಸಿಕೊಂಡು ಬರುತ್ತಿದೆ. ವರ್ತಮಾನದ ಭಾರತದಲ್ಲಿ ಎಲ್ಲ ರೀತಿಯ ರಾಜಕೀಯ ಪಕ್ಷಗಳಲ್ಲೂ ಒಂದೊಂದು ರೈತ-ಕಾರ್ಮಿಕ ಸಂಘಟನೆಗಳಿರುವುದು ಹೌದಾದರೂ ಮೂಲಭೂತ ಪ್ರಶ್ನೆಗಳ ವಿಷಯದಲ್ಲಿ ಮಾತ್ರ ಅವು ಪಕ್ಷಭೇದವನ್ನು ಬಿಟ್ಟು ಒಂದೆ ರೀತಿಯ ಮಾತನ್ನಾಡತೊಡಗುತ್ತವೆ.

ಇಪ್ಪತ್ತನೆಯ ಶತಮಾನ ತಂದೊಡ್ಡಿರುವ ಈ ಬಹುದೊಡ್ಡ ಸವಾಲನ್ನು ಎದುರಿಸುವುದು ಹೇಗೆಂಬುದು ತೋಚದು. ಆ ದಿಕ್ಕಿನಲ್ಲಿ ಹಲವೆಡೆ ಹಲವು ರೀತಿಯ ಚಳುವಳಿಗಳು ನಡೆಯುತ್ತಿರುವವಾದರೂ ಆಧುನೀಕರಣದ ದೈತ್ಯ ಬಲದೆದುರು ಅವು ಬಹುಕಾಲ ನಿಲ್ಲುವಂತೆ ಕಾಣುತ್ತಿಲ್ಲ. ಕಾರಣ ಇಷ್ಟೆ: ಈ ಚಳುವಳಿಗಳೆಲ್ಲ ಬೇರೆಬೇರೆಡೆಯ ದುರ್ಬಲ ವರ್ಗಗಳು ಹೂಡಿದ ಹೋರಾಟಗಳಷ್ಟೆ ಹೊರತು ಅವು ಇಂದಿನ ಬಲಿಷ್ಠ ವರ್ಗಗಳೂ ಬೆಂಬಲಿಸುವಂತಹ ಹೋರಾಟಗಳಲ್ಲ. ಇವೆರಡು ವರ್ಗಗಳ ನಡುವಿರುವ ಸರ್ವಭೌತಿಕಸ್ತರಗಳ ಅಸಮಾನತೆಯೆ ಇಂಥ ಚಳವಳಿಗಳನ್ನು ಇಂದಲ್ಲ ನಾಳೆ ಖಂಡಿತ ಹಿಮ್ಮೆಟ್ಟಿಸುವಂತೆ ತೋರುತ್ತದೆ.

ಇಂಥ ಬಿಕ್ಕಟ್ಟುಗಳಿಗೆ ಕೊನೆಗೂ ಗಾಂಧಿಯ ಮಾರ್ಗವೊಂದೆ ಪರಿಹಾರವಾಗಬಲ್ಲದೆಂದು ಅನೇಕ ಬಾರಿ ಅನಿಸುತ್ತದೆ. ಗಾಂಧಿ ಇಂಥ ಸಮಸ್ಯೆಗಳಿಗೆ ಯಾವತ್ತೂ ಇಡಿಯಿಡಿಯಾಗಿ ಸ್ಪಂದಿಸುತ್ತಿದ್ದರು; ಅವುಗಳಿಗೆ ತತ್ಕಾಲೀನವೂ ಆಂಶಿಕವು ಆದ ಉತ್ತರಗಳ ಬದಲು ಪರ್ಯಾಯ ಜೀವನ ವಿಧಾನಗಳನ್ನೆ ಶೋಧಿಸಲು ಪ್ರಯತ್ನಿಸುತ್ತಿದ್ದರು. ನಮ್ಮ ಕಾಲದ ಒಂದು ದುರಂತವೆಂದರೆ, ಗಾಂಧಿಯಂತಹ ಅಖಂಡ ಪ್ರಜ್ಞೆಯುಳ್ಳ ನಾಯಕರ್‍ಯಾರೂ ಇಂದು ಇಲ್ಲ; ಹಾಗೆಯೆ, ಅಂಥವರಿದ್ದರೂ ಅವರನ್ನು ಕೇಳಿಸಿಕೊಳ್ಳುವ ತಾಳ್ಮೆ ನಮ್ಮ ಸಮುದಾಯಗಳಿಗಿಲ್ಲ. ಇಂದು ನಮ್ಮ ನಡುವಿರುವ ಹೆಸರಾಂತ ಸಾಧುಸಂತರೆಲ್ಲರೂ ಸಹ ಒಂದಲ್ಲ ಒಂದು ರೀತಿಯಲ್ಲಿ ಜಾಗತೀಕರಣವನ್ನು ಬೆಂಬಲಿಸುವವರೆ ಆಗಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಆಧ್ಯಾತ್ಮಿಕತೆಯ ಸರಕನ್ನು ಇನ್ನೂ ಹೆಚ್ಚು ಲಾಭಕ್ಕೆ ಮಾರಬಹುದೆಂಬ ಆಸೆ ಅವರದು; ಗಾಳಿಯಿಂದ ಚಿಲ್ಲರೆ ವಸ್ತುಗಳನ್ನು ಹೊರಗೆಳೆದು ತೆಗೆದು ಅಂಥ ಚಮತ್ಕಾರಗಳನ್ನೆ ಆತ್ಮಶಕ್ತಿಯೆಂಬಂತೆ ಮೆರೆಸುವ ಚಪಲ ಅವರದು. ನಾವೂ ಹಾಗೆಯೆ, ಬಹಳಷ್ಟು ಬಾರಿ ಆ ಬೂದಿಬಾಬಾಗಳ ನಿಜಸತ್ವಕ್ಕಿಂತ ಹೆಚ್ಚಾಗಿ ಅವರಿಗಿರುವ ವಿದೇಶಿ ಮನ್ನಣೆಯಿಂದಲೆ ಅವರನ್ನು ಅಳೆಯುವವರು ನಾವು.

ರಾಮಕೃಷ್ಣ ಪರಮಹಂಸರಂಥವರು ಇದಕ್ಕೆ ತದ್ವಿರುದ್ಧವಾಗಿದ್ದರು. ಯಾವ ಖ್ಯಾತಿಯನ್ನೂ ಬಯಸದೆ, ಯಾವ ಕ್ಷುಲ್ಲಕ ಚಳಕಗಳನ್ನೂ ಒಪ್ಪದೆ ಅವರು ಬಂಗಾಳದಲ್ಲಿ ತಮ್ಮಷ್ಟಕ್ಕೆ ತಾವು ಬದುಕಿಕೊಂಡಿದ್ದರು. ಪ್ರಾಚೀನ ಭಾರತೀಯ ಪರಂಪರೆಗಳ ಅತ್ಯುತ್ತಮವಾದೊಂದು ಪ್ರತೀಕವಾಗಿದ್ದ ಅವರು ಅತಿಸೀಮಿತ ಭೌಗೋಳಿಕ ವಲಯದಲ್ಲಿದ್ದುಕೊಂಡೆ ಹೊಸದೊಂದು ರೀತಿಯ ಜಾಗತಿಕ ಕಲ್ಪನೆಯನ್ನು ಕಟ್ಟಿಕೊಂಡವರಾಗಿದ್ದರು. ಆ ಕಾಲದಲ್ಲಿ ಪಾಶ್ಚಿಮಾತ್ಯ ಪ್ರಭಾವದಿಂದ ರೂಪುಗೊಂಡು, ಅತ್ಯಂತ ಆಧುನಿಕರು ತಾವು ಎಂದುಕೊಂಡಿದ್ದ ಬ್ರಹ್ಮ ಸಮಾಜದವರಿಗೆ ದೊಡ್ಡ ಸವಾಲಾಗಿದ್ದ ಅವರು ನಮ್ಮಂಥವರೊಡನೆ ಜೀವಂತ ಗಂಭೀರ ಸಂವಾದ ನಡೆಸಬಲ್ಲವರಾಗಿದ್ದರು.

••• ••• •••

ಇದಿಷ್ಟೆ ನಮ್ಮ ವಾಸ್ತವವೊ? ಇಲ್ಲ, ಭಾರತ ಕಳೆದ ಶತಮಾನದಲ್ಲಿ ಕೆಲವು ದೊಡ್ಡ ಸಾಧನೆಗಳನ್ನೂ ಮಾಡಿದೆ. ಈ ಕ್ಷಣಕ್ಕೆ ನನಗೆ ಹೊಳೆಯುವ ಇಂಥ ಒಂದೆರಡು ಸಾಧನೆಗಳು ಇವು:

ಮೊದಲನೆಯದಾಗಿ, ೧೯೪೭ರಲ್ಲಿ ಸ್ವಾತಂತ್ರ್ಯ ಪಡೆದ ಮರುಗಳಿಗೆಯಲ್ಲಿ, ಗಾಂಧಿ ಸ್ಫೂರ್ತಿಯ ನೆಹರೂ ಸರ್ಕಾರ ಸಾರ್ವತ್ರಿಕ ವಯಸ್ಕ ಮತದಾನದ ಪದ್ಧತಿಯನ್ನು ಜಾರಿಗೊಳಿಸಿದ್ದು ಬಹು ಮೌಲಿಕವಾದೊಂದು ಕ್ರಮವೆ ಹೌದು. ಇದು ಮುಂದೆ ಬೇರೆ ಅನೇಕ ಮಹತ್ವದ ಕ್ರಮಗಳಿಗೆ ಪ್ರೇರೇಪಣೆ ನೀಡಿತು ಕೂಡ. ಈ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವ ಮೊದಲು ಚರ್ಚೆ ನಡೆದಾಗ ನಮ್ಮ ಉಚ್ಚ ವರ್ಗದವರು, ವಿದ್ಯಾವಂತರು ಹೌಹಾರಿದ್ದುಂಟು; ಕೆಳವರ್ಗದವರು, ಅನಕ್ಷರಸ್ಥರು ರಾಜಕೀಯ ಹಕ್ಕನ್ನು ಪಡೆದುಕೊಂಡಲ್ಲಿ ದೇಶ ಸರ್ವನಾಶವಾಗುವುದು ನಿಶ್ಚಿತ ಎಂದು ಅವರು ವಾದಿಸಿದ್ದುಂಟು. ಆದರೆ ನಮ್ಮ ಹಿರಿಯರು ಅಂಥ ಆಕ್ಷೇಪಣೆಗಳಿಗೆ ಹೆಚ್ಚು ಕಿವಿಗೊಡದೆ, ಪ್ರಜಾಪ್ರಭುತ್ವದ ಮೂಲತತ್ವಗಳಿಗೆ ಬದ್ಧರಾಗಿ ನಡೆದುಕೊಂಡರು. ಇಂಥ ವ್ಯವಸ್ಥೆಯಲ್ಲಿ ತಪ್ಪುಗಳಾಗಲಿಲ್ಲ, ಆಗುತ್ತಿಲ್ಲ ಎಂದೇನಿಲ್ಲ. ಆದರೆ ಇಂಥವೆಲ್ಲ ಕ್ಷುಲ್ಲಕ ಕೊರತೆಗಳನ್ನು ಮೀರಿ ಈ ವ್ಯವಸ್ಥೆ ನಮ್ಮ ದೇಶಕ್ಕೆ ಸತ್ವಯುತವಾದೊಂದು ರಾಜಕೀಯ - ಸಾಮಾಜಿಕ ಚಾಲನೆಯನ್ನು ನೀಡಿತು ಎಂಬುದನ್ನು ಇಂದು ಯಾರೂ ಅಲ್ಲಗಳೆಯಲಾರರು. ಇದು ಪ್ರತಿಯೊಬ್ಬ ಪ್ರಜೆಗೂ 'ನಾನು ಈ ದೇಶದಲ್ಲಿ, ಅದರ ವರ್ತಮಾನ ಹಾಗೂ ಭವಿಷ್ಯದ ವಿದ್ಯಮಾನಗಳಲ್ಲಿ ನೇರವಾಗಿ ಭಾಗಿ' ಎನ್ನುವ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸಿತು.



ಸ್ವತಂತ್ರ ಭಾರತದ ಎರಡನೆಯ ದೊಡ್ಡ ಸಾಧನೆಯೆಂದರೆ – ಇಂದು ನಮಗದರ ಅರ್ಥ ಪೂರ್ಣವಾಗಿ ತಿಳಿಯದೆ ಹೋಗಬಹುದು – ಹರಿಜನರಿಗೆ ದೇವಾಲಯ ಪ್ರವೇಶದ ನಿರಾಕರಣೆಯನ್ನು ಕಾನೂನು ರೀತ್ಯಾ ಅಪರಾಧವೆಂದು ೧೯೪೭ರಷ್ಟು ಹಿಂದೆಯೇ ಘೋಷಿಸಿದ್ದು. ಅಂದು ಯಾವುದೊ ಮಾಂತ್ರಿಕತೆಯಿಂದೆಂಬಂತೆ ಜಾರಿಗೊಂಡ ಈ ಕಾನೂನೂ ಸಹ ನಮ್ಮ ಆಲೋಚನಾಕ್ರಮ ಹಾಗೂ ಜೀವನಶೈಲಿಗಳಲ್ಲಿ ಅನೇಕ ಮುಖ್ಯ ಬದಲಾವಣೆಗಳಿಗೆ ಕಾರಣವಾಯಿತು. ಊಹಿಸಿಕೊಳ್ಳಿ, ಅಂದು ಹಾಗಾಗದಿದ್ದಲ್ಲಿ ಇಂದು ಗುರುವಾಯೂರು ದೇವಸ್ಥಾನದವರು ಮಾಡುತ್ತಿರುವಂತೆ, ಪ್ರತಿಯೊಂದು ದೇವಸ್ಥಾನದ ಆಡಳಿತ ಮಂಡಳಿ-ಜಾತಿಯವರೂ ಆ ದೇವಸ್ಥಾನ ತಮ್ಮ ಖಾಸಗಿ ಸ್ವತ್ತೆ ಹೊರತು ಸಾರ್ವಜನಿಕ ಸ್ಥಳವಲ್ಲವೆಂದೂ, ಅನ್ಯರನ್ನು ಅಲ್ಲಿ ಬಿಟ್ಟುಕೊಳ್ಳುವುದು ಅಥವಾ ಬಿಡದಿರುವುದು ಸಂಪೂರ್ಣವಾಗಿ ತಮ್ಮ ವೈಯಕ್ತಿಕ ಇಷ್ಟಾನಿಷ್ಟಗಳನ್ನು ಅವಲಂಬಿಸಿದ್ದೆಂದೂ ಹಠ ಹಿಡಿಯಲು ಸಾಧ್ಯವಿರುತ್ತಿತ್ತು; ನ್ಯಾಯಾಲಯಕ್ಕೆ ಹೋಗಿ ತಮ್ಮ ನಿಲುವನ್ನು ಗೆಲ್ಲಿಸಿಕೊಳ್ಳಲು ಅವಕಾಶವಿರುತ್ತಿತ್ತು.

ಇವೆರಡನ್ನು ಹೊರತುಪಡಿಸಿದಂತೆ, ನಮ್ಮ ಮೌಲ್ಯವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವಂತಹ ಬೇರೆ ಯಾವುದೆ ಸಾಧನೆ ನಮ್ಮ ರಾಜಕಾರಣದಲ್ಲಾಯಿತೆಂದು ನನಗನಿಸುತ್ತಿಲ್ಲ. ಈ ಎರಡು ಮಹತ್ ಸಾಧನೆಗಳ ಹಿಂದೆ ಗಾಂಧಿ, ಠಾಕೂರ್, ಪ್ರೇಮ್‌ಚಂದ್, ಅಂಬೇಡ್ಕರ್‌ರಂಥವರಿದ್ದರು; ನಮ್ಮ ಕುವೆಂಪು, ಕಾರಂತ, ಮಾಸ್ತಿ, ಬೇಂದ್ರೆ, ಶ್ರೀರಂಗರಂಥವರಿದ್ದರು.

ಇದನ್ನು ಇನ್ನಷ್ಟು ವಿಶದವಾಗಿ ಹೇಳುವುದಾದರೆ – ನಮ್ಮ ಹಿರಿಯರನ್ನು ಎರಡು ರೀತಿಯ ಹಸಿವುಗಳು ಅತ್ಯಂತ ಗಾಢವಾಗಿ ಕಾಡಿವೆ: ಒಂದು, ಸಮಾನತೆಯ ಹಸಿವು; ಇನ್ನೊಂದು, ಆಧ್ಯಾತ್ಮಿಕತೆಯ ಅಥವಾ ದೇವರ ಹಸಿವು. ಕೆಲವರನ್ನು ಒಂದೊಂದೆ ರೀತಿಯ ಹಸಿವು ಬಾಧಿಸಿದ್ದರೆ, ಬಸವಣ್ಣ, ಅಕ್ಕ, ಅಲ್ಲಮ, ಕಬೀರ, ತುಳಸಿಯವರಂತಹ ಇನ್ನು ಕೆಲವರನ್ನು ಎರಡೂ ಒಟ್ಟೊಟ್ಟಿಗೆ ಕಾಡಿವೆ. ನಮ್ಮ ಯುಗಕ್ಕೆ ಬಂದರೆ, ಅಂಬೇಡ್ಕರ್ ಕೊನೆಗೆ ಬೌದ್ಧ ಧರ್ಮದತ್ತ ವಾಲಿದ್ದುದರಲ್ಲಿ ಎರಡೂ ಹಂಬಲಗಳು ಸಮಾನವಾಗಿ ಕೆಲಸ ಮಾಡಿದ್ದನ್ನು ಕಾಣಬಹುದು. ಇನ್ನು ಗಾಂಧಿಯಲ್ಲಂತೂ ಇವೆರಡು ಹಾತೊರೆತಗಳು ಭಿನ್ನವೆ ಅಲ್ಲ ಎನ್ನುವ ಕಡು ಶ್ರದ್ಧೆಯಿತ್ತು.

ಕೇವಲ ದೇವರ ಹಸಿವಿದ್ದವರು ವಿರಾಗಿಗಳಾಗಬಹುದು, ಇಲ್ಲ ಹಾಗೆ ತೋರಿಸಿಕೊಳ್ಳುವ ಪೊಳ್ಳು ಧರ್ಮಗುರುಗಳಾಗಬಹುದು. ಸಮಾನತೆಯ ಹಸಿವಷ್ಟೆ ಇದ್ದವರು ಲೆನಿನ್, ಸ್ಟಾಲಿನ್, ಮಾವೊರಂತೆ ಯಾವ ನೈತಿಕ ಭಯವೂ ಮಾನವಸಹಜ

ಲಜ್ಜೆಯೂ ಇಲ್ಲದಂತೆ ಅಮಾನುಷ ಕೃತ್ಯಗಳನ್ನೆಸಗುವ ರಾಕ್ಷಸರಾಗಿಬಿಡಬಹುದು. ಬದಲಾಗಿ, ಎರಡೂ ಹಸಿವೆಗಳು ಒಟ್ಟಿಗೆ ಕಾಡಿದಾಗ ಮಾತ್ರ ಗಾಂಧಿ, ಅಂಬೇಡ್ಕರ್, ಮಾರ್ಟಿನ್ ಲೂಥರ್‌ಕಿಂಗ್‌ನಂತಹ ಧೀಮಂತರು ಮೂಡಿಬರುತ್ತಾರೆ. ಇವರು ಇಪ್ಪತ್ತನೆಯ ಶತಮಾನದ ಅತ್ಯುತ್ತಮ ಪ್ರತೀಕಗಳೂ ಫಲಗಳೂ ಆಗಿರುವಂಥವರು.

ಇಂಥ ಪ್ರಕ್ರಿಯೆಗಳು ಹಾಗೂ ವ್ಯಕ್ತಿಪ್ರತಿಮೆಗಳಲ್ಲಿ ಯಾವುವು ಇಪ್ಪತ್ತೊಂದನೆಯ ಶತಮಾನದಲ್ಲೂ ಮುಂದುವರೆದು ಕಾಣಿಸಿಕೊಳ್ಳಬಹುದು ? ಗೊತ್ತಿಲ್ಲ.

••• ••• •••

ಒಂದು ಭಯ ನಮ್ಮನ್ನು ಇತ್ತೀಚೆಗೆ ಬಾಧಿಸತೊಡಗಿದೆ. ಇದು ಆಧುನಿಕ ರಾಷ್ಟ್ರ ಹಾಗೂ ಆಧುನಿಕ ಜಗತ್ತುಗಳೆಂಬ ಪರಿಕಲ್ಪನೆಗಳು ಹುಟ್ಟಿಸುವ ಭೀತಿಯಾಗಿದೆ. ಇದನ್ನು ತುಸು ವಿವರವಾಗಿ ನೋಡುವುದಾದರೆ –

ಊರಿನ ಕಲ್ಪನೆಯನ್ನು ಆಧರಿಸಿ ಆಕಾರ ತಳೆಯುವ ರಾಷ್ಟ್ರದ ಹಾಗೂ ಜಗತ್ತಿನ ಕಲ್ಪನೆಗಳು ಸಹಜವಾಗಿರುತ್ತವೆ, ಸುಖದಾಯಕವಾಗಿರುತ್ತವೆ. ಇದಕ್ಕೆ ಭಿನ್ನವಾಗಿ, ಊರನ್ನು ಕಡೆಗಣಿಸಿ ಕಟ್ಟಿದ ರಾಷ್ಟ್ರ ಹಾಗೂ ಜಗತ್ತಿನ ಕಲ್ಪನೆಗಳು ಅಸಹಜವೂ ಅಪಾಯಕಾರಿಯೂ ಆಗಿರುತ್ತವೆ. ಮೊದಲು ಊರೆಂದು ಒಂದಿರಬೇಕು; ಅದರ ಬಗ್ಗೆ ನಮಗೆ ಪ್ರೀತಿ ಕಾಳಜಿಗಳಿರಬೇಕು; ಅದರಲ್ಲಿಯ ಭಾಷೆಗಳು ಸಮುದಾಯಗಳು ಸಂಸ್ಕೃತಿಗಳು ನಮಗೆ ತಿಳಿದಿರಬೇಕು. ಹೀಗೆ ಊರುಗಳನ್ನು ಕಂಡವರು ದೇಶವನ್ನು ಜಗತ್ತನ್ನು ಕಟ್ಟುವಾಗ ಅವುಗಳನ್ನು ತಮ್ಮ ಊರಿನ ಮಾದರಿಯಲ್ಲಿಯೆ ಕಟ್ಟಲೆತ್ನಿಸುತ್ತಾರೆ. ನಮ್ಮಲ್ಲಿ ಗಾಂಧಿ ಹಾಗೂ ರವೀಂದ್ರನಾಥ ಠಾಕೂರರಂಥವರ ರಾಷ್ಟ್ರಕಲ್ಪನೆ ಈ ಬಗೆಯದಾಗಿತ್ತು. ಅವರಿಗೆ ಅವರವರ ಊರು, ಪ್ರಾಂತ್ಯ, ಭಾಷೆ, ಸಂಸ್ಕೃತಿಗಳ ಆಳ ಪರಿಚಯವಿತ್ತು, ಅವುಗಳ ಬಗ್ಗೆ ಗಾಢ ಪ್ರೀತಿಯಿತ್ತು. ಅವರ ಕಲ್ಪನೆಯ ರಾಷ್ಟ್ರ ಇವೆಲ್ಲವನ್ನೂ ಪೋಷಿಸುವಂಥದಾಗಿತ್ತೆ ಹೊರತು ನಾಶಮಾಡುವಂಥದಾಗಿರಲಿಲ್ಲ. ಅವರ ಊರಿನಲ್ಲಿ ಹಿಂದೂ-ಮುಸ್ಲಿಮ್-ಕ್ರೈಸ್ತರು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಲ್ಲ ಸೇರಿದ್ದರು; ಅಲ್ಲಿ ಎಲ್ಲ ರೀತಿಯ ಭಾಷೆ-ಕಸುಬು-ಕಲೆಗಳಿದ್ದವು. ಅವರ ಕಲ್ಪನೆಯ ರಾಷ್ಟ್ರ ಇದೆ ವೈವಿಧ್ಯವನ್ನು ಇನ್ನಷ್ಟು ವಿಸ್ತರಿಸುವಂತಿತ್ತು.

ರಾಷ್ಟ್ರೀಯತೆಯ ಬಗ್ಗೆ ಗಾಂಧಿ ಹಾಗೂ ಠಾಕೂರರ ನಡುವೆ ತೀವ್ರವಾದ ಭಿನ್ನಾಭಿಪ್ರಾಯಗಳೂ ಇದ್ದವು. ಆ ಕುರಿತು ಅವರು ನಡೆಸಿದ ಚರ್ಚೆ ಆಧುನಿಕ ಭಾರತದ ಅತ್ಯಂತ ಮಹತ್ವದ ವಾಗ್ವಾದಗಳಲ್ಲೊಂದಾಗಿದೆ. ಆದಾಗ್ಯೂ ಅವರಿಬ್ಬರ ರಾಷ್ಟ್ರಕಲ್ಪನೆಗಳಲ್ಲೂ ಊರೆ ಕೇಂದ್ರವಾಗಿತ್ತು. ಆ ಕಾರಣ ಅಂಥ ರಾಷ್ಟ್ರಕಲ್ಪನೆಯು



ಭಾರತವಷ್ಟೆ ಅಲ್ಲ ಇಡಿ ಜಗತ್ತೆ ಅನುಸರಿಸಬೇಕಾದಂತಹ ಮಾದರಿಯಾಗಿದೆ. ಅದೆ ಇನ್ನೊಂದೆಡೆ, ಊರನ್ನು ಬಿಟ್ಟುಕೊಟ್ಟು ಬರಿಯ ರಾಷ್ಟ್ರವನ್ನು ಕಟ್ಟಹೊರಟ ಯುರೋಪಿಯನ್ನರ ದುರಂತವನ್ನು ನೋಡಿ. ಆ ಪ್ರಯತ್ನ ಎರಡು ಮಹಾಯುದ್ಧಗಳಿಗೆ, ಹಿಟ್ಲರ್‌ನಂತಹ ದುರುಳನಿಗೆ ಮೂಲವಾಯಿತು. ಇತ್ತೀಚೆಗೆ, ತನ್ನನ್ನು ಕಮ್ಯುನಿಸ್ಟನೆಂದು ಕರೆದುಕೊಳ್ಳುವ ಮಿಲೊಸೆವಿಚ್ ಯುಗೊಸ್ಲಾವಿಯಾದಲ್ಲಿ ಸ್ಥಾಪಿಸಲೆತ್ನಿಸಿದ ರೀತಿಯ ರಾಷ್ಟ್ರ ವ್ಯವಸ್ಥೆ ಅಲ್ಲಿನ ಎಲ್ಲ ಜನರ ಸಂಕಷ್ಟಕ್ಕೆ ಕಾರಣವಾಯಿತು. ತಮ್ಮ ರಾಷ್ಟ್ರಕಲ್ಪನೆ ಎಷ್ಟು ವಿಚ್ಛಿದ್ರಕಾರಿಯಾದುದೆಂಬುದನ್ನು ಐರೋಪ್ಯರು ಇನ್ನೂ ಅರಿತುಕೊಂಡಿಲ್ಲ.

ಊರಿನ ಕಲ್ಪನೆ ಹಾಗೂ ರಾಷ್ಟ್ರದ ಕಲ್ಪನೆಗಳು ಕೆಲವೊಮ್ಮೆ ವಿಚಿತ್ರ ರೀತಿಯಲ್ಲಿ ಸಂಘರ್ಷಿಸುವುದೂ, ಹಾಗೆಯೆ ಕೆಲವೊಮ್ಮೆ ಸ್ನೇಹ ಬೆಳೆಸುವುದೂ ಉಂಟು. ನಾನು ೧೯೬೦ರ ದಶಕದಲ್ಲಿ ಬರ್ಮಿಂಗಮ್‌ನಲ್ಲಿ ಓದುತ್ತಿದ್ದಾಗ ಕೆಲವು ಪಾಕಿಸ್ತಾನಿಗಳು ಗೆಳೆಯರಾದರು. ಅವರೆಲ್ಲ ಹಿಂದೊಮ್ಮೆ ಕೆಲವರ್ಷಗಳ ಕಾಲ ಬೆಂಗಳೂರಿನಲ್ಲಿ ಇದ್ದರಂತೆ. ಆಗ ಆ ಊರಿನ ಬಗ್ಗೆ ಬೆಳೆದಿದ್ದ ಅತೀವ ಪ್ರೀತಿ ಅವರಲ್ಲಿ ಈಗಲೂ ಹಾಗೆಯೆ ಉಳಿದುಕೊಂಡಿತ್ತು. ಅವರು ಆಗಾಗ ನನ್ನಲ್ಲಿ 'ಬೆಂಗಳೂರಿನ ಆ ಬೀದಿ ಏನಾದರೂ ಬದಲಾಗಿದೆಯೊ ? ಆ ದೋಸೆ ಹೋಟೆಲ್ ಹಾಗೆಯೆ ಉಳಿದಿದೆಯೊ ? ಆ ಪಾನ್‌ಬೀಡಾ ಅಂಗಡಿ ಇನ್ನೂ ಇದೆ ತಾನೆ ?' ಎಂದು ಕೇಳುವುದಿತ್ತು. ಅವರು ಪಾಕಿಸ್ತಾನಿಗಳಾದರೂ, ಭಾರತ-ಪಾಕಿಸ್ತಾನಗಳ ನಡುವೆ ಆ ಕಾಲಕ್ಕಾಗಲೆ ತೀವ್ರ ವೈಷಮ್ಯ ಬೆಳೆದಿದ್ದರೂ, ಅವರಿಗೆ ಬೆಂಗಳೂರಿನ ಬಗ್ಗೆಯಿದ್ದ ಪ್ರೀತಿ ಮಾತ್ರ ಕಿಂಚಿತ್ತೂ ಕುಗ್ಗಿರಲಿಲ್ಲ. ಅದೆ ರೀತಿ ಅನೇಕ ಭಾರತೀಯರಿಗೆ ತಾವು ಹುಟ್ಟಿ ಬೆಳೆದ, ಇಂದಿನ ಪಾಕಿಸ್ತಾನದಲ್ಲಿ ಇರುವ, ಲಾಹೋರ್‌ನ ಬಗ್ಗೆ ಅಂಥದ್ದೇ ಪ್ರೀತಿ; ಅನೇಕ ಬಂಗಾಳಿಗಳಿಗೆ ಇಂದಿನ ಬಾಂಗ್ಲಾದೇಶದಲ್ಲಿರುವ ಢಾಕಾದ ಬಗ್ಗೆ ಅಷ್ಟೆ ಪ್ರೀತಿ. ಇಂದಿಗೂ, ತಮ್ಮ ಊರು ಲಾಹೋರೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಉತ್ತರ ಭಾರತೀಯರಿದ್ದಾರೆ; ತಮ್ಮ ಊರು ಢಾಕಾವೆಂದು ಹೇಳಿಕೊಳ್ಳುವ ಬಂಗಾಳಿಗಳಿದ್ದಾರೆ. ಇದು ಊರಿನ ಕಲ್ಪನೆ, ಊರಿನಿಂದ ಮೂಡಿಬರುವ ರಾಷ್ಟ್ರದ ಕಲ್ಪನೆ.

ಇದನ್ನು ನಾಶಗೊಳಿಸಿ ಬೇರೆಯೆ ರೀತಿಯ ರಾಷ್ಟ್ರಕಲ್ಪನೆಯನ್ನು ಮಾಡತೊಡಗಿದಾಕ್ಷಣ ನಾವು ಚರಿತ್ರೆಯ ಸತ್ಯಗಳನ್ನು ಮರೆಯಲಾರಂಭಿಸುತ್ತೇವೆ, ಇಲ್ಲ ಮರೆಮಾಚಲಾರಂಭಿಸುತ್ತೇವೆ. ಆಗ ಹಿಂದೂಗಳು ಮುಸ್ಲಿಮರನ್ನು ಪಾಶ್ಚಿಮಾತ್ಯರನ್ನು ಅಲಕ್ಷಿಸುವ ಅಥವಾ ಅವಹೇಳನ ಮಾಡುವ ರೀತಿಯ ಹೊಸದೊಂದು ಭಾರತ ರಾಷ್ಟ್ರ ಇತಿಹಾಸವನ್ನು ರಚಿಸತೊಡಗುತ್ತಾರೆ. ಅದೆ ರೀತಿ, ಮುಸ್ಲಿಮರು ಪಾಕಿಸ್ತಾನದ

ರಾಷ್ಟ್ರಕಲ್ಪನೆಯನ್ನು ಗಟ್ಟಿಗೊಳಿಸುವ ಸಲುವಾಗಿ ಹೊಸದೆ ಒಂದು ರಾಷ್ಟ್ರ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಇಂದಿನ ಪಾಕಿಸ್ತಾನದ ಪಠ್ಯಗಳಲ್ಲಿ ಅವರ ಚರಿತ್ರೆ ಪ್ರಾರಂಭವಾಗುವುದೆ ಮುಘಲ್ ಸಾಮ್ರಾಜ್ಯದಿಂದ; ಅಲ್ಲಿ ಗಾಂಧಿ, ನೆಹರೂ, ಅಂಬೇಡ್ಕರರು ಪಾಕಿಸ್ತಾನದ ಸ್ವಾತಂತ್ರ್ಯವನ್ನು ವಿರೋಧಿಸಿದ ದೇಶದ್ರೋಹಿಗಳು, ಬ್ರಿಟಿಷರ ಏಜಂಟರು. ಹೀಗೆ ಇಡೀ ಉಪಖಂಡದ ಚರಿತ್ರೆಯನ್ನು ಕುಗ್ಗಿಸದೆ ತಿರುಚದೆ ಆಧುನಿಕ ಭಾರತ ಹಾಗೂ ಪಾಕಿಸ್ತಾನಗಳಿಗೆ ತಂತಮ್ಮ ರಾಷ್ಟ್ರೀಯ ಚರಿತ್ರೆಗಳನ್ನು ಬರೆಯುವುದು ಸಾಧ್ಯವಾಗುವುದಿಲ್ಲ. ಹಿಂದೆ ಹಿಟ್ಲರ್ ಮಾಡಿದ್ದೂ ಇದನ್ನೆ. ಆತ ವಿಕೃತಗೊಳಿಸಿ ರಚಿಸಿದ ಜರ್ಮನಿಯ ಚರಿತ್ರೆಯಲ್ಲಿ ಜರ್ಮನರಷ್ಟೇ ಆರ್ಯರಾಗಿದ್ದರು, ಯೋಗ್ಯ ಮನುಷ್ಯರಾಗಿದ್ದರು. ಆತ ನಿಜ ಚರಿತ್ರೆಯಿಂದ ತನ್ನ ಸ್ವಾರ್ಥಕ್ಕೆ ಒಗ್ಗುವ ಕೆಲವು ಅಂಶಗಳನ್ನು ಆಯ್ದುಕೊಂಡ; ಒಗ್ಗದವುಗಳನ್ನು ತನ್ನ ಚರಿತ್ರೆಯಿಂದ ಉಚ್ಚಾಟಿಸಿದ; ಆ ಮೂಲಕ ತನ್ನ ಚರಿತ್ರೆಯನ್ನು ಬಲಗೊಳಿಸಿಕೊಂಡ. ಇದು ಆಧುನಿಕ ರಾಷ್ಟ್ರ ಚರಿತ್ರೆಗಳು ಕಲ್ಪಿತವಾಗುವ ಪರಿ. ಪ್ರಸ್ತುತ ಭಾರತದಲ್ಲಿ ಈ ರೀತಿಯಲ್ಲಿ ಇತಿಹಾಸವನ್ನು ಕಟ್ಟುವ ಕ್ರಮ ಹೆಚ್ಚು ಬಳಕೆಗೆ ಬರುತ್ತಿದೆ. ವಿಪರ್ಯಾಸವೆಂದರೆ, ಇಂಥ ಇತಿಹಾಸಗಳಲ್ಲಿ ಶಸ್ತ್ರಧಾರಿಗಳೂ ರಣಾಂಗಣಶೂರರೂ ಆದ ದೇವತೆಗಳು ಮತ್ತು ಮಾನವರು ಮಾತ್ರ ಇರುತ್ತಾರೆ; ಆಯುಧ ಹಿಡಿಯದವರಿಗೆ ಅಲ್ಲಿ ಸ್ಥಳವಿಲ್ಲ, ಸಂತರಿಗೆ ಅಲ್ಲಿ ಅಸ್ತಿತ್ವವಿಲ್ಲ.

ಜಾಗತೀಕರಣದ ಪ್ರಕ್ರಿಯೆ ಇಂಥ ಪೊಳ್ಳಾದ ಕ್ರೂರವಾದ ಚರಿತ್ರೆಯ ಕಲ್ಪನೆಗಳನ್ನು ಬೆಳೆಸಿ ಬಲಪಡಿಸುತ್ತದೆ. ಅಲ್ಲಿ ಊರು - ಹಳ್ಳಿಗಳ ನಿಜನೆಲೆಯ ಸಂಬಂಧಗಳಿಗೆ ಬೆಲೆಯೆ ಇರುವುದಿಲ್ಲ. ಉದಾಹರಣೆಗೆ, ನಮ್ಮ ನಮ್ಮ ಊರುಗಳಲ್ಲಿ ನಿತ್ಯಜೀವನದಲ್ಲಿ ನಾವು ನೂರಾರು ಮುಸ್ಲಿಮರನ್ನೂ ಕ್ರೈಸ್ತರನ್ನೂ ಕಾಣುತ್ತಿರುತ್ತೇವೆ; ಅವರನ್ನು ಮುಸ್ಲಿಮ ಅಥವಾ ಕ್ರೈಸ್ತರೆಂದು ತಿಳಿಯುವ ಮೊದಲೆ ನಾವು ಅವರಲ್ಲಿ ಒಬ್ಬನನ್ನು ಚಾಚಾನೆಂದು, ಇನ್ನೊಬ್ಬನನ್ನು ಅಜ್ಜನೆಂದು, ಒಬ್ಬಾಕೆಯನ್ನು ಅತ್ತೆಯೆಂದು, ಇನ್ನೊಬ್ಬಾಕೆಯನ್ನು ಅಕ್ಕನೆಂದು ಭಾವಿಸಿಕೊಂಡು ಪ್ರೀತಿಸುತ್ತಿರುತ್ತೇವೆ; ಅವರೂ ನಮ್ಮನ್ನು ಹಾಗೆಯೆ ಹಚ್ಚಿಕೊಂಡಿರುತ್ತಾರೆ. ಒಂದು ಪಕ್ಷ ಅವರಲ್ಲಿ ಕೆಲವರನ್ನು ದ್ವೇಷಿಸುವುದಾದರೂ ನಿಜ ಕಾರಣದಿಂದಲೇ ದ್ವೇಷಿಸುತ್ತೇವೆ. ಹೀಗೆ ಸಣ್ಣ ಊರುಗಳ ಸಾಮುದಾಯಿಕ ಜೀವನದಲ್ಲಿ ನಮ್ಮ ಪ್ರೀತಿ ಹಾಗೂ ದ್ವೇಷಗಳೆರಡಕ್ಕೂ ವಾಸ್ತವಿಕ ಕಾರಣಗಳಿರುತ್ತವೆ. ಇಂಥ ಸಾಮುದಾಯಿಕ ಸಂರಚನೆಯನ್ನು ಆಧರಿಸಿ ಕಟ್ಟಿದ ರಾಷ್ಟ್ರ ನಿಜಕ್ಕೂ ಹೃದಯವಂತಿಕೆಯಿಂದ ಕೂಡಿದ್ದಾಗಿರುತ್ತದೆ. ಅದೆ ಊರಿಗಿಂತ ರಾಷ್ಟ್ರವನ್ನು ಪ್ರಧಾನವೆಂದು ಪರಿಗಣಿಸಿದಾಕ್ಷಣ ನಮ್ಮ ಪ್ರೀತಿ-ದ್ವೇಷಗಳಿಗೆ ಯಾವುದೆ ಸತ್ಯದ



ಸ್ಪರ್ಶವಿಲ್ಲದೆ ಹೋಗಿ ಅವು ನಾವು ಕೃತಕವಾಗಿ ಕಲ್ಪಿಸಿಕೊಂಡ ಭಾವನೆಗಳಷ್ಟೆ ಆಗುತ್ತವೆ. ಆಗ ನಮ್ಮ ನಿತ್ಯದ ನಡವಳಿಕೆಯೂ ಅಷ್ಟೆ ಅಪ್ರಾಮಾಣಿಕವೂ ಅಸಹಜವೂ ಆಗಿ ಮಾರ್ಪಡುತ್ತದೆ. ಉದಾಹರಣೆಗೆ, ದೂರದ ಪಾಕಿಸ್ತಾನದ ನೆಪದಲ್ಲಿ ನಾವು ನಮ್ಮ ಸುತ್ತಮುತ್ತಲ ಎಲ್ಲ ಮುಸ್ಲಿಮರನ್ನೂ ಸಂಶಯಿಸತೊಡಗುತ್ತೇವೆ; ಅಮೆರಿಕಾವನ್ನು ಮೆಚ್ಚಿಸಲೆಂದು ಚೀನಾದೊಟ್ಟಿಗೆ ಹಗೆ ಕಟ್ಟಿಕೊಳ್ಳುತ್ತೇವೆ; ಅಥವಾ ಅರಬ್ ರಾಷ್ಟ್ರಗಳಿಂದ ಕೊಂಚ ಕಡಿಮೆ ಬೆಲೆಗೆ ಪೆಟ್ರೋಲ್ ದೊರಕಿಸಿಕೊಳ್ಳಬಹುದು ಎಂದು ಅನಿಸಿದ ತಕ್ಷಣ ಪಾಕಿಸ್ತಾನ ವಿರುದ್ಧದ ವೈರವನ್ನು ಸ್ವಲ್ಪ ತಗ್ಗಿಸಿಕೊಂಡಂತೆ ತೋರಿಸಿಕೊಳ್ಳುತ್ತೇವೆ.

ಇಂಥ ರಾಷ್ಟ್ರಕಲ್ಪನೆ ದೇಶಗಳ ಒಳಗಡೆಯೂ ಅನಾಹುತಗಳನ್ನು ಸೃಷ್ಟಿಸಬಹುದು. ಉದಾಹರಣೆಗೆ, ರಾಷ್ಟ್ರಕ್ಕೆ ತಾರಕವೆಂದು ಕಾಣುವ ನರ್ಮದಾ ಅಣೆಕಟ್ಟಿನಂತಹ ಬೃಹತ್ ಯೋಜನೆಗಳು ಊರುಗಳಿಗೆ ಮಾರಕವಾಗಿರುತ್ತವೆ. ಅಂಥಲ್ಲಿ ರಾಷ್ಟ್ರದ ಅಭಿವೃದ್ಧಿಗೆಂದು ಊರನ್ನು ಬಲಿಕೊಡುವುದು ದೊಡ್ಡದೊಂದು ಆದರ್ಶವೊ ಅನಿವಾರ್ಯತೆಯೊ ಆಗಿ ಕಾಣಿಸತೊಡಗುತ್ತದೆ. ಮೂರ್ತ ಊರುಗಳನ್ನು ಕಬಳಿಸುವ ಇಂಥ ಅಮೂರ್ತ ರಾಷ್ಟ್ರಕಲ್ಪನೆ ನಮ್ಮ ನಾಯಕರನ್ನೂ ತನ್ನ ಭ್ರಮಾಜಾಲದಲ್ಲಿ ಸೆರೆಹಿಡಿದಿಡುತ್ತದೆ. ಅವರು ಹಳ್ಳಿಯಲ್ಲಿ ದಿಲ್ಲಿಯನ್ನು ಧಿಕ್ಕರಿಸಿ ಮಾತನಾಡಿದರೆ ದಿಲ್ಲಿಗೆ ಹೋದಾಕ್ಷಣ ಹಳ್ಳಿಯನ್ನು ಅಲಕ್ಷಿಸುವಂತಹ ಮಾತನಾಡುತ್ತಾರೆ; ಇಲ್ಲಿ ಹಳ್ಳಿಯ ಹಿತವೆ ಮುಖ್ಯ ಎಂದವರು ಅಲ್ಲಿ ರಾಷ್ಟ್ರದ ಹಿತ ಅದಕ್ಕಿಂತ ಮುಖ್ಯ ಎನ್ನುತ್ತಾರೆ. ಅವರು ಹಾಗೆ ಪ್ರತಿಪಾದಿಸುವ 'ರಾಷ್ಟ್ರ' ಹಾಗೂ 'ಅಭಿವೃದ್ಧಿ'ಯ ಪರಿಕಲ್ಪನೆಗಳು ಆಳದಲ್ಲಿ ಆಧುನಿಕ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಪ್ರೇರಿತಗೊಂಡವು; ಆಧುನಿಕ ಭಾರತದ ಪ್ರತಿಷ್ಠಿತ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವಂಥವು.

ಪಶ್ಚಿಮದ ಇಂಥ ಮಾಯೆಗೆ ನಾವು ಜನಸಾಮಾನ್ಯರೂ ಮಾರುಹೋಗಿದ್ದೇವೆ. ನಮ್ಮ ಒಟ್ಟೂ ಸಮಾಜದ ಸಮಸ್ಯೆಯೆಂದರೆ, ನಾವು ಬಹಿರಂಗದಲ್ಲಿ ಪಶ್ಚಿಮವನ್ನು ಎಷ್ಟೇ ವಿರೋಧಿಸಿದರೂ ಕೂಡ ಅಂತರಂಗದಲ್ಲಿ ಮಾತ್ರ ಅವರ ಮಾದರಿಗಳನ್ನು ಮನ್ನಿಸುತ್ತಿರುತ್ತೇವೆ; ನಮಗೆಯೆ ಅರಿವಿಲ್ಲದೆ ಅವರ ರಾಷ್ಟ್ರ ಕಲ್ಪನೆ ಹಾಗೂ ಚರಿತ್ರೆಯ ಕಲ್ಪನೆಗಳನ್ನು ಅನುಸರಿಸುತ್ತಿರುತ್ತೇವೆ. ಊಟತಿಂಡಿ, ಉಡುಗೆತೊಡಿಗೆ, ಚಿಂತನೆ-ಕ್ರಿಯೆಗಳಲ್ಲೆಲ್ಲ ಅವರನ್ನು ಹೋಲುವ ಭರದಲ್ಲಿ ನಮ್ಮ ಅನನ್ಯತೆ ನಷ್ಟವಾಗುತ್ತಿರುವುದರ ಬಗ್ಗೆ ನಮಗೆ ಅಷ್ಟು ಎಚ್ಚರವಿರುವುದಿಲ್ಲ. ಉದಾಹರಣೆಗೆ, ಜಾಗತೀಕರಣದ ಹೆಸರಿನಲ್ಲಿ ಇಂದು ನಮ್ಮಲ್ಲಿ ನಡೆಯುತ್ತಿರುವುದು ಬಹುಪಾಲು ದೇಶೀಯ ಪರಂಪರೆಗಳ ನಿರ್ಲಕ್ಷ್ಯವೊ ನಾಶವೊ ಆಗಿದೆ. ಇಂದಿನ ಸಂದರ್ಭದಲ್ಲಿ ಬರಿಯೆ ಕನ್ನಡ-ಸಂಸ್ಕೃತಗಳನ್ನು ಕಲಿತವನು ಅಧ್ಯಾಪಕನಾಗುವುದು ದುಸ್ಸಾಧ್ಯವಾದ

ಮಾತು; ಅದೆ ಕೊಂಚ ಪಾಶ್ಚಿಮಾತ್ಯ ಸಾಹಿತ್ಯ-ಸಿದ್ಧಾಂತಗಳನ್ನು ತಿಳಿದಿದ್ದರೆ ಆತನಿಗೆ ಪ್ರಥಮ ಪ್ರಾಶಸ್ತ್ಯ ಲಭಿಸುತ್ತದೆ. ಈ ನಿಯಮ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರಗಳಿಗೂ ಅನ್ವಯಿಸುವಂತಹುದು.

ಪಶ್ಚಿಮ ನಮ್ಮನ್ನು ಹೀಗೆ ಸಮ್ಮೋಹಗೊಳಿಸಿದ್ದರಲ್ಲಿ ಪಾಶ್ಚಿಮಾತ್ಯ ವೈದ್ಯಕೀಯ ಶಾಸ್ತ್ರದ್ದೂ ದೊಡ್ಡದೊಂದು ಪಾಲುಂಟು. ಇಂದು ಇಡಿ ಜಗತ್ತಿನಲ್ಲಿ ಅದೊಂದೆ ವೈಜ್ಞಾನಿಕವಾದ ವೈದ್ಯಕೀಯ ಪದ್ಧತಿ ಎಂದಾಗಿಹೋಗಿ, ಉಳಿದ ವಿಭಿನ್ನ ಕ್ರಮಗಳಿಗೆ ಅಂಥ ಶಕ್ತಿ ಹಾಗೂ ಆಕರ್ಷಣೆಗಳು ಇಲ್ಲದಂತಾಗಿದೆ. ಹುಟ್ಟಿದವರೆಲ್ಲರೂ ಒಂದಲ್ಲ ಒಂದು ದಿನ ಸಾಯಲೆಬೇಕು. ಆದರೆ ಪಾಶ್ಚಿಮಾತ್ಯ ವೈದ್ಯಕೀಯ ವಿಜ್ಞಾನ ನಮ್ಮ ಸಾವನ್ನು ಸ್ವಲ್ಪ ಮಟ್ಟಿಗಾದರೂ ಮುಂದೂಡುವ ಭರವಸೆ ನೀಡಿ, ಹಾಗೆ ಮಾಡುವುದೆ ಸರ್ವೋತ್ತಮ ಸಾಧನೆಯೆಂಬ ಭ್ರಮೆಯನ್ನು ಮೂಡಿಸಿದೆ. ಇಂಥಲ್ಲಿ ಆ ವಿಜ್ಞಾನದ ಮೂಲಭೂತ ಗುಣ-ದೋಷಗಳಿಗಿಂತ ಅದರ ತತ್‌ಕ್ಷಣದ ಉಪಯುಕ್ತತೆಯೆ ಹೆಚ್ಚು ಚರ್ಚೆಯಾಗುತ್ತದೆ; ಅದೆ ಹೆಚ್ಚು ಮೌಲಿಕವಾದುದೆಂದು ನಂಬಿಕೆ ಬೆಳೆಯುತ್ತದೆ. ಹೀಗೆನ್ನುವಾಗ ನಾನು ಆಧುನಿಕ ವೈದ್ಯ ವಿಜ್ಞಾನವನ್ನು ಸಂಪೂರ್ಣವಾಗೇನೂ ಅಲ್ಲಗಳೆಯುತ್ತಿಲ್ಲ. ಅದರ ಶಕ್ತಿಯ ಒಂದು ಮುಖವನ್ನು ನಾನೆ ಪ್ರತ್ಯಕ್ಷ ಕಂಡಿದ್ದೇನೆ; ಎರಡು ವರ್ಷಗಳ ಹಿಂದೆ ಅದು ನನ್ನ ಸಹಾಯಕ್ಕೆ ಬರದಿದ್ದಲ್ಲಿ ಇಂದು ನಾನು ಇಲ್ಲಿ ನಿಮ್ಮ ನಡುವೆ ಇರುತ್ತಿರಲಿಲ್ಲ. ಹಾಗಿದ್ದೂ ಅದರ ಮತ್ತೊಂದು ಆಯಾಮಕ್ಕೆ ನಾವು ಕುರುಡಾಗುಳಿಯಬಾರದು. ಆಧುನಿಕ ವೈದ್ಯಕೀಯ ಶಾಸ್ತ್ರದ ಸಮಸ್ಯಾತ್ಮಕತೆ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸೀಮಿತವಾಗದೆ ಆರ್ಥಿಕ ಕ್ಷೇತ್ರಕ್ಕೂ ಪ್ರವೇಶಿಸಿದೆ. ನನ್ನ ಗೆಳೆಯನೊಬ್ಬ ಹೇಳುತ್ತಿದ್ದ: ಹಿಂದೆ ಮಧ್ಯಮ ವರ್ಗದವರು ತಮ್ಮ ಒಟ್ಟೂ ಆದಾಯದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಮಗನ ವಿದ್ಯಾಭ್ಯಾಸಕ್ಕೆಂದೂ ಇನ್ನೊಂದು ಲಕ್ಷವನ್ನು ಮಗಳ ಮದುವೆಗೆಂದೂ ತೆಗೆದಿಡುತ್ತಿದ್ದರು. ಈಗ ಅವುಗಳ ಜೊತೆ ಮತ್ತೊಂದು ಲಕ್ಷವನ್ನು ತಮ್ಮ ಹೃದಯ ಶಸ್ತ್ರಚಿಕಿತ್ಸೆಗೆಂದು ಮೀಸಲಾಗಿಡಬೇಕಾಗಿದೆ.

ಆಧುನಿಕ ಪಾಶ್ಚಿಮಾತ್ಯ ನಾಗರಿಕತೆ ಹೀಗೆ ನಮ್ಮ ದೇಹ ಬುದ್ಧಿ ಮನಸ್ಸುಗಳನ್ನು ಸಂಪೂರ್ಣವಾಗಿ ಸೆರೆಹಿಡಿದಿರುವಂತಿದೆ. ಈ ಪ್ರಕ್ರಿಯೆ ಹೀಗೆಯೆ ಅವ್ಯಾಹತವಾಗಿ ಮುಂದುವರೆದರೆ ನಮ್ಮ ಗತಿ ಏನಾಗಬಹುದು ?

ಇಲ್ಲಿ ನನ್ನ ಇನ್ನೋರ್ವ ಗೆಳೆಯ ಹೇಳಿದ ಪ್ರಸಂಗ ನೆನಪಾಗುತ್ತದೆ. ಭಾರತದಲ್ಲಿ ಹುಟ್ಟಿ ಬೆಳೆದು ಸದ್ಯ ಅಮೆರಿಕಾದಲ್ಲಿ ವರ್ತಕನಾಗಿ ನೆಲೆಸಿರುವ ಆತ ಇತ್ತೀಚೆಗೆ ವ್ಯವಹಾರ ನಿಮಿತ್ತ ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದ್ದನಂತೆ. ಮೊದಲಿನಿಂದಲೂ ಬೌದ್ಧ ಧರ್ಮದ ಬಗ್ಗೆ ಅಪಾರ ಆಸಕ್ತಿಯಿದ್ದ ಅವನಿಗೆ ಬೌದ್ಧ ಬಹುಸಂಖ್ಯಾಕವಾದ



ಆ ದೇಶದಲ್ಲಿ ಆ ಧರ್ಮದ ಖ್ಯಾತ ಪ್ರಾಚೀನ ಕೇಂದ್ರಗಳನ್ನು ಸಂದರ್ಶಿಸುವ ಹಂಬಲವಿತ್ತು. ವ್ಯಾಪಾರ ಚರ್ಚೆಯ ನಂತರ ಅವರು ಆ ಬಗ್ಗೆ ಅಲ್ಲಿಯ ಉದ್ಯಮಿಗಳಲ್ಲಿ ವಿಚಾರಿಸಿದರಂತೆ. ಆಗ ಆ ಉದ್ಯಮಿಗಳಿಂದ ಬಂದ ಉತ್ತರ ಆಘಾತಕಾರಿಯಾಗಿತ್ತು. ಮೊದಲನೆಯದಾಗಿ ಆ ಸ್ಥಳಗಳ ಹೆಸರುಗಳೆ ಅವರಿಗೆ ತಿಳಿದಿರಲಿಲ್ಲ; ನಂತರ ನಮ್ಮ ಸ್ನೇಹಿತರು ಆ ಹೆಸರುಗಳನ್ನು ಹೇಳಿ ಅವುಗಳ ಮಹತ್ವವನ್ನು ವಿವರಿಸಿದ ಮೇಲೂ ಅವರಿಗೆ ಅದರ ಅರ್ಥ ಮನದಟ್ಟಾಗಲಿಲ್ಲ. ಆ ಉದ್ಯಮಿಗಳು ಕೊನೆಗೆ ಹೇಳಿದರಂತೆ: 'ಕ್ಷಮಿಸಿ, ನಿಮ್ಮ ಅಮೆರಿಕೆಯ ಜೊತೆ ಆಧುನಿಕ ಅಭಿವೃದ್ಧಿಯ ಸ್ಪರ್ಧೆಗೆ ಇಳಿದ ಕ್ಷಣದಿಂದ ನಾವು ನಮ್ಮ ಭೂತಕಾಲವನ್ನೆಲ್ಲ ಉಚ್ಚಾಟಿಸಿದೆವು.' ನಿಜ, ಅವರು ಆ ನಂತರ ಕಾರು-ಟಿವಿ-ಫ್ರಿಜ್‌ಗಳನ್ನು ಮಾಡಿ ಎಲ್ಲವನ್ನೂ ಅಮೆರಿಕೆಗೆ ಮಾರಿದರು, ಹೇರಳ ಲಾಭ ಗಳಿಸಿಕೊಂಡರು; ಆದರೆ ಜೊತೆಗೆ ತಮ್ಮ ಪರಂಪರೆಯನ್ನು ಸ್ವಂತಿಕೆಯನ್ನು ಕಳೆದುಕೊಂಡರು. ಹೀಗೆ ಸ್ಮೃತಿಯನ್ನು ಕಳೆದುಕೊಂಡವರಿಗೆ ತಾವು ಸುಖಿಗಳೊ ಇಲ್ಲ ದುಃಖಿಗಳೊ ಎನ್ನುವ ಪ್ರಜ್ಞೆಯೂ ಇರುವುದಿಲ್ಲ. ಒಂದು ಅರ್ಥದಲ್ಲಿ ಸುಖ-ದುಃಖಗಳ ನಡುವಿನ ವ್ಯತ್ಯಾಸವನ್ನು ಮರೆತವರಿಗೆ ಮಾತ್ರ ಹಾಗೆ ಒಂದೇ ಸಮನೆ ದುಡ್ಡು ಮಾಡಲು ಸಾಧ್ಯ.

ಸ್ವಾರಸ್ಯವೆಂದರೆ, ಹೀಗೆ ಬೇರೆಲ್ಲರ ಜೀವನ ಶೈಲಿಗಳನ್ನು ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ನಿರ್ಧರಿಸುವ ಅಮೆರಿಕನ್ನರು ತಮ್ಮ ಜೀವನ ಕ್ರಮವನ್ನು ನಿರ್ಧರಿಸುವ ಶಕ್ತಿಯನ್ನು ಮಾತ್ರ ತಮ್ಮಲ್ಲೆ ಇಟ್ಟುಕೊಂಡಿರುತ್ತಾರೆ. ಬೇರೆ ಬೇರೆ ದೇಶಗಳ ಉತ್ಕೃಷ್ಟ ಅಂಶಗಳನ್ನೆಲ್ಲವನ್ನೂ ಅವರು ತಮ್ಮಲ್ಲಿಗೆ ತರಿಸಿಕೊಂಡು ರುಚಿ ನೋಡಿ ಆನಂದಿಸುತ್ತಾರೆ. ಅವೆಲ್ಲವೂ ಅವರಿಗೆ 'ಎತ್ನಕ್ ಐಟಂ'ಗಳು – ಎತ್ನಿಕ್ ಭಾರತೀಯ ಸಂಗೀತ, ಎತ್ನಿಕ್ ಚೈನೀಸ್ ಆಹಾರ, ಎತ್ನಿಕ್ ಆಫ್ರಿಕನ್ ನೃತ್ಯ ಇತ್ಯಾದಿಯಾಗಿ. ಅಂದರೆ, ಅವರ ದೃಷ್ಟಿಯಲ್ಲಿ ತಾವು ಮಾತ್ರ ನಾಗರಿಕರು, ಶಿಷ್ಟರು, ಮಾನವಕುಲದ ಪ್ರಧಾನಧಾರೆಯವರು; ಉಳಿದವರೆಲ್ಲರೂ ತುಸು ಅ-ಶಿಷ್ಟ ತುಸು ವಿಲಕ್ಷಣವಾದವರು. ಇಂದಿನ ಬೌದ್ಧಿಕ ವಲಯಗಳಲ್ಲಿ 'ಎತ್ನಿಕ್' ನಷ್ಟು ಹೊಲಸಾದ ಪದ ಮತ್ತೊಂದಿಲ್ಲವೆಂದೆ ನನ್ನ ನಂಬಿಕೆ. ಇಂದು ಬಳಕೆಯಾಗುತ್ತಿರುವ ರೀತಿಯಲ್ಲಿ ಆ ಪದ ತನ್ನ ಸೊಕ್ಕನ್ನೂ ಅನ್ಯರ ಬಗ್ಗೆ ಅಗೌರವವನ್ನೂ ಪ್ರಕಟಿಸುವಂಥದ್ದು. ನಿಜವಾಗಿ ನೋಡಿದರೆ, ಅಮೆರಿಕನ್ನರಿಗೆ ನಾವು ಎತ್ನಿಕ್ ಆದಂತೆ ನಮಗೆ ಅವರು ಎತ್ನಿಕ್ ಹೌದು. ಬಿಲ್ ಕ್ಲಿಂಟನ್‌ನ ಲೈಂಗಿಕ ಹಗರಣವನ್ನೆ ತೆಗೆದುಕೊಳ್ಳಿ. ಅದು ಭಾರತೀಯರ ಕಣ್ಣಿಗೆ ಹೀಗೆ ಕಾಣಲು ಸಾಧ್ಯ: ಅಮೆರಿಕನ್ ಬುಡಕಟ್ಟು ಜನಾಂಗದಲ್ಲಿ ರಾಷ್ಟ್ರನಾಯಕನೋರ್ವ ಇಂಥ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವುದು ತಪ್ಪೇನಲ್ಲ; ಇದು ಆ ಬುಡಕಟ್ಟಿನ

ಸಹಜ ನಡವಳಿಕೆ.

ಅನ್ಯವಾದ್ದೆಲ್ಲವನ್ನೂ ಅರೆಕರುಣೆ ಅರೆಅಲಕ್ಷ್ಯದಿಂದ ಕಾಣುವ ಪಶ್ಚಿಮ ಇನ್ನು ಕೆಲವೊಮ್ಮೆ ಅದನ್ನು ಅಹಂಕಾರದಿಂದ ಕಾಣುವುದೂ ಉಂಟು. ಇಂಥ ಸೊಕ್ಕು ಪಾಶ್ಚಿಮಾತ್ಯರಲ್ಲಷ್ಟೆ ಅಲ್ಲದೆ ಪಶ್ಚಿಮೀಕೃತ ಪೌರ್ವಾತ್ಯರಲ್ಲೂ ಕಾಣಸಿಗುತ್ತದೆ. ಭಾರತ-ಸಂಜಾತ ಸಲ್ಮಾನ್ ರಷ್ದಿ ಭಾರತೀಯ ಸಾಹಿತ್ಯದ ಬಗ್ಗೆ ಹೇಳಿದ್ದನ್ನೆ ನೋಡಿ. ಆತನ ಪ್ರಕಾರ ಭಾರತೀಯರು ಆಂಗ್ಲ ಭಾಷೆಯಲ್ಲಿ ಬರೆದದ್ದು ಮಾತ್ರ ಸಾಹಿತ್ಯ, ಭಾರತದ ಪ್ರಾಂತೀಯ ಭಾಷೆಗಳಲ್ಲಿ ಬಂದದ್ದು ಯಾವುದೂ ಸಾಹಿತ್ಯವಲ್ಲ. ಆ ವಿಷಯದಲ್ಲಿ ವಿನೋದದ ಪ್ರಸಂಗವೊಂದು ನಡೆಯಿತು. ರಷ್ದಿಯ ಹೇಳಿಕೆಗೆ ಪ್ರತಿಕ್ರಿಯಿಸಿ ಮಾತನಾಡಲು ಅಮೆರಿಕೆಯ ಕಾರ್ನೆಲ್ ವಿಶ್ವವಿದ್ಯಾನಿಲಯ ದವರು ನನ್ನನ್ನು ಕರೆದಿದ್ದರು. ಸಭೆಯಲ್ಲಿ ನಾನು ಮಾತನಾಡಲೆಂದು ಎದ್ದು ನಿಂತೆ. ವಿಷಯದ ನೆನಪಿತ್ತು, ವ್ಯಕ್ತಿಯ ನೆನಪು ಮಾತ್ರ ಇರಲಿಲ್ಲ. ಕೆಲ ಕ್ಷಣ ಪರದಾಡಿದ ನಂತರ ಸಭಿಕರೆ ನನಗೆ ಆತನ ಹೆಸರನ್ನು ನೆನಪಿಸಿಕೊಟ್ಟರು. ಅದನ್ನೆ ಬಳಸಿಕೊಂಡು ನಾನು ನೆರೆದಿದ್ದವರಿಗೆ ಹೇಳಿದೆ: 'ನೋಡಿ, ನಾನು ಅವನ ಹೆಸರನ್ನು ಹೀಗೆ ಮರೆತುಬಿಡುವಷ್ಟು ಕ್ಷುಲ್ಲಕನಾತ.' ನಮ್ಮ ದೇಶಭಾಷೆಗಳ ಠಾಕೂರ್, ಪ್ರೇಮ್‌ಚಂದ್, ಕಾರಂತ, ಬೇಂದ್ರೆ, ಮಾಸ್ತಿ, ಕುವೆಂಪುರಂಥವರನ್ನು ತಿಳಿಯದೆ ಇಂಥ ಠೇಂಕಾರದ ಮಾತುಗಳನ್ನಾಡುವ ಸಂಕುಚಿತ ಮನೋಭಾವದ ವ್ಯಕ್ತಿಯ ಬಗ್ಗೆ ನಮಗೆ ಕಿಂಚಿತ್ತು ಗೌರವವೂ ಮೂಡುವುದು ಅಸಾಧ್ಯ. ಅಷ್ಟಕ್ಕೂ ರಷ್ದಿಯ ಅಭಿಪ್ರಾಯವನ್ನು ಗಮನಿಸಿ ಗಣಿಸುವವರಾದರೂ ಯಾರು? – ಇಂಗ್ಲಿಷ್ ಪತ್ರಿಕೆಗಳನ್ನಷ್ಟೆ ಓದುವವರು, ಇಂಗ್ಲಿಷ್ ಸರ್ವಸ್ವವೆಂದು ಬಗೆಯುವವರು.

ಇಂಥದೆ ಇನ್ನೊಂದು ಪ್ರಸಂಗವನ್ನು ನಾನು ದೆಹಲಿಯಲ್ಲಿ ದೇಶದ ಪ್ರತಿಷ್ಠಿತ ಸಂಸ್ಥೆಯಾದ ನೆಹರೂ ಸೆಂಟರ್‌ನಲ್ಲಿ ಎದುರಿಸಬೇಕಾಗಿಬಂದಿತು. ಅಲ್ಲಿ ಸಭೆಯೊಂದರಲ್ಲಿ, ರವೀಂದ್ರನಾಥ ಠಾಕೂರರನ್ನು ಒಳಗೊಂಡು ಅನೇಕ ಬಂಗಾಳಿ ಲೇಖಕರನ್ನು ಇಂಗ್ಲಿಷಿಗೆ ಅನುವಾದಿಸಿರುವ ಪಾಶ್ಚಾತ್ಯನೋರ್ವ ರಷ್ದಿಯ ಅಭಿಪ್ರಾಯವನ್ನು ಅನುಮೋದಿಸಿ ಮಾತನಾಡಿದ; ತಾನೆ ಕಂಡಂತೆ ಭಾರತೀಯ ಭಾಷಾ ಸಾಹಿತ್ಯ ಕಳಪೆಯಾದ್ದರಿಂದ ರಷ್ದಿ ಹೇಳಿದ್ದರಲ್ಲಿ ದೋಷವೇನಿಲ್ಲವೆಂದು ವಾದಿಸಿದ. ನಾನು ತಡೆಯಲಾಗದೆ ಕೊಂಚ ತೀಕ್ಷ್ಣವಾಗಿಯೆ ಅವನಿಗೆ ಹೇಳಿದೆ: ' ಠಾಕೂರ ರಂಥವರನ್ನು ಭಾಷಾಂತರಿಸಿರುವ ನೀವು ಹೀಗೆ ಗಳಹುವುದು ಸರಿಯಲ್ಲ. ನೀವು ಹೇಳುವಂತೆ ಭಾರತೀಯ ಭಾಷಾಸಾಹಿತ್ಯ ಕಳಪೆಯೆ ಎಂದಾದಲ್ಲಿ ಬಹುಪಾಲು ಅಮೆರಿಕನ್ ಮತ್ತು ಆಂಗ್ಲ ಕೃತಿಗಳ ಮಟ್ಟಿಗೂ ಆ ಮಾತು ಸತ್ಯವಲ್ಲವೆ? ನಮ್ಮ



ಪ್ರತಿಷ್ಠಿತ ಪುಸ್ತಕದಂಗಡಿಗಳಲ್ಲಿ ರಾರಾಜಿಸುವ ನಿಮ್ಮವರ ಇಂಗ್ಲಿಷ್ ಕೃತಿಗಳನ್ನು ನೋಡಿ. ಐದುನೂರು-ಆರುನೂರು ಪುಟಗಳುದ್ದದ ಆ ಕಾದಂಬರಿಗಳಲ್ಲಿ ಒಂದಾದರೂ ಸಾಹಿತ್ಯಕ ಅಂಶವಿದೆಯೆ?' ಕಕ್ಕಾಬಿಕ್ಕಿಯಾದ ಆತ ಸಭೆ ಮುಗಿದ ಮೇಲೆ ಬಳಿ ಬಂದು ಸಮಜಾಯಿಷಿಯ ಮಾತನ್ನಾಡಲು ಯತ್ನಿಸಿದ. ಆದರೆ ನಮ್ಮ ಬಹುಸಮೃದ್ಧ ಪರಂಪರೆಗೆ ಅವಮಾನ ಮಾಡಿದ್ದ ಆತನ ಯಾವ ಮಾತನ್ನೂ ಕೇಳಿಸಿಕೊಳ್ಳುವ ಮನಸ್ಸು ನನಗಿರಲಿಲ್ಲ.

ಇಂಥವರು ಮಾಡುವ ಭಾಷಾಂತರಗಳ ಹಿಂದೆಯೂ ಸೂಕ್ಷ್ಮವಾದೊಂದು ರಾಜಕೀಯವಿರುತ್ತದೆ. ನಮ್ಮ ಶ್ರೇಷ್ಠ ಕೃತಿಗಳನ್ನು ಅವರು ಅನುವಾದಿಸುವುದು ಅವು ಶ್ರೇಷ್ಠವೆಂಬ ಕಾರಣಕ್ಕಾಗಿಯಲ್ಲ; ಬದಲಿಗೆ, ಅವು ಅನ್ಯ, ಎತ್ನಿಕ್ ಸಂಸ್ಕೃತಿಯೊಂದರ ಚಂದದ ನಿದರ್ಶನಗಳು ಎನ್ನುವ ಕಾರಣಕ್ಕಾಗಿ. ಅರ್ಥಾತ್, ಅವರದ್ದು ತಮ್ಮ ಹಾಗೂ ಪರರ ಸಮಾಜಗಳ ಬಗ್ಗೆ ಸಮಾನ ಗೌರವ ತೋರುವ, ಪರಸ್ಪರ ಕೊಡು-ಕೊಳುವಿಕೆಯ ಮನೋಧರ್ಮವಾಗಿರದೆ, ತಮ್ಮದಷ್ಟೆ ನಿಜವಾದ ನಾಗರಿಕತೆ, ಉಳಿದವೆಲ್ಲ ತಮ್ಮ ಮನೆ-ಗ್ರಂಥಾಲಯ-ವಿಶ್ವವಿದ್ಯಾನಿಲಯ-ಸಂಗ್ರಹಾಲಯಗಳಲ್ಲಿ ಸಾಕಿಕೊಂಡು ಮುದ್ದಿಸಬಹುದಾದ ಅಲಂಕರಣಗಳು ಎನ್ನುವ ನಿಲುವಾಗಿರುತ್ತದೆ.

ಇದು, ಚಾರಿತ್ರಿಕ ಕಾಲಮಾನದ ಇಪ್ಪತ್ತನೆ ಹಾಗೂ ಇಪ್ಪತ್ತೊಂದನೆಯ ಶತಮಾನಗಳು ಸೃಷ್ಟಿಸಿರುವ ಸಮಸ್ಯಾತ್ಮಕ ಜಾಗತಿಕ ಸನ್ನಿವೇಶದ ಒಂದು ಮುಖ.

ಇದರ ಸವಾಲನ್ನು ನಾವು ಸ್ವಾಭಿಮಾನದಿಂದಲೂ ಆತ್ಮವಿವೇಚನೆಯಿಂದಲೂ ಎದುರಿಸಬೇಕು. ಇಲ್ಲಿಯೂ ಕೆಲವು ಗೊಂದಲಗಳಿರುವುದು ನಿಜ. ಉದಾಹರಣೆಗೆ, ಇಂಥ ಆತ್ಮಗೌರವ ಕೆಲವೆಡೆ ಅಹಂಕಾರವಾಗಿ ಮಾರ್ಪಡಬಹುದು; ವಿನಯ ದೈನ್ಯವಾಗಿ ಪರಿಣಮಿಸಬಹುದು. ಕೆಲವೊಮ್ಮೆ ನಮ್ಮ ಭೂತವೆ ಸರ್ವಶ್ರೇಷ್ಠ ಎನ್ನುವ ಗರ್ವ ಬೆಳೆಯಬಹುದು; ಇನ್ನು ಕೆಲವೊಮ್ಮೆ ಭವಿಷ್ಯದ ಮೇಲಷ್ಟೆ ಕಣ್ಣು ನೆಟ್ಟು ಭೂತವನ್ನೆಲ್ಲ ದಹನ ಮಾಡಬೇಕೆನ್ನುವ ಧಾವಂತ ಮೂಡಬಹುದು.

ಇಂಥ ಅತಿರೇಕವಾದಗಳ ನಡುವೆ ತೊಳಲಾಡುವಾಗ ಹಲವೊಮ್ಮೆ ನಮ್ಮ ಹಿರಿಯರ ನೆನಪು ಕಾಡುವುದುಂಟು. ಅವರು ತಂತಮ್ಮ ಕಾಲದ ಇಂಥದೆ ಬಿಕ್ಕಟ್ಟುಗಳಿಗೆ ಹುಡುಕಿಕೊಂಡ ಪರಿಹಾರ ಮಾರ್ಗದ ಮಿಂಚು ಹೊಳೆಯುವುದುಂಟು.

ಬೇಂದ್ರೆ, ಮಾಸ್ತಿ, ಕುವೆಂಪು, ಕಾರಂತರಂಥವರು ಕನ್ನಡ ನುಡಿಯಲ್ಲಿ ಕನ್ನಡ ನಾಡಿನ ಬಗ್ಗೆ ಬರೆಯುವಾಗ ಇಡಿಯ ವಿಶ್ವದ ಬಗ್ಗೆಯೂ ಬರೆಯುತ್ತಿರುವ ಆತ್ಮವಿಶ್ವಾಸದಿಂದ ತುಂಬಿಕೊಂಡವರಾಗಿದ್ದರು. ಕಾವೇರಿಯಿಂದ ಗೋದಾವರಿ ವರೆಗಿನ ಸೀಮಿತ ಭೌಗೋಳಿಕ ಪ್ರದೇಶದಲ್ಲಿ ಬರೆಯುತ್ತಿರುವಾಗಲೂ ತಾನು ಕಾಳಿದಾಸ

ಹಾಗೂ ವ್ಯಾಸರಿಗೆ ಸರಿಸಮಾನವಾಗಿ ಬರೆಯಬಲ್ಲೆ ಎನ್ನುವ ಕೆಚ್ಚು ಪಂಪನಿಗಿತ್ತು.

ಅದೇ ರೀತಿ, 'ಧರಣಿಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ಣಾಟ ದೇಶದಿ...' ಎಂದು ಹಾಡುವ ಕವಿಯ ದೃಷ್ಟಿಯಲ್ಲಿ ಭೂಮಿಗೆ ಕರ್ನಾಟಕವೆ ಕೇಂದ್ರ. ಅಥವಾ ಸೂಚ್ಯಾರ್ಥದಲ್ಲಿ, ಭೂಮಿಯ ಮೇಲಿನ ಯಾವ ಸ್ಥಳವೂ ಅದರ ಕೇಂದ್ರವಾಗಬಹುದು, ಆಗಿಯೂ ಇರುವುದು. ಇಂಥ ಬಹುಕೇಂದ್ರ ಪ್ರಜ್ಞೆಯುಳ್ಳ ಭಾಷೆಗಳು ತಮ್ಮ ಸ್ವಂತ ನೆಲದಲ್ಲಿ ಭದ್ರ ಬೇರೂರಿನಿಂತಿರುವಂತೆಯೆ ಹೊರ ವಲಯಗಳಿಗೂ ತಮ್ಮ ಶಾಖೆಗಳನ್ನು ಚಾಚಿರುತ್ತವೆ. ಸ್ಥಳೀಯವಾದುದಕ್ಕೆ ಸೀಮಿತವಾಗಿರುವಂತೆಯೆ ವಿಶ್ವಾತ್ಮಕ ಪ್ರಜ್ಞೆಯೊಂದಿಗೆ ಕಂಗೊಳಿಸುತ್ತಿರುತ್ತವೆ. ಉದಾಹರಣೆಗೆ, 'ಅಲ್ಲಮಪ್ರಭು ಮತ್ತು ಶೈವಪ್ರತಿಭೆ' ಕೃತಿಯಲ್ಲಿ ಕಳೆದುಹೋದ ಗೆಳೆಯ ಡಿ.ಆರ್. ನಾಗರಾಜ್ ಕಾಣಿಸುವಂತೆ ಅಲ್ಲಮ ತನ್ನ ಕನ್ನಡ ವಚನಗಳನ್ನು ಸುಮಾರು ಒಂದು ಸಾವಿರ ವರ್ಷಗಳ ಪರಂಪರೆಯ ಶೈವ ಸಂಪ್ರದಾಯದ ನೆನಪಿನ ನೆರಳಲ್ಲೆ ಬರೆಯುತ್ತಾನೆ. ಅದರ ಮಂಡನೆ-ಖಂಡನೆ-ಚರ್ಚೆಗಳೆಲ್ಲವನ್ನೂ ಆತ ಕನ್ನಡದಲ್ಲಿಯೆ ನಡೆಸುತ್ತಾನೆ. ಷೇಕ್ಸ್ಪಿಯರನ ಕಥೆಯೂ ಇಂಥಾದ್ದೆ. ಅವನ ಕಾಲದಲ್ಲಿ ಇಂಗ್ಲಿಷ್ ಬಡಜನರ ಭಾಷೆಯಾಗಿತ್ತು; ಆಳುವವರೆಲ್ಲ ಫ್ರೆಂಚ್ ಭಾಷೆಯನ್ನು ನೆಚ್ಚಿಕೊಂಡಿದ್ದರು, ಇಲ್ಲ ಫ್ರೆಂಚರಾಗಿದ್ದರು. ಅಂಥ ಸಂದರ್ಭದಲ್ಲಿ ಬಂದ ಷೇಕ್ಸ್ಪಿಯರ್ ಜಗತ್ತಿನ ಅತಿಶ್ರೇಷ್ಠ ಸಾಹಿತ್ಯಕೃತಿಗಳು ಕೆಲವನ್ನು ಇಂಗ್ಲಿಷಿನಲ್ಲಿ ಸೃಷ್ಟಿಸಿದ. ಹಾಗೆಯೆ ಡಾಂಟೆ ಜಗತ್ತಿನ ಅತ್ಯಂತ ಸಣ್ಣ ಭಾಷೆಯೊಂದರಲ್ಲಿ ಅತ್ಯಂತ ಘನವಾದುದನ್ನು ಬರೆದ.

ಮಾನವ ವಿಶ್ವದ ಅತ್ಯಂತ ಮೌಲಿಕ ಸಾಧನೆಗಳೆಲ್ಲವೂ ಹೀಗೆ ಸ್ಥಳೀಯತೆಯ ಸತ್ವದಿಂದಲೆ ಸಿದ್ಧಿಯಾಗಿರುವಂಥವು. ಇಂದು ಮಾತ್ರ ಹಿಂದೆಂದೂ ಕಾಣದಂಥ ರೀತಿಯ ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಭೌಗೋಳಿಕ-ರಾಜಕೀಯ-ಆರ್ಥಿಕ-ಸಾಂಸ್ಕೃತಿಕ ಸ್ತರಗಳಲ್ಲೆಲ್ಲ ಜಗತ್ತಿಗೆ ಒಂದೆ ಕೇಂದ್ರವಿರುವುದು ಅನಿವಾರ್ಯ ಹಾಗೂ ಅಪೇಕ್ಷಣೀಯ ಎನ್ನುವಂತಹ ಸನ್ನಿವೇಶ ನಿರ್ಮಾಣವಾಗಿದೆ.

ಕನ್ನಡದಂತಹ ಸ್ಥಳೀಯ ಸಂಸ್ಕೃತಿಗಳು ಇಂತಹ ಮಿಥ್ಯೆಯನ್ನು ಮತ್ತೊಮ್ಮೆ ಒಡೆಯಬೇಕಾಗಿದೆ. ಆ ಪ್ರಯತ್ನದಲ್ಲಿ ಇಂತಹ ಚಟುವಟಿಕೆಗಳು ಸ್ವಲ್ಪ ಮಟ್ಟಿಗಾದರೂ ಸಹಾಯಕವಾಗಬಹುದು, ಆಗಬೇಕು.

# ರಂಗಭೂಮಿ ಮತ್ತು ಸಮುದಾಯ

ಕೆ.ವಿ.ಸುಬ್ಬಣ್ಣ

*ದೆಹಲಿಯ ಶ್ರೀರಾಮ್ ಸೆಂಟರ್‌ನಲ್ಲಿ ಮಾಡಿದ ಮೂರು ದಿನಗಳ ಉಪನ್ಯಾಸ ಸರಣಿಯ ಮೊದಲ ಭಾಗ. ಇದರ ಪೂರ್ಣ ಪಾಠವನ್ನು ಪುತ್ತೂರಿನ ಶಿವರಾಮ ಕಾರಂತ ಅಧ್ಯಯನ ಕೇಂದ್ರವು ಸದ್ಯದಲ್ಲೇ ಪ್ರಕಟಿಸಲಿದೆ.*

## ಪ್ರಸ್ತಾವನೆ

ನಮ್ಮ ಸಾಂಪ್ರದಾಯಿಕರ ಹಾಗೆ, ನಾನೂ ಪ್ರಾರಂಭದಲ್ಲಿ ಗಣೇಶ ದೇವನನ್ನು ನೆನಪಿಸಿಕೊಳ್ಳುವಂತಾಗಿದೆ. ಶಿವನು ತನ್ನ ಇಬ್ಬರು ಮಕ್ಕಳಾದ ಕುಮಾರಸ್ವಾಮಿ ಮತ್ತು ಗಣೇಶರ ಸಾಮರ್ಥ್ಯವನ್ನು ಪರೀಕ್ಷಿಸಲಿಕ್ಕಾಗಿ ಒಂದು ಸ್ಪರ್ಧೆಯನ್ನು ಹೂಡಿದ. ಇಬ್ಬರೂ ಇಡೀ ಜಗತ್ತನ್ನು ಒಂದು ಸುತ್ತು ಹಾಕಿ ಬರಬೇಕು ಮತ್ತು ಯಾರು ಮೊದಲು ಅದನ್ನು ಮುಗಿಸಿ ಹಿಂದಿರುಗುತ್ತಾರೋ ಅವರಿಗೆ ಬಹುಮಾನ – ಅಂತ. ಮಹಾ ಸಾಹಸಿಯಾದ ಕುಮಾರಸ್ವಾಮಿಯು ಒಂದು ಕ್ಷಣವೂ ತಳುವದೆ ಉತ್ಸಾಹದಿಂದ ಹೊರಟೇಬಿಟ್ಟ. ಸ್ಥೂಲದೇಹ ಭಾರಹೊಟ್ಟೆಯ ಗಣೇಶನು ಕೂತೇ ಇದ್ದ. ಎಷ್ಟೋ ಹೊತ್ತಿನಮೇಲೆ ನಿಧಾನವಾಗಿ ದೇಹವನ್ನೆತ್ತಿಕೊಳ್ಳುತ್ತ ಮೇಲೆದ್ದು, ಎದುರಿನಲ್ಲೇ ನಿಂತಿದ್ದ ಶಿವನನ್ನು ಒಂದು ಪ್ರದಕ್ಷಿಣೆ ಹಾಕಿ ಬಂದು, 'ನಾನೇ ಗೆದ್ದೆ' ಎಂದ. ಈ ಜಗತ್ತು ಮಾತ್ರವಲ್ಲ, ಹದಿನಾಲ್ಕು ಲೋಕಗಳೂ ಶಿವನ ಒಡಲಿನಲ್ಲೇ ಅಂತರ್ಗತವಾಗಿಲ್ಲವೆ?

ಗಣೇಶಕುಲದವನಾದ ನನ್ನನ್ನು ಶ್ರೀಮತಿ ಪನ್ನಾಜಿ ಅವರು, ಮೂರು ವರ್ಷಗಳಿಂದ ಬಿಡದೆ ಬೆನ್ನು ಹತ್ತಿ, ಈ ದೂರದ ದಿಲ್ಲಿಗೆ ಕರೆಸಿಕೊಂಡಿದ್ದಾರೆ; ರಾಷ್ಟ್ರೀಯ ಪ್ರತಿಷ್ಠೆಯ ಶ್ರೀರಾಮ್ ಸೆಂಟರಿನ ಈ ವಾರ್ಷಿಕೋಪನ್ಯಾಸದ ಗೌರವ ಅವಕಾಶವನ್ನು ನನಗೆ ಒದಗಿಸಿಕೊಟ್ಟಿದ್ದಾರೆ. ಅವರಿಗೂ ಈ ಕೇಂದ್ರದ ಅವರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ಕೃತಜ್ಞತೆಗಳು.

ಇಲ್ಲಿ ನಾನು ರಂಗಭೂಮಿಯನ್ನು ಕುರಿತು ಮಾತಾಡಬೇಕು. ಕಣ್ಣಿನ

ಅಲೆದಾಟಕ್ಕೆ ಕೊಂಚ ಹೆಚ್ಚು ಮುಕ್ತ ಮೈದಾನ ಹಾಗೂ ಹಿಗ್ಗು ಬೇಲಿಗಳಿರಲಿ ಅಂತ, 'ರಂಗಭೂಮಿ ಮತ್ತು ಸಮುದಾಯ' ಎಂಬ ಶೀರ್ಷಿಕೆಯನ್ನು ಕೊಟ್ಟುಕೊಂಡಿದ್ದೇನೆ. ಅಕಡೆಮಿಕ್ ಆದ ಒಂದು ಸಂಪ್ರಬಂಧವನ್ನು ಸಿದ್ಧಗೊಳಿಸಬೇಕೆಂಬ ತವಕವಿಲ್ಲದೆ, ನನ್ನ ಮಿತಿಗೆ ಹೊಂದಿಕೊಂಡು, ನನ್ನ ಅಕ್ಷದಮೇಲೇ ಸುತ್ತಿಕೊಳ್ಳುತ್ತ, ಅಷ್ಟರಲ್ಲಿ ಕಾಣುವ ಕುತೂಹಲಗಳನ್ನು ಕಣ್ತುಂಬಿಸಿಕೊಳ್ಳುವುದಷ್ಟೇ ನನ್ನ ಮುಖ್ಯ ಉದ್ದೇಶ. ನನ್ನ ಈ ನಿಸ್ಸಂಚಾರಯಾತ್ರೆಯಲ್ಲಿ ಸಹನೆಯಿಂದ ಪಾಲ್ಗೊಳ್ಳಿ.

ಮೊದಲಲ್ಲಿ ಗಣೇಶನನ್ನು ನೆನಪಿಸಿಕೊಂಡದ್ದಾದರೂ ಅನೇಕ ಕಾರಣಗಳಿಗಾಗಿ. ಆತನು ನಮ್ಮ ರಂಗಭೂಮಿಯಲ್ಲೂ ನಮ್ಮ ಸಮುದಾಯಗಳಲ್ಲೂ ಸಮಾನವಾಗಿ ಪ್ರಥಮ ಪೂಜೆ ಕೊಳ್ಳುವವನು. ನಮ್ಮ ಸಮುದಾಯಗಳು ತಮ್ಮ ಬಹುಸ್ತರ ಇಮ್ಯಾಜಿನೇಶನ್‌ಗಳ ಒಂದು ಅದ್ಭುತ ಕೊಲ್ಲಾಜ್ ಆಗಿ ಈ ವಿಲಕ್ಷಣಮೂರ್ತಿಯನ್ನು ಸೃಷ್ಟಿಸಿಕೊಂಡಿವೆ; ಮತ್ತು, ತಾವೇ ಸೃಷ್ಟಿಸಿಕೊಂಡ ಈತನನ್ನು ತಮ್ಮ ಪ್ರಥಮ ಪ್ರಭುವೆಂದು ಸ್ಥಾಪಿಸಿಕೊಂಡಿವೆ. ಹೀಗೆ ಗಣೇಶನು ಕಮ್ಯುನಿಟಿ ಇಮ್ಯಾಜಿನೇಶನ್ನಿನ ಅರ್ಕವೂ ಹೌದು, ಕಮ್ಯುನಿಟಿಯ ಅಧಿಪತಿ – ಗಣಾಧಿಪತಿ – ಯೂ ಹೌದು. ಸ್ವತಃ ಅವನು ಬ್ರಹ್ಮಚಾರಿ. ಆದರೆ, ಮನಸ್ಸಿನಲ್ಲೇ ಮಾಯವಾಗಬಹುದಾಗಿದ್ದ ಮಹರ್ಷಿ ವೇದವ್ಯಾಸರ ಪ್ರತಿಭಾಲೋಕವನ್ನು ಕೃತಿಗೊಳಿಸುವ ಮೂಲಕ, ಮಹಾಭಾರತವನ್ನೇ ಸೃಷ್ಟಿಸಿದ ಮಹಾಸೃಜನಶೀಲ ಅವನು.

ನನ್ನ ಈ ಮೊದಲ ಭಾಷಣದಲ್ಲಿ ನಾನು, ರಂಗಭೂಮಿ ಮತ್ತು ಸಮುದಾಯಕ್ಕೆ ಸಂಬಂಧಿಸಿದ ಕೆಲವು ನೆನಪುಗಳ ಕಿರುಕಥೆಗಳನ್ನೇ ಮುಖ್ಯವಾಗಿ ನಿರೂಪಿಸುತ್ತ ಹೋಗುತ್ತೇನೆ. ಸೂತ್ರವಿಲ್ಲದಂತೆ ಕಾಣಿಸಬಹುದಾದ ನನ್ನ ಮಾತುಗಳನ್ನು ಒಂದು ಅರ್ಥವಂತಿಕೆಯಲ್ಲಿ ನೆಯ್ದುಕೊಳ್ಳುವುದಕ್ಕೆ ನಿಮ್ಮ ಸೃಜನಶೀಲತೆಯೂ ಬೇಕಾದೀತು; ಗಣೇಶ ಪ್ರತಿಮೆಯ ಸ್ಮರಣೆಯೂ ಬೇಕಾದೀತು.

ರಂಗಭೂಮಿ, ಸಮುದಾಯ ಇತ್ಯಾದಿಯಾಗಿ ಯೋಚಿಸತೊಡಗುವಾಗಲೇ ಒಂದು ಸಂಗತಿ ನನ್ನ ನೆನಪಿನಲ್ಲಿ ನುಗ್ಗಿ ಬಂದಿತು. ಅಥವಾ, ಆ ನೆನಪಿನಿಂದಲೇ ನಾನು ಈ ಶೀರ್ಷಿಕೆಯನ್ನು ಆಯ್ದುಕೊಂಡದ್ದಿರಬಹುದು, ಅದೂ ಸಾಧ್ಯ. ಹೇಗೂ ಅದನ್ನೇ ಮೊದಲು ಹೇಳಿಕೊಂಡು ಬಿಡುತ್ತೇನೆ. ನನ್ನ ಮಾತಿಗೆ ಅದೇ ಹೆಬ್ಬಾಗಿಲಾಗಲಿ.

ಯಕ್ಷಗಾನ ರಂಗಭೂಮಿಯಲ್ಲಿ ಭಾರೀ ಪ್ರಸಿದ್ಧರಾಗಿದ್ದು, ೧೯೭೦ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿಯನ್ನು ಗಳಿಸಿದ್ದ ಕೆರೆಮನೆ ಶಿವರಾಮ ಹೆಗಡೆ (೧೯೦೮-೧೯೯೨) ಅವರ ಆತ್ಮಕಥೆ ಕನ್ನಡದಲ್ಲಿ ಪ್ರಕಟವಾಗಿದೆ, ೧೯೮೨ರಲ್ಲಿ ಅವರು ಒಂದು ವಾರ ಕೂತು ಅದನ್ನು ಹೇಳಿದರು; ಹೇಳಿದ್ದನ್ನು ಡಾ.ಜಿ. ಎಸ್. ಭಟ್



ಟೇಪಿನಲ್ಲಿ ದಾಖಲಿಸಿಕೊಂಡರು; ಆಮೇಲೆ ಅವರೇ ಅದನ್ನು ಲಿಖಿತಗೊಳಿಸಿ, ಇದ್ದದ್ದಿದ್ದ ಹಾಗೇ – ಕಳೆಯದೆ, ಕೂಡದೆ, ತಿದ್ದದೆ – ಪ್ರಕಟಿಸಿದರು. ಬರೀ ೧೩೦ ಪುಟಗಳ ಆ ಕಿರುಪುಸ್ತಕವನ್ನು ನೀವು ಓದಬೇಕು. (ಗೆ. ಶಾ. ಬಾಲುರಾಯರು ಮಾಡಿರುವ ಅದರ ಸಂಕ್ಷಿಪ್ತ ಹಿಂದಿ ಅನುವಾದವನ್ನು ಈಚೆಗೆ ಎನ್.ಎಸ್.ಡಿ. ಪ್ರಕಟಿಸಿದೆ.) ಅಷ್ಟು ಸರಳವಾದ, ನೇರವಾದ, ಕುತೂಹಲಕಾರಿಯಾದ, ಮತ್ತು ಸೃಜನಶೀಲವಾದ ಆತ್ಮಕಥೆಗಳು, ಕಲಾವಿದರಿಗೆ ಸಂಬಂಧಿಸಿಯಂತೂ, ನಮ್ಮ ಭಾರತೀಯ ಭಾಷೆಗಳಲ್ಲಿ ಹೆಚ್ಚು ಸಿಕ್ಕಲಿಕ್ಕಿಲ್ಲ. ಯಕ್ಷಗಾನ ಮತ್ತು ಅದರಲ್ಲಿನ ತನ್ನ ದುಡಿಮೆಯ ಬಗ್ಗೆ ಅವರು ಪುಸ್ತಕದುದ್ದಕ್ಕೂ ಅಗತ್ಯ ವಿವರಗಳನ್ನು ಕೊಡುತ್ತಾ ಹೋಗಿದ್ದಾರೆ. ಆದರೆ ಒಟ್ಟಿನಲ್ಲಿ ಆತ್ಮಕಥೆಯು, 'ಯಕ್ಷಗಾನ ಕಲಾವಿದ - ಸಂಘಟಕ'ನ ಕಥೆಗಿಂತಲೂ ಹೆಚ್ಚಾಗಿ ಮತ್ತು ಮುಖ್ಯವಾಗಿ, ಕುಟುಂಬಸ್ಥನಾಗಿದ್ದ ಬಡ ಗ್ರಾಮೀಣನೊಬ್ಬನು ದುಡಿಯುತ್ತ, ಸ್ವಾವಲಂಬಿಯಾಗುತ್ತ ಕ್ರಮೇಣ ಸಮಾಜದ ಒಬ್ಬ ಸಂಭಾವಿತ ವ್ಯಕ್ತಿಯಾಗಲೂ ಹೆಣಗಿ, ತನ್ನ ಪ್ರಯತ್ನದಲ್ಲಿ ಒಂದು ಮಟ್ಟದ ಯಶಸ್ಸನ್ನೂ ತೃಪ್ತಿಯನ್ನೂ ಸಾಧಿಸಿಕೊಂಡದ್ದನ್ನೇ ಕಥಿಸುತ್ತದೆ. ಒಬ್ಬ ಕಲಾವಿದನು ಸಮುದಾಯದ ನೆಲೆಯಲ್ಲಿ ತನ್ನನ್ನು ಆಕಾರಗೊಳಿಸಿಕೊಳ್ಳುತ್ತ ಸಂಸ್ಥಾಪನಗೊಳಿಸಿಕೊಳ್ಳುವ ಸೃಜನಶೀಲ ಪ್ರಯತ್ನವು ಈ ಆತ್ಮಕಥೆಯಲ್ಲಿ ದಾಖಲಾಗಿದ್ದು, ಹಾಗೆ ಅದು ಅನನ್ಯವಾಗಿದೆ.

ಈ ಆತ್ಮಚರಿತ್ರೆಯಲ್ಲಿ ಒಂದು ಪುಟ್ಟ ಘಟನೆ ಬರುತ್ತದೆ. ಒಮ್ಮೆ, ಒಂದು ಊರಿನ ಹಿರಿಯರು ಹೆಗಡೆಯವರ ಮೇಳವನ್ನು ತಮ್ಮಲ್ಲಿಗೆ ಆಹ್ವಾನಿಸುತ್ತಾರೆ; ಪ್ರದರ್ಶನ ನಡೆಯುತ್ತದೆ. ಪ್ರದರ್ಶನ ಮುಗಿದಮೇಲೆ, ಅವತ್ತಿನ ಪ್ರದರ್ಶನ ಸಾಕಷ್ಟು ಚೆನ್ನಾಗಲಿಲ್ಲ ಎಂಬ ನೆವ ಹೇಳಿ, ಮೇಳಕ್ಕೆ ಕೊಡಬೇಕಾಗಿದ್ದ ಸಂಭಾವನೆಯನ್ನು ಕೊಡದೆ ಅವಮಾನ ಮಾಡುತ್ತಾರೆ. ಕೋಪಗೊಂಡ ಹೆಗಡೆಯವರು ಮತ್ತೆ ಒಂದು ಕ್ಷಣವೂ ಆ ಊರಿನ ನೆಲದಮೇಲೆ ನಿಲ್ಲಲಿಕ್ಕಿಲ್ಲವೆಂದು ನಿರ್ಧರಿಸುತ್ತಾರೆ. ಆದರೆ ತತ್‌ಕ್ಷಣ ಹೊರಡುವುದು ಸುಲಭವಾಗಿರಲಿಲ್ಲ. ಕಲಾವಿದರೇನೋ ನಡದುಕೊಂಡು ಹೊರಟುಬಿಡಬಹುದು, ಆದರೆ, ವೇಷವಸ್ತ್ರಗಳ ದೊಡ್ಡ ಪೆಟ್ಟಿಗೆಗಳನ್ನು ಹೇಗೆ ಸಾಗಿಸುವುದು? ಹೊತ್ತು ಕೊಂಡೊಯ್ಯುವವರಾದರೂ ಬೇಕಲ್ಲ? ಇದ್ದಕ್ಕಿದ್ದಹಾಗೆ, ಇವರ ತುಂಬ ಹಳೆಯ ಪರಿಚಯದ ತರುಣನೊಬ್ಬ, ಗಣಪತಿ ಎಂಬ ಹೆಸರಿನವ, ಅಲ್ಲಿ ಪ್ರತ್ಯಕ್ಷನಾದ. ತಾನು ಸಹಾಯ ಮಾಡುವುದಾಗಿ ಹೇಳಿ ಆತನೊಬ್ಬನೇ ಪೆಟ್ಟಿಗೆಗಳೆಲ್ಲವನ್ನೂ ಹೊತ್ತು ಪಕ್ಕದ ಊರಿಗೆ ಸಾಗಿಸಿಕೊಟ್ಟ. ಕೆಲಸ ಮುಗಿದದ್ದೇ ಅವನು, ಇವರು ಕೊಡಲುಹೋದ ಕೂಲಿ ಹಣವನ್ನು ತೆಗೆದುಕೊಳ್ಳದೆ, 'ನಾನು ಕೂಲಿಗೆ ಬಂದ ಗಣಪತಿ ಅಲ್ಲ ತಿಳಿಯಿತೋ' ಎಂದುಬಿಟ್ಟ. 'ನಮ್ಮ ಜತೆ ಊಟಕ್ಕಾದರೂ ಬಾ'

ಎಂದಾಗ, ಬಂದೆ – ಅಂತ ಹೇಳಿ ಆಚೆ ಸರಿದವನು ಬರಲೇ ಇಲ್ಲ, ಕಾಣೆಯಾಗಿಬಿಟ್ಟ.

ಅಷ್ಟರಲ್ಲಿ ಹೆಗಡೆಯವರು ನೆನಪಿಸಿಕೊಳ್ಳತೊಡಗಿದ್ದರು – ಈ ಹಳೆಯ ಪರಿಚಯದ ಗಣಪತಿ ಊರುಬಿಟ್ಟು ಎಲ್ಲೋ ಹೋಗಿ ಎಷ್ಟೋ ವರ್ಷಗಳು ಕಳೆದಿದ್ದವು. ಅವನೀಗ ಜೀವಂತ ಬದುಕಿಲ್ಲ ಅಂತ ಊರಿನಲ್ಲಿ ಸುದ್ದಿಯಾಗಿತ್ತು. (ಈ ಘಟನೆಯಾದ ಮೇಲೆ ಕೂಡಾ ಆ ಗಣಪತಿಯನ್ನು ಮತ್ತೆ ಯಾರೂ ಎಂದೂ ಕಂಡದ್ದಿಲ್ಲವಂತೆ.) 'ನಾನು ಕೂಲಿಗೆ ಬಂದ ಗಣಪತಿ ಅಲ್ಲ, ತಿಳಿಯಲಿಲ್ಲವೆ' ಅಂತ ಅವನೇ ಸ್ವತಃ ಪ್ರಶ್ನಿಸಿದ್ದನ್ನು ನೆನೆದುಕೊಂಡಾಗ ಹೆಗಡೆಯವರಿಗೆ ವಿಸ್ಮಯವೆನ್ನಿಸಿತಂತೆ. ಆ ಭಾಗದಲ್ಲೆಲ್ಲಾ ಭಾರೀ ಪ್ರಸಿದ್ಧವಾಗಿರುವ ದೇವತೆ, 'ಇಡಗುಂಜಿ ಗಣಪತಿ'. ಅವನೇ ಹೆಗಡೆಯವರ ಇಷ್ಟದೈವ. ಮೇಳಕ್ಕೆ ಅವರು 'ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಲಿ' ಅಂತಲೇ ಹೆಸರಿಟ್ಟುಕೊಂಡಿದ್ದರು.

'ಮಾರ್ಕ್ವೇಸ್ ರಿಯಾಲಿಸ್ಮ್' ನೆನಪಾಗಬಹುದು. ದಿನನಿತ್ಯದ ಬದುಕಿನ ಹಗಲು ವಾಸ್ತವ – ಅದರ ಜತೆ ಹೆಣೆದುಕೊಂಡ ಪ್ರಾಣಿಪರಿಸರ ವಾಸ್ತವ – ಈ ನಿತ್ಯದ ಹಗಲೇ ಸಂಜೆಯಾಗಿ ಅರಳಿಕೊಳ್ಳುವ ಪುರಾಣ ಬಣ್ಣಗಳ ಯಕ್ಷವಾಸ್ತವ – ಇತ್ಯಾದಿ ಹಲವು ವಾಸ್ತವಗಳನ್ನೆಲ್ಲ ಏಕಾಕಾರದಲ್ಲಿ ಸಂಮೇಳಗೊಳಿಸಿಕೊಳ್ಳುತ್ತ, ತನ್ನ ಲೋಕಾಕಾರವನ್ನು ಸೃಜಿಸಿಕೊಳ್ಳುವ ಇಂಥ ಮನಸ್ಸು ನಮ್ಮನ್ನು ವಿಸ್ಮಯಗೊಳಿಸುತ್ತದೆ.

ಹೇಳಿ ರೆಕಾರ್ಡ್ ಮಾಡಿಸುತ್ತಿದ್ದಾಗ ಒಂದು ದಿನ ಅವರು – 'ಇವತ್ತು ಸ್ವಲ್ಪ ಬೇರೆ ಕಥೆ ಹೇಳುತ್ತೇನೆ' ಎಂದು ಪ್ರಾರಂಭಿಸಿದರಂತೆ. ಅದು ಆತ್ಮಚರಿತ್ರೆಯ ಒಂದು ಪ್ರತ್ಯೇಕ ಅಧ್ಯಾಯವಾಗಿ ಬಂದಿದೆ.

ಅವರ ತಾರುಣ್ಯದಲ್ಲಿ ಇಡಗುಂಜಿ ಗಣಪತಿ ದೇವಾಲಯದ 'ಸೇವೆ'ಯಲ್ಲಿದ್ದ ದೇವದಾಸಿ ತರುಣಿಯೊಬ್ಬಳು ಇವರಿಗೆ ಒಲಿದು ಬಂದಳಂತೆ. ಅವಳ ಜೊತೆ ಬೆಳೆದ ಪ್ರೀತಿಯ ಸಂಬಂಧವು, ಕಡೆಯಲ್ಲಿ ಆಕೆ ಕ್ಯಾನ್ಸರ್‌ಗೆ ತುತ್ತಾಗಿ ದುರಂತದಲ್ಲಿ ಸಾಯುವತನಕವೂ ಬಾಳಿ ಬಂತು. ಹೆಗಡೆಯವರ ದಾಂಪತ್ಯದಲ್ಲಿ ದೊಡ್ಡ ಬಿರುಕುಂಟಾಗಿದ್ದಾಗ ಆಕೆಯೇ ಬಂದುನಿಂತು, ಇಬ್ಬರನ್ನೂ ಒಟ್ಟುಗೂಡಿಸಿದ್ದಲ್ಲದೆ ಮುಂದೆ ಕೊನೆತನಕ ಇವರ ದಾಂಪತ್ಯ ಸಂಬಂಧವು ಭದ್ರವಾಗಿ ಉಳಿಯುವಂತೆ ನೋಡಿಕೊಂಡಳಂತೆ. ಪೂರ್ತಿ ಅಂತಃ ಸಂವೇದನೆಯಿಂದ ಕೊಂಚವೂ ಭಾವುಕವಾಗದ ಸಂಯಮದಿಂದ ಮುಗ್ಧ ಸರಳತೆಯಲ್ಲಿ ನಿರೂಪಿತವಾಗಿರುವ ಈ ಭಾಗವು ಶ್ರೇಷ್ಠ ಸಾಹಿತ್ಯಕೃತಿಯೊಂದರ ಅಧ್ಯಾಯವೆನ್ನುವಂತಿದೆ.

ತುಂಬ ಭಿನ್ನವಾದ ಇನ್ನೊಂದು ಕಥೆಯನ್ನು ಇಲ್ಲಿಯೇ ಹೇಳಬೇಕು. ಗೆ. ಜಿ. ರಾಜಶೇಖರ ಅವರ 'ಕಾಗೋಡು ಸತ್ಯಾಗ್ರಹ' ಎನ್ನುವ ಪುಸ್ತಕದಿಂದ ಉಲ್ಲೇಖಿಸು



ತ್ತಿರುವಂಥದು ಇದು. ೧೯೫೦-೫೧ರ ಸಮಯದಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯ ಕಾಗೋಡು ಎಂಬ ಹಳ್ಳಿಯಲ್ಲಿ, ಗೇಣಿದಾರ ರೈತರು ಗೇಣಿ ಹೆಚ್ಚಳವನ್ನು ಪ್ರತಿಭಟಿಸಿ ಭೂಮಾಲಿಕರ ವಿರುದ್ಧ ಸತ್ಯಾಗ್ರಹ ನಡೆಸಿದರು. ಇದು ಕರ್ನಾಟಕದ ಮೊದಲ ಪ್ರಮುಖ ರೈತ ಹೋರಾಟವೆಂದು ಮುಂದೆ ಪ್ರಖ್ಯಾತವಾಯಿತು. ಗೇಣಿ ಭೂಮಿಯೆಲ್ಲವೂ ಗೇಣಿದಾರರ ಮಾಲಿಕತ್ವಕ್ಕೆ ಸಲ್ಲುವಂತೆ ಮುಂದೆ ಬಂದ ಭೂಸುಧಾರಣಾ ಕಾನೂನಿಗೆ ಈ ಚಳುವಳಿಯು ದಾರಿಹಾಕಿಕೊಟ್ಟಿತು. ಡಾ. ರಾಮಮನೋಹರ ಲೋಹಿಯಾ ಕೂಡಾ ಈ ಚಳುವಳಿಯಲ್ಲಿ ಭಾಗವಹಿಸಿ ಬಂಧನಗೊಂಡಿದ್ದರು. ನಮ್ಮ ಸಂವೇದನಾಶೀಲ ಸಾಂಸ್ಕೃತಿಕ ವಿಮರ್ಶಕ ಜಿ. ರಾಜಶೇಖರ್ ಅವರು ಈ ಸತ್ಯಾಗ್ರಹದ ಬಗ್ಗೆ ಪ್ರೀತಿ, ಕಾಳಜಿ, ಶ್ರಮಗಳಿಂದ ದೀರ್ಘ ಸಂಶೋಧನ ನಡೆಸಿ ಬರೆದಿರುವ ಪುಸ್ತಕ 'ಕಾಗೋಡು ಸತ್ಯಾಗ್ರಹ'.

ಈ ಸತ್ಯಾಗ್ರಹವು ಕಣ್ಣೊರೆಸುವ ಒಂದು ಕಿರುತಂತ್ರದ ಮೂಲಕ, ವಾಸ್ತವವಾಗಿ ಗೇಣಿದಾರರ ಸೋಲೇ ಆಗಿ ಮುಕ್ತಾಯಗೊಂಡಿತು. ಆ ಹೋರಾಟಗಾರರಲ್ಲಿ ಜಟ್ಟಿಗ ಎನ್ನುವ ಸ್ವಾಭಿಮಾನಿಯೊಬ್ಬನಿದ್ದ. ಸತ್ಯಾಗ್ರಹ ಮುಗಿದಮೇಲೂ ಅವನು ತನ್ನ ಪ್ರತಿಭಟನೆಯನ್ನು ನಿಲ್ಲಿಸದೆ ಮುಂದುವರಿಸಿದ. ಒಮ್ಮೆ ಊರಲ್ಲಿ ಒಂದು ಯಕ್ಷಗಾನ ಪ್ರದರ್ಶನವು ಏರ್ಪಾಟಾಯಿತು. ಅದನ್ನು ನಡೆಸುವವರು ಮುಖ್ಯವಾಗಿ ಭೂಮಾಲಿಕರೇ. ಜನಕ್ಕೆಲ್ಲ ಉಚಿತ ಪ್ರವೇಶವಿದ್ದು ಎಲ್ಲರೂ ಬಯಲಿನಲ್ಲಿ ನೆಲದಮೇಲೆ ಕೂತು ಆಟವನ್ನು ನೋಡುತ್ತಿದ್ದರು; ಭೂಮಾಲಿಕರು ಮಾತ್ರ ತಮ್ಮ ಮನೆಯಿಂದಲೇ ಕುರ್ಚಿ ಬೆಂಚುಗಳನ್ನು ತರಿಸಿ ಅದರ ಮೇಲೆ ಕೂತು ನೋಡುವುದು ರೂಢಿಯಾಗಿತ್ತು. ಈ ಯಕ್ಷಗಾನ ಪ್ರದರ್ಶನದ ಸುದ್ದಿ ತಿಳಿದದ್ದೇ ಜಟ್ಟಿಗ, ಹೆಚ್ಚು ಎತ್ತರದ ಒಂದು ಭಾರೀ ಕುರ್ಚಿಯನ್ನು ಮಾಡಿಸಿಕೊಂಡ; ಪ್ರದರ್ಶನದ ಹೊತ್ತಿಗೆ ತನ್ನ ಮಕ್ಕಳ ಮೂಲಕ ಆ ಕುರ್ಚಿಯನ್ನು ಹೊರಿಸಿಕೊಂಡು ಬಂದು, ಅದರ ಮೇಲೇ ಕೂತು ಆಟವನ್ನು ನೋಡಿದ. ಹೀಗೆ, ಸಾರ್ವಜನಿಕ ಯಕ್ಷಗಾನ ಪ್ರದರ್ಶನದ ಸಾಂಸ್ಕೃತಿಕ ರಂಗವನ್ನು ಆತನು ತನ್ನ ವೈಯಕ್ತಿಕ ಪ್ರತಿಭಟನೆಯ ರಾಜಕೀಯ ರಂಗವನ್ನಾಗಿ ಮಾಡಿಕೊಂಡ.

ಕನ್ನಡ ರಂಗಭೂಮಿಯೆಂದಾಗ ನಾನು ಪ್ರಥಮವಾಗಿ ಗಮನಿಸುವುದು ನಗರಕೇಂದ್ರಿತ ವಿದ್ಯಾವಂತ ವರ್ಗದ ಪ್ರಾಯೋಗಿಕ ರಂಗಭೂಮಿಯನ್ನೇ. ನಮ್ಮ ಶಿಖರಸಾಧನೆಗಳಿಗೆ ಮಾದರಿಯನ್ನೊದಗಿಸುವ ರಂಗಭೂಮಿ ಅದು. ಎರಡನೆಯದು ನಮ್ಮ ವೃತ್ತಿ – ವಾಣಿಜ್ಯ ರಂಗಭೂಮಿ. ಮೂರನೆಯದು ಹೆಚ್ಚಾಗಿ ಗ್ರಾಮೀಣ - ಅರೆಗ್ರಾಮೀಣ ಹಳ್ಳಿ ಪಟ್ಟಣಗಳಲ್ಲಿ ಪ್ರಚಲಿತವಿರುವ ಸಾಂಪ್ರದಾಯಿಕ-ಜಾನಪದ

ರಂಗಭೂಮಿ. ಈ ರಂಗಭೂಮಿಯನ್ನು ಕುರಿತು ವಿಮರ್ಶಕರು, ವಿಶ್ವವಿದ್ಯಾಲಯಗಳಲ್ಲಿನ ಸಂಶೋಧಕರು ಪ್ರತ್ಯೇಕವಾಗಿಟ್ಟು ಅಭ್ಯಾಸ ಮಾಡುತ್ತಾರೆ; ಲೇಖನ ಪ್ರಬಂಧಗಳನ್ನು ರಚಿಸುತ್ತಾರೆ. ಈ ವಿಭಾಗವು ನಮ್ಮ ಸಮಕಾಲೀನ ಜೀವಂತ ರಂಗಭೂಮಿಯ ಅವಿಭಾಜ್ಯ ಭಾಗವೆಂದು ನಾವು ಭಾವಿಸುವುದಿಲ್ಲ. ಅದೇನಿದ್ದರೂ ನಾವು ಗುರುತಿಸಿ ಹೆಮ್ಮೆ ಪಟ್ಟುಕೊಳ್ಳಬೇಕಾದ ಕುಲಗೆಡದಂತೆ ಶುದ್ಧವಾಗಿ ಕಾದಿಟ್ಟುಕೊಳ್ಳಬೇಕಾದ ನಮ್ಮ ಶ್ರೀಮಂತ ಪರಂಪರೆಯ ಪ್ರಾಚ್ಯಸಂಗ್ರಹ, ಪಳಯುಳಿಕೆ.

ಹಾಗೆ ನಾವು ನಮ್ಮ ಸಮಕಾಲೀನ ರಂಗಭೂಮಿಯಿಂದ ಹೆಚ್ಚಾಗಿ ಪ್ರತ್ಯೇಕಗೊಳಿಸಿಟ್ಟಿರುವ ಗ್ರಾಮ - ಸಮುದಾಯ ರಂಗಭೂಮಿಯು ತುಂಬ ಕುತೂಹಲಕಾರಿಯೆಂದು ನನಗೆ ಕಂಡಿದೆ. ರಂಗಭೂಮಿ ಮತ್ತು ಸಮುದಾಯಗಳ ಸಂಬಂಧ ಮತ್ತು ಪರಸ್ಪರ ಪ್ರಕ್ರಿಯೆಗಳ ಬಗ್ಗೆ ಇಲ್ಲಿ ಅನೇಕ ಹೊಸ ಹೊಳಹುಗಳು ಕಾಣಿಸಿಕೊಳ್ಳುತ್ತವೆ.

ಕರ್ನಾಟಕದಲ್ಲಿ ಕಣ್‌ಸೆಳೆಯುವ ಇಂಥ ರಂಗಪ್ರಕಾರವೆಂದರೆ, ಯಕ್ಷಗಾನ. ಪೂರ್ತಾ ಜಾನಪದವೆಂದು ಕರೆಯಲಿಕ್ಕಾಗದಷ್ಟು ದೀರ್ಘ ಪರಂಪರೆ (ಕನಿಷ್ಠ ೩೦೦-೪೦೦ ವರ್ಷ) ಯಿರುವ ಹಾಗೂ ಪ್ರಬುದ್ಧವಾದ ಮಾಧ್ಯಮ ಇದು. ಕರ್ನಾಟಕದ ಕರಾವಳಿ ಮತ್ತು ಘಟ್ಟದ ಪಟ್ಟಿಯ ನಾಲ್ಕೈದು ಜಿಲ್ಲೆಗಳಲ್ಲಿ ಇದು ಹಬ್ಬಿಕೊಂಡಿದೆ. ಈ ಶತಮಾನದಲ್ಲಿ ಕರ್ನಾಟಕದ ತುಂಬ ಹಬ್ಬಿಕೊಂಡ ವೈಭವದಿಂದ ಮೆರೆದ ಕಂಪನಿರಂಗಭೂಮಿಗಿಂತ ಕಡಿಮೆಯಿಲ್ಲದ ವೈಭವವನ್ನು ಇದು, ತನ್ನ ಮಿತ ಭೌಗೋಲಿಕ ವ್ಯಾಪ್ತಿಯಲ್ಲಿ ಗಳಿಸಿಕೊಂಡಿತು. ವಾಣಿಜ್ಯ ಯಶಸ್ಸಿನಲ್ಲಿ ಕೂಡಾ ಕಂಪನಿರಂಗಭೂಮಿಗೆ ಕಡಿಮೆಯಿಲ್ಲದ ಯಶಸ್ಸನ್ನು ಯಕ್ಷಗಾನವು ಸಾಧಿಸಿದೆ. ಅಲ್ಲದೆ ಇದು, ಕಂಪನಿ ರಂಗಭೂಮಿಗಿಂತ ಹೆಚ್ಚು ಆಪ್ತವಾಗಿ, ಹೆಚ್ಚು ಆಳವಾಗಿ, ತೀವ್ರವಾಗಿ ತನ್ನ ಭೌಗೋಲಿಕ ಸಮುದಾಯದ ಸಮಗ್ರ ಜನಜೀವನವನ್ನು ಪ್ರಭಾವಿಸಿದೆ. ಈ ಭಾಗದ ಜನರ ವಿಶಿಷ್ಟ ಆಹಾರವೆಂದರೆ, ಕುಸುಬಲು ಅಕ್ಕಿ, ಗಂಜಿ ಮತ್ತು ಕೊಬ್ಬರಿ ಎಣ್ಣೆ. ಈ ವಿಶಿಷ್ಟ ಆಹಾರದ ಹಾಗೆಯೇ, ಇಲ್ಲಿನ ಎಲ್ಲಾ ಜಾತಿ-ವರ್ಗ-ಅಂತಸ್ತುಗಳ ಜನರಿಗೂ ಸಮಾನವಾಗಿ, ಬಹುಸಹಜವೂ ಅನಿವಾರ್ಯವೂ ಆಗಿರುವ ಪದಾರ್ಥ, ಯಕ್ಷಗಾನ. ಈ ಜನರ ಮಾತು ನಡಾವಳಿಗಳಲ್ಲಿ, ನಿತ್ಯವ್ಯವಹಾರಗಳಲ್ಲಿ, ನೆನಪುಗಳಲ್ಲಿ ಕೂಡಾ ಯಕ್ಷಗಾನದ ದಾಟಿಲಯಗಳು ಮಿಂಚಿ ಕಾಣುತ್ತವೆ. ಅಲ್ಲಿನವರೇ ಆದ ನಮ್ಮ ಪ್ರಸಿದ್ಧ ಕವಿ, ದಿವಂಗತ ಗೋಪಾಲಕೃಷ್ಣ ಅಡಿಗರ ಕವಿತೆಯ ಲಯವು ಕೂಡಾ ಯಕ್ಷಗಾನದಿಂದ ಪ್ರಭಾವಿತವಾದದ್ದು.

ಈಗಲೂ ಸುಮಾರು ಇಪ್ಪತ್ತಕ್ಕಿಂತ ಹೆಚ್ಚು ವಾಣಿಜ್ಯ ಮೇಳಗಳು ಇಲ್ಲಿ



ಕೆಲಸಮಾಡುತ್ತವೆ ಮತ್ತು ವಾರ್ಷಿಕ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಸುತ್ತವೆ. ಅದಲ್ಲದೆ, ಊರೂರಲ್ಲೂ ಜನರು ತಮ್ಮದೇ ವಿಲಾಸಿ ಮೇಳಗಳನ್ನು ಕಟ್ಟಿಕೊಂಡು ಆಟವಾಡಿಕೊಳ್ಳುತ್ತಿರುತ್ತಾರೆ. ಅಂಬಿಗರು, ಮೀನುಗಾರರು ಮೊದಲಾಗಿ ಬಗೆಬಗೆಯ ವೃತ್ತಿಸಮುದಾಯಗಳವರು ತಮ್ಮದೇ ಯಕ್ಷಗಾನ ಶೈಲಿಗಳನ್ನು ರೂಢಿಸಿಕೊಂಡಿದ್ದಾರೆ. ಶತಮಾನಗಳ ಹಿಂದೆ ಕರೆತಂದ ಆಫ್ರಿಕನ್ ಮೂಲದ ನಿಗ್ರೋ ಬುಡಕಟ್ಟಿನ 'ಸಿದ್ದಿ' ಗಳೆಂಬವರು, ಇಲ್ಲಿ ಕೆಲವೇ ಮೂಲೆಹಳ್ಳಿಗಳಲ್ಲಿ ಕೃಷಿಕಾರ್ಮಿಕರಾಗಿ ನೆಲೆಸಿಕೊಂಡಿದ್ದಾರೆ. ತಮ್ಮ ಮೂಲದ ಯಾವುದೇ ಸ್ಮೃತಿಯನ್ನೂ ಉಳಿಸಿಕೊಂಡಿಲ್ಲದ ಈ ಬಡಜನರ ಕಿರುಸಮುದಾಯಗಳು ಕೂಡಾ ತಮ್ಮದೇ ಶೈಲಿಯ ಯಕ್ಷಗಾನವನ್ನು ರೂಢಿಸಿಕೊಂಡಿವೆ.

ಹಳ್ಳಿಗಳು ಮಾತ್ರವಲ್ಲ, ನಗರ ಪಟ್ಟಣಗಳ ಸಮಾರಂಭಗಳಲ್ಲಿ, ಶಾಲೆಕಾಲೇಜು ಕೂಟಗಳಲ್ಲಿ ಯಕ್ಷಗಾನವು ಅನಿವಾರ್ಯವಾದ ಒಂದು ಕಾರ್ಯಕ್ರಮವಾಗಿರುತ್ತದೆ. ಮಳೆಗಾಲ ಶುರುವಾಗಿ ಆಟ ನಡೆಸಲು ಸಾಧ್ಯವಿಲ್ಲದಾಗ 'ತಾಳಮದ್ದಲೆ' (ವೇಷ ವರ್ಣಿಕೆಗಳಿಲ್ಲದೆ ಪಾತ್ರಗಳು ಕೂತು ಹಾಡಿನ ಸಮೇತ ಸಂಭಾಷಣೆ ನಡೆಸುವ ಬೈಠಕ್ ನಾಟಕ) ಯನ್ನು ನಡೆಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಹಳ್ಳಿಯ ಕಟ್ಟೆಗಳು ಅಂಗಳಗಳು ತಾಳಮದ್ದಳೆಯ ಕೇಂದ್ರಗಳಾಗುತ್ತವೆ. ಪಟ್ಟಣಗಳಲ್ಲಿ ವೈದ್ಯರು-ವಕೀಲರು-ವರ್ತಕರು-ನೌಕರರು ತಮ್ಮ ತಮ್ಮ ಗುಂಪಿನ ತಾಳಮದ್ದಳೆ ನಡೆಸುತ್ತಾರೆ. ಮೇಳ ಕೂಡಿಸಲಿಕ್ಕಾಗದ ಕಲಾವಿದರು ಇಬ್ಬರು ಮೂವರು ಕೂಡಿ, 'ಚಿಕ್ಕ ಮೇಳ' ವಾಗಿ, ವೇಷಧರಿಸಿ ಮನೆಮನೆಗೆ ಹೊಕ್ಕು ಕಿರು ಪ್ರಸಂಗಗಳನ್ನು ಮಾಡಿ ತೋರಿಸುತ್ತಾರೆ. ಈ ಭಾಗದಿಂದ ಹೊರ ಪ್ರಾಂತಗಳಿಗೆ ಹೋಗಿ ಕೆಲವು ತಿಂಗಳು ನೆಲೆಸಿ ಕೂಲಿ ಕೆಲಸ ಮಾಡುವ ಕಾರ್ಮಿಕರಿಗೆ, ರಾತ್ರಿ ಮಲಗುವ ಮೊದಲು ಯಕ್ಷಗಾನದ ಒಂದು ಪದವನ್ನಾದರೂ ಕೇಳದೆ ಅಥವಾ ಹಾಡಿಕೊಳ್ಳದೆ ನಿದ್ದೆ ಹತ್ತುವುದಿಲ್ಲ.

ಇದೇ ಥರದಲ್ಲಿ ಇಡೀ ಸಮುದಾಯಕ್ಕೆ ರಂಗಭೂಮಿಯ ಗೀಳು ಹತ್ತಿಸಿ ಕೊಂಡಿರುವ ಇನ್ನೊಂದು ಭಾಗ, ಉತ್ತರ ಕರ್ನಾಟಕ. ಅಲ್ಲಿ ಪ್ರಾಯಶಃ, ಆದಿಲ್ ಶಾಹಿ ಕಾಲದ ಸಾಂಸ್ಕೃತಿಕ ಕ್ರಾಂತಿಯಿಂದ ಮೊದಲಾಗಿ, ಬಿಜಾಪುರವು ಒಂದು ಸಾಂಸ್ಕೃತಿಕ ಮತ್ತು ರಂಗಕೇಂದ್ರವಾಗಿ ರೂಪುಗೊಂಡಂತೆ ಕಾಣುತ್ತದೆ. ಆ ಭಾಗದಲ್ಲಿ, ಸಾಂಪ್ರದಾಯಿಕವಾದ ದೊಡ್ಡಾಟ, ಶ್ರೀಕೃಷ್ಣಪಾರಿಜಾತಗಳಲ್ಲದೆ ಬೇರೆ ಹತ್ತಾರು ಬಗೆಯ ರಂಗಪ್ರಕಾರಗಳು ಹುಟ್ಟಿಕೊಂಡಿವೆ; ಸುತ್ತಣ ಐದಾರು ಜಿಲ್ಲೆಗಳಲ್ಲಿ ವ್ಯಾಪಿಸಿಕೊಂಡಿವೆ. ಈ ಪ್ರಕಾರಗಳಲ್ಲಿ ಕೂಡಾ ಕೆಲಮಟ್ಟಿನ ವಾಣಿಜ್ಯರಂಗಭೂಮಿ ಬೆಳೆದುಕೊಂಡದ್ದಿದೆ. ಒಟ್ಟಿನಲ್ಲಿ ಉತ್ತರಕರ್ನಾಟಕದ ಬಹುಭಾಗ ಸಮುದಾಯಗಳ ಬದುಕಿನಲ್ಲಿ ಮೇಲಿನ

ಹಲವು ರಂಗಸಂಪ್ರದಾಯಗಳು ಆಪ್ತವಾಗಿ ಅನಿವಾರ್ಯವೆನ್ನುವಂತೆ ಬೆಳೆದುಕೊಂಡಿವೆ – ಜೋಳದ ಹಿಟ್ಟು, ಪಲ್ಯ, ಕುಸುಬೆ ಎಣ್ಣೆಗಳ ಅವರ ಆಹಾರ ಸಂಸ್ಕೃತಿಯ ಹಾಗೇ.

ಇನ್ನುಳಿದ ದಕ್ಷಿಣ ಕರ್ನಾಟಕ ಭಾಗವು ಹೆಚ್ಚಾಗಿ ರಾಗಿ-ಅಕ್ಕಿ-ಸೇಂಗಾ ಎಣ್ಣೆಗಳ ಆಹಾರ ವೈಶಿಷ್ಟ್ಯವುಳ್ಳದ್ದು. ಮೂಡಲಪಾಯ ಯಕ್ಷಗಾನ, ಗೊಂಬೆಯಾಟ, ಹರಿಕಥೆ ಮುಂತಾದವು ಇಲ್ಲಿನ ರಂಗವೈಶಿಷ್ಟ್ಯಗಳು.

ಹೀಗೆ ಒಟ್ಟಿನಲ್ಲಿ ಸುಮಾರು ೨೫-೩೦ ಸಾಂಪ್ರದಾಯಿಕ - ಜಾನಪದ ರಂಗಪ್ರಕಾರಗಳು ದಿನವೂ ಬೆಳೆಯುವ ಹಸಿರು ಬಳ್ಳಿ ಹಂದರದಂತೆ ಇಡೀ ಕರ್ನಾಟಕವನ್ನು ಆಚ್ಛಾದಿಸಿಕೊಂಡಿವೆ.

ಈ ಶತಮಾನದ ಪ್ರಾರಂಭದಿಂದ ನಮ್ಮ ಕಂಪನಿ ನಾಟಕವು ಹಳೆಯ ಮೈಸೂರು-ಮುಂಬೈ ಪ್ರಾಂತ-ಮದರಾಸು ಪ್ರಾಂತ ಮೂರು ಶಾಖೆಗಳಾಗಿ ಬೆಳೆದು, ಐದಾರು ದಶಕಗಳ ಕಾಲ ಇಡೀ ಕರ್ನಾಟಕದಲ್ಲಿ ಮೆರೆದಾಡಿತು. ಈಚಿನ ದಶಕಗಳಲ್ಲಿ ಅವು ಸೊರಗುತ್ತಿವೆ. ಜನರು ಕಂಪನಿ ನಾಟಕಗಳನ್ನು ನೋಡುತ್ತಿದ್ದರಷ್ಟೇ ಅಲ್ಲ, ಅವುಗಳನ್ನು ತಮ್ಮ ತಮ್ಮ ಊರುಗಳಲ್ಲಿ ತಾವೇ ಅನುಕರಿಸಿ ಆಡಿಕೊಳ್ಳುತ್ತಿದ್ದರು. ಕಂಪನಿ ನಾಟಕಗಳ ಇಳಿಗಾಲ ಪ್ರಾರಂಭವಾದಮೇಲೂ ಕಂಪನಿ ಅನುಕರಣೆಯು ಗ್ರಾಮೀಣ ವಿಲಾಸಿ ರಂಗಭೂಮಿಯಲ್ಲಿ ಇವತ್ತಿಗೂ ಮುಂದುವರಿದುಕೊಂಡೇ ಬರುತ್ತಿದೆ. ಊರಿನ ಬಯಲಲ್ಲೇ ಬಣ್ಣದ ಚಿತ್ರಪರದೆ - ವಿಂಗ್ಸ್‌ಗಳನ್ನು ಕಟ್ಟಿ ಹಾರ್ಮೋನಿಯಮ್ - ತಬಲಾಗಳ ಸಮೇತ ಅನೇಕ ಹಾಡುಗಳನ್ನೊಳಗೊಂಡು ನಡೆವ ಇಂಥ ರಂಗಪ್ರದರ್ಶನಗಳು ಇವೊತ್ತಿಗೂ ಆಯಾ ಸಮುದಾಯದ ಪ್ರತಿಷ್ಠೆಗೆ ಸಾಕ್ಷಿಗಳಾಗುತ್ತವೆ. ವಿಲಾಸಿ ತಂಡಗಳಿಗೆ ನಾಟಕಗಳನ್ನು ಕಲಿಸಲಿಕ್ಕಾಗಿಯೇ ಅಲ್ಲಲ್ಲಿ 'ಪೇಟಿ ಮಾಸ್ತರು' ಗಳಿರುತ್ತಾರೆ. ತಮ್ಮ ನಾಟಕಕ್ಕೆ ಹೆಚ್ಚಿನ ಪ್ರತಿಷ್ಠೆ ಸಿಕ್ಕಬೇಕೆನ್ನುವವರು, ಮುಖ್ಯ ಪಾತ್ರಕ್ಕೆ ವೃತ್ತಿ ನಟಿಯರನ್ನು, ಕೆಲವೊಮ್ಮೆ ವೃತ್ತಿ ನಟರನ್ನು ಕೂಡಾ ಹಣಕೊಟ್ಟು ಕರೆಸಿಕೊಳ್ಳುವುದುಂಟು. ಗ್ರಾಮಾಂತರ ಪ್ರದೇಶಗಳು ಮಾತ್ರವಲ್ಲ, ಮೈಸೂರಿನಂಥ ದೊಡ್ಡ ನಗರದಲ್ಲಿ ಕೂಡಾ ಇವೊತ್ತಿಗೂ ಉತ್ಥಾನದ್ವಾದಶಿಯಂಥ ಜಾಗರಣೆಯ ರಾತ್ರಿಗಳಲ್ಲಿ, ಓಣಿ ಓಣಿಗಳ ಸಮುದಾಯಗಳವರು ರಾತ್ರಿಯಿಡೀ ಇಂಥ ಪ್ರದರ್ಶನಗಳನ್ನು ನಡೆಸುವುದುಂಟು.

ಉತ್ತರ ಕರ್ನಾಟಕದಲ್ಲಿ ಶ್ರೀಕೃಷ್ಣ ಪಾರಿಜಾತವೇ ಮುಂತಾದ ಆಟಗಳಿಗೋಸ್ಕರ ವೃತ್ತಿನಟಿ (ಚಿಮಣಾ) ಯರನ್ನು ಒದಗಿಸಿಕೊಡುವ ಪ್ರತ್ಯೇಕ ಜಾತಿ ವಂಶಗಳೇ ಇದ್ದುಕೊಂಡಿವೆ. ಬಳ್ಳಾರಿ ಜಿಲ್ಲೆಯ ಕೆಲವು ಊರುಗಳು ಮೀಸಲು ನಟಿಯರನ್ನು ಸೃಜಿಸಿಕೊಡುವ ಕೈಂಕರ್ಯವನ್ನು ಪರಂಪರಾಗತವಾಗಿ ಕೈಗೊಂಡು ಬಂದಿವೆ. ಅಲ್ಲಿನ



ಗೃಹಸ್ಥಕುಟುಂಬಗಳು, ಅದೊಂದು ವ್ರತವೆನ್ನುವ ಥರದಲ್ಲಿ, ಮನೆಯ ಮೊದಲ ಹೆಣ್ಣು ಮಗುವನ್ನು 'ನಟಿ'ಯಾಗಲು ಮೀಸಲಿಡುತ್ತಾರೆ. ಹಲವು ಕಡೆಗಳಲ್ಲಿ 'ದೇವದಾಸಿ' 'ವೇಶ್ಯೆ' ಕುಲದವರು ರಂಗಭೂಮಿಗಾಗಿ ತರಬೇತಿ ಪಡೆದುಕೊಂಡು ಅದನ್ನು ವೃತ್ತಿಯಾಗಿ ಕೈಗೊಂಡಿರುವುದುಂಟು.

ಒಟ್ಟೂ ಕನ್ನಡ ರಂಗಚಟುವಟಿಕೆಗಳಲ್ಲಿ ಇಂಥ 'ಸಾಮುದಾಯಿಕ ರಂಗಭೂಮಿ' ಯ ಪಾಲು ಶೇಕಡಾ ಎಪ್ಪತ್ತಕ್ಕೂ ಹೆಚ್ಚು ಎನ್ನುವುದು ನನ್ನ ಅಂದಾಜು. ಈ ಅಂದಾಜನ್ನು ಅಂಕೆಸಂಖ್ಯೆಗಳ ಮೂಲಕ ಸಾಬೀತುಗೊಳಿಸಿದರೆ ನಮ್ಮ ವಿದ್ಯಾವಂತ ವರ್ಗದ (ಅಂದರೆ, ದಿನನಿತ್ಯವೂ ವಾರ್ತಾಪತ್ರಿಕೆಗಳನ್ನೋದಿ ಚರ್ಚಿಸುವ ವರ್ಗ ಅಂತ ಸ್ಥೂಲವಾಗಿ ಇಟ್ಟುಕೊಳ್ಳೋಣ) ವಿಮರ್ಶಕರು ಕೊಂಚ ಬೆರಗಾಗಬಹುದು, ಹಾಗಾದರೂ ಈ ರಂಗಭೂಮಿಯು ಸಮಕಾಲೀನ ಮತ್ತು ಜೀವಂತ ಎಂದು ಅವರಿಗೆ ಮನವರಿಕೆಯಾಗುವುದಿಲ್ಲ. ಈ ಕಾರಣದಿಂದಲೇ ನಮ್ಮ ಸಾಂಪ್ರದಾಯಿಕ-ಜಾನಪದ ರಂಗಪ್ರಕಾರಗಳು ಕಾಲಕ್ರಮದಲ್ಲಿ ಶುದ್ಧಮೂಲವಾಗಿ ಉಳಿಯದೆಯೇ ಬದಲಾಗುತ್ತ ಸಂಕರಗೊಳ್ಳುತ್ತ ಕುಲಗೆಡುತ್ತಿವೆ ಎಂದು ಆತಂಕಗೊಂಡು ದೂರುತ್ತಾರೆ. ಈ ರಂಗಭೂಮಿಯು ನಿಜವಾಗಿ ಅವರು ಶೋಧಿಸಿರುವುದಕ್ಕಿಂತಲೂ ಮಾತ್ರವಲ್ಲ, ಊಹಿಸಬಹುದಾದ್ದಕ್ಕಿಂತಲೂ ಹೆಚ್ಚು ವೇಗದಲ್ಲಿ ಬದಲುಗೊಳ್ಳುತ್ತಿದೆ.

ನಾನೇ ಕಂಡಹಾಗೆ ಕಳೆದ ಐವತ್ತು ವರ್ಷಗಳಲ್ಲಿ ಯಕ್ಷಗಾನದಲ್ಲಾಗಿರುವ ಬದಲಾವಣೆಗಳು ಆಶ್ಚರ್ಯ ಹುಟ್ಟಿಸುತ್ತವೆ. ನನ್ನ ಬಾಲ್ಯದಲ್ಲಾಗಲೇ ಯಕ್ಷಗಾನದ ಮೇಲೆ ಕಂಪನಿ ನಾಟಕದ ಪ್ರಭಾವವು ಬೇಕೆನ್ನುವಷ್ಟು ಕಾಣುತ್ತಿತ್ತು. ಪ್ರದರ್ಶನ-ರಂಗಸ್ಥಳ-ದೀಪಧ್ವನಿ ವ್ಯವಸ್ಥೆ, ವೇಷವರ್ಣಿಕೆ, ಹಾಡುಗಾರಿಕೆ, ಕುಣಿತ, ಮಾತು, ಅಭಿನಯಶೈಲಿ, ಪ್ರದರ್ಶನ ಪಠ್ಯಗಳು ಮುಂತಾದವು ಮೊದಲಿಗೆ ಕಂಪನಿ ನಾಟಕಗಳಿಂದ ಮತ್ತು ಅನಂತರ ಸಿನೆಮಾದಿಂದ ಈಚೆಗೆ ದೂರದರ್ಶನದಿಂದ ಕೂಡಾ ಪ್ರಭಾವಿತಗೊಳ್ಳುತ್ತ ಬಂದಿವೆ. ವಿದ್ಯುತ್ ದೀಪದಿಂದ ಮೊದಲುಗೊಂಡು ಪ್ಲಾಸ್ಟಿಕ್ ಮಣಿಯತನಕ, ಹೊಸ ವಸ್ತುಗಳು ಅದರಲ್ಲಿ ಸೇರಿಕೊಳ್ಳುತ್ತ ಬಂದಿವೆ. ಒಂದು ಚಿಕ್ಕ ಉದಾಹರಣೆ ಹೇಳುತ್ತೇನೆ: ಕಾಳಿಂಗ ನಾವಡರೆಂಬ ಯಕ್ಷಗಾನ ಭಾಗವತರು ಎಳವೆಯಲ್ಲೇ ಭಾರೀ ಪ್ರಸಿದ್ಧಿ ಗಳಿಸಿ, ಕೆಲವೇ ವರ್ಷ ಹಿಂದೆ ಅರೆವಯಸ್ಸಿನಲ್ಲಿ ತೀರಿಕೊಂಡರು. ತುಂಬ ಸಾಂಪ್ರದಾಯಿಕ ಗುರುಗಳಿಂದ ಕಲಿತ ಅವರು ಸಂಪ್ರದಾಯಕ್ಕೆ ಬದ್ಧರಾಗಿ ಹಾಡುವವರೆಂದು ಹೆಸರಾಗಿದ್ದರು. ಅವರ ಹಾಡುಗಾರಿಕೆಯಲ್ಲಿನ ಒಂದು ಹೊಸವೋಡಿ ಜನರನ್ನು ಸೆಳೆಯುತ್ತಿತ್ತು. ಅದನ್ನು ವಿಶ್ಲೇಷಿಸಿದ ಸಂಗೀತ ತಜ್ಞರೊಬ್ಬರು, ಅವರ ಹಾಡುಗಾರಿಕೆಯ ಸಾಂಪ್ರದಾಯಿಕತೆಯ ಚೌಕಟ್ಟಿನಲ್ಲೇ

ಸಿನೆಮಾ ಸಂಗೀತದ ಕೆಲವು ಮಾಧುರ್ಯಾಂಶಗಳು ಪತ್ತೆಯಾಗದಂತೆ ಬೆರೆತಿರುವುದನ್ನು ಕಾಣಿಸಿಕೊಟ್ಟಿದ್ದಾರೆ.

ಹಿಂದೆ ಪ್ರಸಿದ್ಧವಾಗಿದ್ದ ಅನೇಕ ಪ್ರಸಂಗಗಳು ಈಗ ಕಾಣೆಯಾಗಿ, ಹಿಂದೆ ಅಪ್ರಸಿದ್ಧವಾದುವೆಷ್ಟೋ ಈಗ ಬಹಳ ಜನಪ್ರಿಯವಾಗಿವೆ. ಹಿಂದಿನ ಶತಮಾನಗಳ ನೂರಾರು ಪ್ರಸಂಗಗಳ ಜತೆಗೆ ಈ ಶತಮಾನದಲ್ಲಿ ಅವಕ್ಕೆ ಮೂರುನಾಲ್ಕು ಪಟ್ಟು ಹೆಚ್ಚಿನ ಸಂಖ್ಯೆಯ ಪ್ರಸಂಗಗಳು ರಚಿತವಾಗಿ ಪ್ರಕಟಗೊಂಡಿವೆ. ಗ್ರೀಕ್ ನಾಟಕ-ಶೇಕ್‌ಸ್ಪಿಯರ್ ನಾಟಕ ಕಥೆಗಳು ಯಕ್ಷಗಾನ ಪ್ರಸಂಗಗಳಾಗಿ ರೂಪಾಂತರಗೊಂಡಿವೆ. ಸಾಂಪ್ರದಾಯಿಕ ಪೌರಾಣಿಕ ಪ್ರಸಂಗಗಳೇ ಹಿಂದೆ ಪ್ರದರ್ಶಿತವಾಗುತ್ತಿದ್ದರೆ, ಈ ಐವತ್ತು ವರ್ಷಗಳ ಅವಧಿಯಲ್ಲಿ – ದಶಕದಿಂದ ದಶಕಕ್ಕೆ ಪ್ರದರ್ಶನ ಲಹರಿ ಬದಲಾಗುತ್ತ – ಸ್ಥಳಕಥೆಗಳು, ಜಾನಪದ ಕಥೆಗಳು, ಭೂತಕಥೆಗಳು, ವೀರಕಥೆಗಳು ಜನಪ್ರಿಯವಾಗುತ್ತ ಬಂದಿವೆ. ದೈವಸಂಬಂಧವೇ ಇಲ್ಲದ ಸೆಕುಲರ್ ಪ್ರಸಂಗಗಳು ಕೂಡಾ ಬಂದಿವೆ.

ಶೇಕ್‌ಸ್ಪಿಯರ್ ಮೊತ್ತಮೊದಲು ಕನ್ನಡಕ್ಕೆ ಬಂದದ್ದೇ ಯಕ್ಷಗಾನ ಪ್ರಸಂಗವೊಂದರ (ಸು. ಕ್ರಿ.ಶ. ೧೮೬೫) ಮೂಲಕ ಅಂತ ಈಚೆಗೆ ಸಂಶೋಧಿತವಾಗಿದೆ. ೧೯೫೦ರ ದಶಕದಲ್ಲಿ ಪ್ರಕಟವಾದ ಎರಡು ಯಕ್ಷಗಾನ ಪ್ರಸಂಗಗಳನ್ನು ಉಲ್ಲೇಖಿಸುತ್ತೇನೆ: ಅವುಗಳಲ್ಲೊಂದು, ಹೈದರಾಬಾದ್ ನಿಜಾಮ್ ರಾಜ್ಯವು ಸ್ವತಂತ್ರ ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾದ ಕಥೆಯನ್ನು ನಿರೂಪಿಸುವ 'ಹೈದರಾಬಾದ್ ವಿಜಯ' ಅಥವಾ 'ರಜಕಾರಾಸುರ ಸಂಹಾರ' ; ಇನ್ನೊಂದು, ಈಜಿಪ್ಟಿನ ಅಧ್ಯಕ್ಷ ನಾಸೆರ್, ಸುಯೆಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದ ಕಥೆಯನ್ನು ಹೇಳುವ 'ನಸ್ಸೇರ ಪ್ರತಾಪ'. ಇಂಥವು ಪ್ರದರ್ಶನ ಕಾಣದಿದ್ದರೂ 'ತಾಳಮದ್ದಳೆ' ಗಳಲ್ಲಿ ಬಳಕೆಯಾಗಿವೆ.

ಇಲ್ಲಿ ನಾನು 'ಸಂಗ್ಯಾ ಬಾಳ್ಯಾ' ಎಂಬ ನಾಟಕ ಕೃತಿಯನ್ನು ಪ್ರಸ್ತಾಪಿಸಲೇಬೇಕು. ಈ ಕೃತಿ ೧೯ನೇ ಶತಮಾನದ ಕೊನೆಯ ಒಂದೆರಡು ದಶಕಗಳಲ್ಲಿ ರಚಿತ ವಾಗಿದ್ದಿರಬೇಕು. ಒಬ್ಬ ಶಾಲಾಮಾಸ್ತರ ಇದನ್ನು ಬರೆದ ಎನ್ನುತ್ತಾರೆ. ಉತ್ತರ ಕರ್ನಾಟಕದ ಒಂದು ಹಳ್ಳಿಯಲ್ಲಿ ನಡೆದ ಅನೈತಿಕ ಪ್ರೇಮಪ್ರಕರಣ ಮತ್ತು ಅದರ ಫಲವಾಗಿ ಸಂಭವಿಸಿದ ಕೊಲೆ – ಈ ನಿಜ ಘಟನೆಯನ್ನಾಧರಿಸಿ, ಅದಕ್ಕೆ ಸಂಬಂಧಿಸಿದ ಕ್ರಿಮಿನಲ್ ಕೇಸು ಕೋರ್ಟಿನಲ್ಲಿ ವಿಚಾರಣೆ ಯಾಗುತ್ತಿದ್ದ ಹಂತದಲ್ಲೇ, ಅದೇ ಊರಿನ ಶಾಲಾಮಾಸ್ತರ ಈ ನಾಟಕವನ್ನು ಬರೆದು ಆಡಿಸಿದ. ಆ ಕಾರಣಕ್ಕಾಗಿ ಸರ್ಕಾರವು ಕೋರ್ಟಿನ ಆದೇಶದ ಮೇರೆಗೆ ಈ ನಾಟಕ ಪ್ರದರ್ಶನದ ಮೇಲೆ ನಿರ್ಬಂಧ ವಿಧಿಸಿತು.

ಈ ನಾಟಕದ ಪಠ್ಯವು ಪೂರ್ತಾ ಹಾಡುಗಳಲ್ಲೇ ಇದೆ. ಅದನ್ನು ಪ್ರಯೋಗಿಸು



ವಾಗ – ನಮ್ಮ ಇತರ ಜಾನಪದ ರಂಗಪ್ರಕಾರಗಳ ಹಾಗೇ – ನಟರು, ಅದಕ್ಕೆ ಹೊಂದಿ, ತಮ್ಮದೇ ಗದ್ಯಸಂಭಾಷಣೆಗಳನ್ನು ಜೋಡಿಸಿಕೊಳ್ಳುತ್ತಾರೆ. ಹಾಡುಗಳು, ಆ ಭಾಗದ ಸಾಂಪ್ರದಾಯಿಕ ಪ್ರಕಾರವಾದ 'ಶ್ರೀ ಕೃಷ್ಣಪಾರಿಜಾತ'ದ ಧಾಟಿಗಳನ್ನೇ ಹೆಚ್ಚಾಗಿ ಬಳಸಿಕೊಂಡಿವೆ. ಆದರೆ ಹಾಡುಗಳಲ್ಲಿನ ನುಡಿಕಟ್ಟುಗಳು ಮತ್ತು ಲಯವು ಅಲ್ಲಿನ ದಿನನಿತ್ಯದ ಆಡುಮಾತಿಗೆ, ಆಶ್ಚರ್ಯಕರವೆನಿಸುವಷ್ಟು, ಸಮೀಪವಾಗಿವೆ. ಎಷ್ಟೆಂದರೆ, ಈ ಹಾಡುಗಳನ್ನು ಕೇಳುತ್ತಿರುವಾಗ, ಕ್ರಮೇಣ ಅವು ಹಾಡು ಎನ್ನುವುದೆ ಮರೆತು ದಿನನಿತ್ಯದ ಗದ್ಯಸಂಭಾಷಣೆಗಳನ್ನೇ ಕೇಳುತ್ತಿದ್ದೇವೆ ಎನ್ನಿಸುತ್ತದೆ.

ಮಹತ್ವದ್ದೆಂದರೆ – ಆಗ ತಾನೇ ಗ್ರಾಮೀಣ ಭಾಗಗಳಿಗೂ ಪ್ರವೇಶಿಸಲು ತೊಡಗಿದ್ದ ಆಧುನಿಕ ನಾಗರಿಕತೆಗೆ ಈ ಕೃತಿಯು ಅತ್ಯಂತ ಸೂಕ್ಷ್ಮ ಸಂವೇದನೆಗಳಿಂದ ಅತ್ಯಂತ ಪ್ರೌಢವಾಗಿ ಪ್ರತಿಕ್ರಿಯೆಗೊಟ್ಟಿದೆ ಎನ್ನುವುದು. ಇಲ್ಲಿನ ನಾಯಕಿ, ಮದುವೆಯಾಗಿ ಇನ್ನೂ ಮಕ್ಕಳಾಗದ ಎಳೆಯ ಚೆಲುವೆ; ಅವಳ ಶ್ರೀಮಂತ ಗಂಡ ಮುತ್ತುರತ್ನ ವ್ಯಾಪಾರಕ್ಕಾಗಿ ಊರೂರು ತಿರುಗುವವ; ಊರಿನ ಒಬ್ಬ ಶ್ರೀಮಂತ ತರುಣ ಇವಳಲ್ಲಿ ಅನುರಕ್ತನಾಗಿ, ಮೊದಲಿಗೆ ಆಕೆ ಪ್ರತಿಭಟಿಸಿದರೂ ಬಿಡದೆ ಒಲಿಸಿಕೊಂಡು, ಲೈಂಗಿಕ ಸಂಬಂಧ ಪಡೆದುಕೊಳ್ಳುತ್ತಾನೆ; ಅತಿ ಬಡವನಾದ ಅವನ ಆಪ್ತ ಸ್ನೇಹಿತನೊಬ್ಬ ಈತನಿಗೆ ನೆರವಾಗುತ್ತಾನೆ; ಸಂಚಾರ ಹೋದ ಗಂಡ ವಾಪಾಸಾದಾಗ ಅವನಿಗೆ ವಿಷಯ ತಿಳಿಯುತ್ತದೆ; ಅವನು ಬಡತನದ ಕೀಳರಿಮೆಯಲ್ಲಿದ್ದ ಆಪ್ತಸ್ನೇಹಿತನನ್ನು ಮೊದಲಿಗೆ ಬೆದರಿಸಿ, ಅನಂತರ ಹಣಕೊಟ್ಟು ಒಲಿಸಿಕೊಂಡು ಅವನ ನೆರವಿನಿಂದಲೇ ಶ್ರೀಮಂತ ತರುಣನನ್ನು ಹಿಡಿದು ಕೊಲೆಮಾಡುತ್ತಾನೆ. ಹೊಸದಾಗಿ ಮುಂಬೈನಿಂದ ಇಲ್ಲಿ ಬಂದು ಜವಳಿ ವ್ಯಾಪಾರ ತೊಡಗಿರುವ ಮಾರವಾಡಿಯ ಅಂಗಡಿ, ಊರಿನ ದೊಡ್ಡ ಜಾತ್ರೆ, ದೇವಾಲಯ ಮುಂತಾದ ಹೊರಾಂಗಣಗಳಲ್ಲಿ ಪುಷ್ಟಿಗೊಳ್ಳುವ ಈ ಕಥೆಯು ಅಂತಿಮವಾಗಿ, ಇಂಗ್ಲಿಷ್ ಸರ್ಕಾರವು ಹೊಸದಾಗಿ ಸ್ಥಾಪಿಸಿದ ಕೋರ್ಟಿನಲ್ಲಿ ಕೊಲೆ ಮಾಡಿದವನು ಬಂದು ಶರಣಾಗುವ ದೃಶ್ಯದಲ್ಲಿ ಮುಗಿಯುತ್ತದೆ. 'ಸಂಗ್ಯಾಬಾಳ್ಯಾ', ಒಂದು ಜಾನಪದ ನಾಟಕ ಪಠ್ಯವೆಂದು ಕಂಡರೂ ಆಧುನಿಕ ನಾಗರಿಕತೆಗೆ ಪ್ರಬುದ್ಧವಾಗಿ ಪ್ರತಿಕ್ರಿಯೆಗೊಟ್ಟಿರುವ ಅದು ನಿಜವಾಗಿ, ಆಧುನಿಕ ಕನ್ನಡ ಸಾಹಿತ್ಯದ ಪ್ರಪ್ರಥಮ ಗಣ್ಯ ಸಾಹಿತ್ಯ ಕೃತಿಯಾಗಿದೆ, ಅನನ್ಯವಾದ್ದಾಗಿದೆ.

ಒಂದು ವಾಸ್ತವ ಘಟನೆಯ ಬೆನ್ನಿನಲ್ಲೇ ಅದನ್ನು ಕುರಿತ ನಾಟಕ ಮತ್ತು ನಾಟಕದ ಜೊತೆಗೇ ಅದರ ಪ್ರಯೋಗ ನಡೆದು, ಪ್ರಯೋಗಗಳು ಭಾರೀ ಜನಪ್ರಿಯವಾಗತೊಡಗಿದಾಗ, ಸರ್ಕಾರವು ಅದನ್ನು ನಿಷೇಧಿಸುವುದು ಅನಿವಾರ್ಯ ವಾಯಿತು. (ಆಗ ವಿಧಿಸಿದ ನಿಷೇಧವು ಈತನಕವೂ ತೆರವಾಗದೆ ಉಳಿದು ಬಿಟ್ಟಿದೆ;

ಹಾಗಾಗಿ, ಮೊನ್ನೆ ಮೊನ್ನೆಯತನಕ ಹಳ್ಳಿಗಳಲ್ಲಿ ಸಂಗ್ಯಾಬಾಳ್ಯಾ ಪ್ರದರ್ಶನ ನಡೆಯುತ್ತಿದ್ದರೆ ಪೋಲೀಸರು ಅಲ್ಲಿ ಹೋಗಿ ಹೆದರಿಸಿ ಲಂಚ ಕೀಳುತ್ತಿದ್ದರು.)

ಕಳೆದ ನೂರು ವರ್ಷಗಳಲ್ಲಿ, ಮುಖ್ಯವಾಗಿ ಉತ್ತರಕರ್ನಾಟಕದ ಆರೆಂಟು ಜಿಲ್ಲೆಗಳ ತುಂಬಾ ಊರೂರು ಹಳ್ಳಿಹಳ್ಳಿಗಳಲ್ಲಿ, ವರ್ಷ ತಪ್ಪದೆ, ಈ ನಾಟಕದ ಪ್ರದರ್ಶನಗಳು ನಡೆದುಕೊಂಡು ಬರುತ್ತಿವೆ. ಅಲ್ಲಲ್ಲಿನವರು ಈ ನಾಟಕಕ್ಕೆ ತಮ್ಮದೇ ಸ್ಥಳೀಯ ಶೈಲಿಗಳನ್ನು ರೂಢಿಸಿಕೊಂಡಿದ್ದಾರೆ. ಈ ತನಕ ಈ ನಾಟಕದ ಒಟ್ಟೂ ಎಷ್ಟು ಪ್ರದರ್ಶನಗಳು ನಡೆದಿರಬಹುದೆನ್ನುವುದನ್ನು ಲೆಕ್ಕ ಹಾಕುವುದಿರಲಿ, ಊಹಿಸಲಿಕ್ಕೂ ಕಷ್ಟವೇ. ಕಳೆದ ೩೦ ವರ್ಷಗಳಲ್ಲಿ ಕನ್ನಡದ ವಿಲಾಸಿ ರಂಗಭೂಮಿಯವರೂ ಇದನ್ನು ವಿವಿಧ ಶೈಲಿಗಳಲ್ಲಿ ಪ್ರದರ್ಶಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ಇದು ಚಲನಚಿತ್ರ ವಾಗಿಯೂ ಹೊರಬಂದಿದೆ.

'ಸಂಗ್ಯಾಬಾಳ್ಯಾ' ಮಾದರಿಯದೇ ಇನ್ನೊಂದು ಕೃತಿ, 'ಕಡ್ಲಿಮಟ್ಟಿ ಸ್ಟೇಶನ್ ಮಾಸ್ಟರ್'. ಈ ಶತಮಾನದ ೨-೩ ನೇ ದಶಕ ಸುಮಾರಿನಲ್ಲಿ ಇದು ರಚಿತ ವಾದದ್ದಿರಬೇಕು. ಒಂದು ರೈಲ್ವೆ ಸ್ಟೇಶನ್‌ನಲ್ಲಿ, ಪ್ರವಾಸಹೊರಟಿದ್ದ ಒಬ್ಬ ಹೆಂಗಸಿನ ಮೇಲೆ ಅಲ್ಲಿನ ಸ್ಟೇಶನ್ ಮಾಸ್ಟರ್ ಅತ್ಯಾಚಾರ ನಡೆಸಿದ ಕಥೆ ಇದರಲ್ಲಿ ನಿರೂಪಿತವಾಗಿದೆ. ಇದು 'ಸಂಗ್ಯಾ ಬಾಳ್ಯಾ' ದಷ್ಟು ಪ್ರೌಢವಾದ್ದಲ್ಲವಾದರೂ, ಹೊಸ ನಾಗರಿಕತೆಗೆ ಸಂಕೇತವಾದ ರೈಲು-ರೈಲುನಿಲ್ದಾಣಗಳನ್ನು ಕೇಂದ್ರವಾಗಿಟ್ಟುಕೊಂಡು ಆಧುನಿಕ ನಾಗರಿಕತೆಗೆ ಇದು ಪ್ರತಿಕ್ರಿಯೆಗೊಡುವ ರೀತಿಯು ಉದ್ಬೋಧಕವಾದದ್ದು.

ನಾಟಕಗಳ ಕಥೆಯಾದಮೇಲೆ ಒಂದೆರೆಡು ವ್ಯಕ್ತಿಕಥೆಗಳನ್ನು ನೆನಪಿಸಿ ಕೊಳ್ಳುತ್ತೇನೆ.

ನಮ್ಮಲ್ಲಿ ಕೆ.ವಿ. ಶಂಕರೇಗೌಡ ಎಂಬ ಹೆಸರಾದ ರಾಜಕಾರಣಿಯಿದ್ದರು. ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿಯಾಗಿದ್ದ ಅವರು ತಮ್ಮ ಜಿಲ್ಲೆಯ ಅಭಿವೃದ್ಧಿಗಾಗಿ ತುಂಬ ದುಡಿದವರು; ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರು. ದೀರ್ಘಕಾಲ ಅವರು ಶಾಸಕರಾಗಿ, ಎರಡು ಮೂರು ಅವಧಿಗಳ ಕಾಲ ರಾಜ್ಯದ ಮಂತ್ರಿಗಳೂ ಆಗಿ ಬಹು ದಕ್ಷರೆಂದು ಹೆಸರು ಗಳಿಸಿದ್ದರು. ಅವರಿಗೆ ರಂಗಭೂಮಿಯ ಖಯಾಲಿ. ತಮ್ಮ ಊರಲ್ಲಿ ಅವರು ಒಂದು ಗ್ರಾಮೀಣ ನಾಟಕಮಂಡಲಿಯನ್ನು ಕಟ್ಟಿದ್ದರು; ನಾಟಕ ಮಾಡಿಸುತ್ತಿದ್ದುದಲ್ಲದೆ ತಾವೇ ಸ್ವತಃ ಮುಖ್ಯಪಾತ್ರಗಳಲ್ಲಿ ನಟಿಸುತ್ತಿದ್ದರು. ನಾಟಕಗಳ ಮೂಲಕ ಅವರು ಸಾರ್ವಜನಿಕ ಕೆಲಸಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಕೂಡಿಸಿದ್ದರು. ತಮ್ಮ ನಾಟಕ ಮಂಡಲಿಗಾಗಿ ಅವರು ಒಬ್ಬ ಹಾರ್ಮೊನಿಯಂ ಮಾಸ್ತರನನ್ನು ಕರೆಸಿ, ಅವನಿಗೆ ಆರು



ಎಕರೆ ಸ್ವಂತ ಜಮೀನನ್ನು ಕೊಟ್ಟು ಊರಲ್ಲಿ ನಿಲ್ಲಿಸಿಕೊಂಡರು. ರಾಜಕಾರಣಿಯಾಗಿ ತಮ್ಮ ಚುನಾವಣೆಗಳಿಗೆ ಹೆಚ್ಚು ಖರ್ಚುಮಾಡದ ಅವರು ನಾಟಕ ಸಂಸ್ಥೆಗೆಂದರೆ ಉದಾರವಾಗಿ ಖರ್ಚು ಮಾಡುತ್ತಿದ್ದರು. ರಾಜ್ಯದ ಹಿರಿಯ ಮಂತ್ರಿಯಾಗಿ ಮಂತ್ರಿಪೀಠದಲ್ಲಿ ಕೂರುವಷ್ಟೇ, 'ಪಾದುಕಾ ಪಟ್ಟಾಭಿಷೇಕ'ದಲ್ಲಿ ದಶರಥನಾಗಿ ನಾಟಕ ಸಿಂಹಾಸನದ ಮೇಲೆ ಕೂರುವುದೂ ಅವರಿಗೆ ಪ್ರತಿಷ್ಠೆಯ ಸಂಗತಿಯಾಗಿತ್ತು.

ನಮ್ಮ ಪಕ್ಕದ ಜಿಲ್ಲೆಯಲ್ಲಿ ರಾ.ವೆ. ವಾಲಗಳ್ಳಿ ಎಂಬವರಿದ್ದರು. ನಾಟಕದ ಗೀಳು ಹಚ್ಚಿಕೊಂಡು ಅವರು ಪೂರ್ವವಯಸ್ಸಿನಲ್ಲೇ ಪಿತ್ರಾರ್ಜಿತವಾಗಿ ಬಂದ ದೊಡ್ಡ ಆಸ್ತಿಯಷ್ಟನ್ನು ತೊಳೆದುಬಿಟ್ಟರು. ಆಮೇಲೆ ತನ್ನ ದೀರ್ಘಾಯುಷ್ಯದುದ್ದಕ್ಕೂ ಊರೂರಿನಲ್ಲಿ ಹೋಗಿ ನಾಟಕ ಮಾಡಿಸುತ್ತ ಸ್ವತಃ ಅಭಿನಯಿಸುತ್ತ ಕಡು ಬಡತನದಲ್ಲೇ ಬದುಕನ್ನು ಕಳೆದರು. 'ಬಡತನ' ವೆಂಬ ಶಬ್ದವನ್ನು ನಿಜವಾಗಿ ಅವರಿಗೆ ಬಳಸಲೇ ಕೂಡದು. ಸಾವಿನ ಕಡೆಗಳಿಗೆಯ ತನಕ ಅವರು ರಂಗಶ್ರೀಮಂತನ ಹಿರಿ ಹೆಮ್ಮೆಯಿಂದಲೇ ಬಾಳಿದರು; ಜನರೂ ಆತನ ಶ್ರೀಮಂತಿಕೆಯನ್ನು ಗಣಿಸಿ ಕಡೆತನಕ ಗೌರವಿಸಿದರು.

ನಮ್ಮ ಅನೇಕ ಹಳ್ಳಿಗಳು ಊರಿನ ಪ್ರತಿಷ್ಠೆಯ ಕುರುಹಾಗಿ ಒಂದು ನಾಟಕ ಮಂಡಳಿಯನ್ನು ಕಟ್ಟಿಕೊಂಡಿರುವುದಲ್ಲದೆ, ಯಾವುದಾದರೊಂದು ನಾಟಕವನ್ನು ತಮ್ಮ ಪ್ರತಿಷ್ಠೆಯ ಲಾಂಛನವಾಗಿ, ಹತ್ತಾರು ವರ್ಷ (ನಟರು ಬದಲಾಗುತ್ತಿದ್ದರೂ) ಆಡಿಕೊಳ್ಳುತ್ತಿರುವುದುಂಟು. ನಮ್ಮ ಸಮೀಪದ ಒಂದು ಹಳ್ಳಿಯವರು ಹೀಗೆ, 'ಸಾಮ್ರಾಟ್ ಅಶೋಕ' ಎಂಬ ನಾಟಕವನ್ನು ತಮ್ಮ ಲಾಂಛನವಾಗಿಸಿಕೊಂಡಿದ್ದರು. ಅದರಲ್ಲಿ ಅಶೋಕನ ಪಾತ್ರವನ್ನು ವಹಿಸುತ್ತಿದ್ದ ನಟ, ತನ್ನ ಮಗನಿಗೆ 'ಸಾಮ್ರಾಟ್ ಅಶೋಕ' ಅಂತಲೇ ಹೆಸರಿಟ್ಟ. ಸುಮಾರು ೩೦-೩೫ ವರ್ಷಗಳ ಹಿಂದಿನ ಮಾತು ಇದು. ಆ ಹುಡುಗ ದೊಡ್ಡವನಾಗಿ ಹತ್ತಿರದ ಕಾಲೇಜೊಂದರಲ್ಲಿ ಓದಿ ವಾಪಾಸುಬಂದಮೇಲೆ, ಆತನಿಗೆ ತನ್ನ ಹೆಸರಿನಲ್ಲಿ ಕೂಡಿಕೊಂಡಿರುವ 'ಸಾಮ್ರಾಟ್' ಎಂಬ ಅಸಂಗತ ವಿಶೇಷಣವು ಮುಜುಗರವೆನ್ನಿಸಿತು. ಐದಾರು ವರ್ಷಗಳ ಹಿಂದೆ ಅವನು, ತನ್ನ ಹೆಸರನ್ನು ಸಣ್ಣ ತಿದ್ದುಪಡಿಯೊಡನೆ ಎಸ್. ಅಶೋಕ ಅಂತ ಬದಲಿಸಿಕೊಂಡ.

ಕೊನೆಯಲ್ಲಿ – ಈತನಕ ನಾನು ನೆನಪಿಸಿಕೊಂಡಿರುವ ಕಿರುಕಥೆಗಳೆಲ್ಲವನ್ನೂ ನೆಯ್ದು ಒಂದು ಆಕೃತಿಯಾಗಿ ರೂಪುಗೊಳಿಸಬಹುದಾದ ಇನ್ನೊಂದು ಸಮುದಾಯ ಕಥೆಯನ್ನು ಹೇಳಲಿಕ್ಕಿದೆ.

ಸುಮಾರು ೧೯೪೨-೪೩ರ ಸಮಯ; ನಾನು ಮಿಡ್ಲ್‌ಸ್ಕೂಲ್ ಓದುತ್ತಿದ್ದೆ. ನಮ್ಮ

ಪಕ್ಕದ ಜಿಲ್ಲೆಯಲ್ಲಿ ಶಿರಸಿ ಎಂಬ ಕಿರುಪಟ್ಟಣವಿದ್ದು, ದಸರೆಯ ಸಮಯಕ್ಕೆ ಅಲ್ಲಿ ಹತ್ತು ದಿನಗಳ ಕಾಲ 'ನಾಡಹಬ್ಬ' ವೆಂಬ ಸಾಂಸ್ಕೃತಿಕ ಉತ್ಸವ ನಡೆಯುತ್ತಿತ್ತು. ನನ್ನ ಬಂಧುಗಳು ಅಲ್ಲಿದ್ದುದರಿಂದ, ನಾನು ಎರಡು ವರ್ಷ ಹೋಗಿ ಆ ನಾಡಹಬ್ಬದ ಕಾರ್ಯಕ್ರಮಗಳಿಗೆ ಹಾಜರಾಗಿದ್ದೆ. ದಿನವೂ ಸಂಜೆ ೪ ರಿಂದ ರಾತ್ರಿ ೧೦-೧೧ರ ತನಕ ಕಾರ್ಯಕ್ರಮಗಳಿರುತ್ತಿದ್ದವು. ಸಾಹಿತ್ಯ - ಸಂಸ್ಕೃತಿ - ರಾಜಕಾರಣ - ವಿಜ್ಞಾನಗಳಿಗೆ ಸಂಬಂಧಿಸಿದ ಉಪನ್ಯಾಸಗಳು, ಕಾವ್ಯವಾಚನ, ಸಂಗೀತ, ಹರಿಕಥೆ ಮುಂತಾದ ಕಾರ್ಯಕ್ರಮಗಳು, ಮೊದಲಿಗೆ ಮತ್ತು ಕೊನೆಯಲ್ಲಿ ಒಂದು ನಾಟಕ ನಡೆಯುತ್ತಿತ್ತು. ಹತ್ತು ದಿನಗಳ ಒಂದು ದೊಡ್ಡ ಸಾಂಸ್ಕೃತಿಕ ಹಬ್ಬ ಅದು. ಎರಡೂ ವರ್ಷಗಳಲ್ಲಿ ಒಂದು ದಿನ ಮಾತ್ರವಲ್ಲ, ಕಾರ್ಯಕ್ರಮದ ಒಂದು ಕ್ಷಣವನ್ನೂ ಕಳೆದುಕೊಳ್ಳದೆ ಅತ್ಯಂತ ಕುತೂಹಲದಿಂದ ಅದನ್ನು ನೋಡುತ್ತಿದ್ದ ನನಗೆ, ಬಹುಶಃ ಆಗ ಏನೂ ಗೊತ್ತಾಗಿರಲಿಕ್ಕಿಲ್ಲ. ಆದರೆ, ಆ ಅನುಭವ ನನ್ನ ಮೇಲೆ ಎಂಥ ಗಾಢ ಪರಿಣಾಮ ಬೀರಿತೆನ್ನುವುದನ್ನು ಎಷ್ಟೋ ಕಾಲದ ಅನಂತರ ಕಂಡುಕೊಳ್ಳತೊಡಗಿದೆ; ಈ ತನಕ, ಈಗ ಕೂಡಾ ನಾನು ಆ ಅನುಭವದ ಅರ್ಥವಂತಿಕೆಗಳನ್ನು ಹೊಸ ಹೊಸದಾಗಿ ಹುಡುಕಿಕೊಳ್ಳುತ್ತಿರುತ್ತೇನೆ. ಇದು ನಡೆಯುತ್ತಿದ್ದುದು ಅಲ್ಲಿನ 'ಮಾರಿಗುಡಿ' ಯೆನ್ನುವ ದೇವಾಲಯದ ವಿಶಾಲವಾದ ಹಜಾರದಲ್ಲಿ.

ಶಿರಸಿಯ ಮಾರಿಗುಡಿ ಬಹಳ ಪ್ರಖ್ಯಾತವಾದದ್ದು. ಮಾರಿ ಎನ್ನುವುದು ಮೂಲತಃ ಬುಡಕಟ್ಟು ಜನಾಂಗಗಳ ಮಾತೃದೇವತೆ; ಮುಂದೆ, ನಮ್ಮ ಗ್ರಾಮೀಣ ಸಮುದಾಯಗಳಲ್ಲಿ ಈ ದೇವತೆಯ ಪೂಜೆಯು ಸಂಪ್ರದಾಯವಾಗಿ ಬೆಳೆಯಿತು. ಶಿರಸಿಯ ಮಾರಿ ದೇವತೆಗೆ ನಾಲ್ಕೈದು ಶತಮಾನಗಳ ಇತಿಹಾಸವೂ ದೊಡ್ಡ ಸಂಖ್ಯೆಯ ಭಕ್ತರೂ ಬೇರೆ ಖಾಯಂ ಸಂಪನ್ಮೂಲಗಳೂ ಇದ್ದು ಅದೊಂದು ಶ್ರೀಮಂತ ದೇವಾಲಯವಾಗಿತ್ತು. ಊರಿನವರದೇ ಒಂದು ಟ್ರಸ್ಟ್ ಅದರ ಆಡಳಿತ ನಡೆಸುತ್ತಿತ್ತು. ಟ್ರಸ್ಟಿನವರು ದೇವಾಲಯದ ಪ್ರಾಂಗಣದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿಯೇ (ಸಭೆ ಸಮ್ಮೇಲನ, ಸಾಂಸ್ಕೃತಿಕ ಉತ್ಸವಗಳು, ಮದುವೆ ಇ.,) ಒಂದು ದೊಡ್ಡ ಹಜಾರವುಳ್ಳ ಕಟ್ಟಡವನ್ನು ಕಟ್ಟಿಸಿದ್ದರು. ಆ ದೇವತೆಯು ಊರಿನ ಸರ್ವಪ್ರಥಮ ದೇವತೆಯಾಗಿದ್ದು ಬ್ರಾಹ್ಮಣರಿಂದ ಹಿಡಿದು ಅಂತ್ಯಜರ ತನಕ ಎಲ್ಲ ಜಾತಿಯ ಜನರೂ ಅದಕ್ಕೆ ಭಕ್ತರಾಗಿ ನಡೆದುಕೊಳ್ಳುತ್ತಿದ್ದರು. ಅದರ ಪೂಜೆಗೆ ಬ್ರಾಹ್ಮಣರು ನೇಮಕಗೊಂಡಿದ್ದರೂ ಉಳಿದವರು ಕೂಡ ತಮ್ಮ ತಮ್ಮ ರೀತಿಯಲ್ಲಿ ಅದಕ್ಕೆ ಪೂಜೆ ಸಲ್ಲಿಸುತ್ತಿದ್ದರು. ಬ್ರಾಹ್ಮಣರಿಗೆ ಅದು ವೇದಮಂತ್ರ ಶ್ರೀಸೂಕ್ತಗಳಿಂದ ಪೂಜೆಗೊಳ್ಳಬೇಕಾದ ಮಹಾಲಕ್ಷ್ಮಿ; ಹರಿಜನರಿಗೆ ಮಾರಿತಾಯಿ; ಉಳಿದವರಿಗೆ



ಊರನ್ನು ಕಾಪಾಡುವ ರಕ್ಷಕ ದೇವತೆ. ಮೂರು ವರ್ಷಕ್ಕೊಮ್ಮೆ ಅಲ್ಲಿ ಭಾರೀ ಜಾತ್ರೆ ನಡೆಯುತ್ತಿತ್ತು. ಜಾತ್ರೆಯ ಕಾಲಕ್ಕೆ, ವಿಶೇಷವಾಗಿ ಆಯ್ಕೆ ಮಾಡಿತಂದ ಕೋಣನನ್ನು ದೇವತೆಗೆ ಬಲಿ ಕೊಡುತ್ತಿದ್ದರು. ಅದಲ್ಲದೆ ನಿತ್ಯವೂ ಅಲ್ಲಿ ಕುರಿ ಕೋಳಿಗಳ ಬಲಿ ಸಲ್ಲುತ್ತಿತ್ತು. ಜಾತ್ರೆಯ ರಥೋತ್ಸವದಲ್ಲಿ ಮೊದಲ ಪೂಜೆ ಬ್ರಾಹ್ಮಣರದ್ದು; ಅನಂತರ ಚಮ್ಮಾರರು ಪ್ರಥಮವಾಗಿ ರಥದ ಗಾಲಿಯ ಚಾಲನೆ ಮಾಡಿಕೊಡಬೇಕು; ಅದಾದ ಮೇಲೆ ಊರಿನ ಸಮಸ್ತರೂ ಕೂಡಿ ತೇರನ್ನು ಎಳೆಯಬೇಕು; ಇದು ರೂಢಿ. ಅಂದರೆ, ಚಮ್ಮಾರರಿಲ್ಲದಿದ್ದರೆ ರಥೋತ್ಸವವೇ ನಡೆಯುವಂತಿರಲಿಲ್ಲ.

ಗಾಂಧಿಯ ಅಹಿಂಸಾ ಚಳುವಳಿಯು ಪ್ರಾರಂಭವಾದ ಕಾಲಕ್ಕೆ ಅಲ್ಲಿ ಪ್ರಾಣಿ ಬಲಿಯನ್ನು ನಿಲ್ಲಿಸಬೇಕೆನ್ನುವ ಚಳುವಳಿ ಮೊದಲಾಯಿತು. ತೀವ್ರ ಹೋರಾಟದ ಪರಿಣಾಮವಾಗಿ ೩೦ರ ದಶಕದಲ್ಲಿ ಮೊದಲಿಗೆ ಕೋಣನ ಬಲಿಯನ್ನೂ ಅನಂತರ ಕ್ರಮೇಣ ಎಲ್ಲಾ ಪಶುಬಲಿಯನ್ನೂ ನಿಲ್ಲಿಸಲಾಯಿತು. ಸಂಪ್ರದಾಯದಂತೆ ಕೋಣನನ್ನು ಆಯ್ಕೆಮಾಡಿ ತಂದು ದೇವರಿಗೆ ನಿವೇದಿಸಿ, ಆಮೇಲೆ ಅದನ್ನು 'ದೇವರ ಪಶು' ವೆಂದು ಜತನದಿಂದ ಸಾಕಿಕೊಳ್ಳುವ ರೂಢಿ ಬಂದಿತು; ಈಗಲೂ ಅದು ಮುಂದುವರಿದಿದೆ. ಮುಂದೆ, ಇಂಥ ಕೋಣಗಳನ್ನು ಸಾಕಿಕೊಳ್ಳಲಿಕ್ಕಾಗಿ ಒಂದು ದೊಡ್ಡ ಗೋಶಾಲೆಯನ್ನು ನಿರ್ಮಿಸಿದರು.

ಹಲವಾರು ಗಲ್ಲಿಗಳ ಆ ಊರಿನಲ್ಲಿ ಒಂದೊಂದು ಗಲ್ಲಿಯಲ್ಲೂ ಒಂದೊಂದು ಜಾತಿಯವರು (ಚಮ್ಮಾರರು, ಲಿಂಗಾಯಿತರು, ಬ್ರಾಹ್ಮಣರು ಇ.) ವಾಸಿಸುತ್ತಿದ್ದರು. ಚಮ್ಮಾರರದು ದೊಡ್ಡ ಕೇರಿ. ಅವರು ಆ ಕಾಲದಲ್ಲಿ ತಯಾರಿಸುತ್ತಿದ್ದ ಚರ್ಮದ ಚಪ್ಪಲಿ ಭಾರೀ ಪ್ರಖ್ಯಾತವಾಗಿತ್ತು. ಲಿಂಗಾಯತರು ಮತ್ತು ಬ್ರಾಹ್ಮಣರು ಅಡಕೆ ವ್ಯಾಪಾರಿಗಳು; ಉಳಿದ ವಾಣಿಜ್ಯ ಚಟುವಟಿಕೆಗಳು ಕೊಂಕಣಿಗಳ ಕೈಯ್ಯಲ್ಲಿದ್ದವು. ಇವರೆಲ್ಲರೂ ಮುಂಬೈನ ಸಂಪರ್ಕವಿಟ್ಟು ಕೊಂಡಿದ್ದವರು. (ಆಗ ಈ ಭಾಗವು ಮುಂಬೈ ಪ್ರಾಂತದಲ್ಲಿತ್ತು.)

ಮೂವತ್ತರ ದಶಕದಿಂದ ಅಲ್ಲಿ ಗಾಂಧಿ ಚಳುವಳಿಗಳು ಆರಂಭವಾದವು. ಊರಿನ ಪ್ರತಿಷ್ಠಿತರು ಮರಾಠಿಯನ್ನು ಬಲ್ಲವರಾಗಿದ್ದು ತಿಲಕರ 'ಕೇಸರಿ' ಪತ್ರಿಕೆಯನ್ನು ತಪ್ಪದೆ ಓದುತ್ತಿದ್ದರು. ಆಗ ಇಲ್ಲಿ ನಡೆದ ದೊಡ್ಡ ಕರ ನಿರಾಕರಣೆಯ ಆಂದೋಲನದಿಂದಾಗಿ ಮುಂದೆ ಈ ಊರು ಕರ್ನಾಟಕದ 'ಬಾರ್ದೋಲಿ' ಎಂದು ಹೆಸರುಗೊಂಡಿತು. ಕಾಂಗ್ರೆಸ್ ಚಟುವಟಿಕೆಗಳಿಗೆ ಕೇಂದ್ರವಾಗಿದ್ದ ಊರು ಅದು. ದಕ್ಷಿಣ ಕನ್ನಡ ಮೂಲದ ಕೊಟ್ಟಾರಿಯೆಂಬ ಗಾಂಧಿವಾದಿಯೊಬ್ಬರು ಅಲ್ಲಿ ಹರಿಜನ ಸಂಘಟನೆಯಲ್ಲಿ ತೊಡಗಿದ್ದರು. ಸ್ಥಳೀಯರಾದ ಅಕದಾಸ ಗಣಪತಿ ದಂಪತಿಗಳು

ಮಹರ್ಷಿ ಕರ್ವೆ ಅವರಿಂದ ಸ್ಫೂರ್ತಿ ಪಡೆದು ವಿಧವಾವಿವಾಹ ಮುಂತಾದ ಸಾಮಾಜಿಕ ಚಳುವಳಿಗಳನ್ನು ನಡೆಸುತ್ತಿದ್ದರು. ರಮಣ ಮಹರ್ಷಿಗಳ ಶಿಷ್ಯರೂ ಹಲವರು ಅಲ್ಲಿದ್ದು ಒಂದು ಆಧ್ಯಾತ್ಮ ಮಂಡಲವನ್ನು ರಚಿಸಿಕೊಂಡಿದ್ದರು. ಚಿತ್ರಕಲೆ ಕರಕುಶಲ ಕೆಲಸಗಳಲ್ಲಿ ಪರಿಣತರಾದ ಗುಡಿಗಾರ ಜಾತಿಯ ಜನರೂ ಯಕ್ಷಗಾನ-ನಾಟಕ-ಸಂಗೀತಗಳಲ್ಲಿ ಆಸಕ್ತಿಯುಳ್ಳ ಜನರೂ ಅಲ್ಲಿನ ಸಮುದಾಯದ ಭಾಗವಾಗಿದ್ದರು.

ಕೊಟ್ಟಾರಿಯವರ ಹರಿಜನ ಚಟುವಟಿಕೆಗಳಿಂದ, ಊರಿನ ಚಮ್ಮಾರರೆಲ್ಲರೂ ಸೊಕ್ಕಿ ಹೋಗಿದ್ದಾರೆ ಅಂತ ಸಾಂಪ್ರದಾಯಿಕರು ದೂರಿಕೊಳ್ಳುತ್ತಿದ್ದರು. ಅದೇ ರೀತಿ ಎಲ್ಲ ಚಳುವಳಿಗಳು ಚಟುವಟಿಕೆಗಳೂ ಊರಿನಲ್ಲಿ ವಿವಾದ ತವಕ ತಲ್ಲಣಗಳನ್ನು ಹುಟ್ಟಿಸತೊಡಗಿದ್ದವು.

ಊರಿನ ಕೇರಿಗಳೆಲ್ಲ ಬಂದು ಕೂಡುವ ಕೇಂದ್ರವೆನ್ನುವಂತಿದ್ದ ಮಾರಿಗುಡಿ ಪ್ರಾಕಾರವು ಎಲ್ಲ ಬಗೆಯ ಸಾಂಪ್ರದಾಯಿಕ - ಸುಧಾರಕ ಚಟುವಟಿಕೆಗಳ ಕೇಂದ್ರಸ್ಥಾನವಾಗಿತ್ತು. ಅದರ ಹಜಾರ ಸಭಾಂಗಣಗಳಲ್ಲಿಯೇ ಸಾಂಸ್ಕೃತಿಕ ಉತ್ಸವಗಳು, ನಾಟಕ-ಯಕ್ಷಗಾನ-ಹರಿಕಥೆ- ಕಾವ್ಯವಾಚನ-ಸಂಗೀತ ಕಾರ್ಯಕ್ರಮಗಳೂ ಕುಸ್ತಿ ಪಂದ್ಯಗಳೂ ರಾಜಕೀಯ ಬಹಿರಂಗ ಸಭೆ ಪ್ರತಿಭಟನೆ ಪ್ರದರ್ಶನಗಳೂ ಸಮಾಜ ಸುಧಾರಕರ ಪ್ರಚಾರ ಭಾಷಣಗಳೂ ರಮಣಭಕ್ತರ ಜಿಜ್ಞಾಸಾ ಕೂಟಗಳೂ ಏರ್ಪಾಟಾಗಿ ಜನರನ್ನು ಆಕರ್ಷಿಸುತ್ತಿದ್ದವು; ಆತಂಕ ಹುಟ್ಟಿಸುತ್ತಿದ್ದವು.

ಒಟ್ಟಿನಲ್ಲಿ ಹೇಳುವುದಾದರೆ — ಹಳತು ಹೊಸತರ ಸಂಘರ್ಷ, ಹಲವು ಧರ್ಮ-ಜಾತಿ-ಪಕ್ಷ-ಸಿದ್ಧಾಂತ-ಜೀವನಕ್ರಮ ಇತ್ಯಾದಿಗಳ ಘರ್ಷಣೆ ಮುಂತಾದವು ಗಳಿಂದ ಆ ಕಾಲಕ್ಕೆ ಶಿರಸಿಯ ಗ್ರಾಮೀಣ ಸಮುದಾಯವು ಜೀವೋಜ್ವಲವಾಗಿತ್ತು, ಕ್ಷೋಭೆಗೊಂಡಿತ್ತು; ಮತ್ತು, ಊರಿನ ಸಮಸ್ತ ಸಂಘರ್ಷ ಕ್ಷೋಭೆಗಳೂ ಮಾರಿಗುಡಿಯ ಪ್ರಾಕಾರದ ಸರ್ವಗ್ರಾಹಿ ಕೊಪ್ಪರಿಗೆಯಲ್ಲಿ ಕುದ್ದು ಪಾಕಗೊಳ್ಳುತ್ತಿದ್ದವು.

ರಂಗಭೂಮಿ ಮತ್ತು ಸಮುದಾಯವನ್ನು ಕುರಿತ ನನ್ನ ಕಲ್ಪನೆಗಳನ್ನು ಸಂಕಲಿಸಿಕೊಳ್ಳಲು ಹೊರಟಾಗ, ಈಗಲೂ ಪ್ರಾಯಃ ಅನೈಚ್ಛಿಕವಾಗಿಯೇ, ನನ್ನ ಮನಸ್ಸು ಆ ನನ್ನ ಶಿರಸಿಯ ಅನುಭವದ ಕಡೆಗೇ ಜಾರಿಕೊಳ್ಳುತ್ತದೆ. ಭರತನ ನಾಟ್ಯಶಾಸ್ತ್ರದ ಮೊದಲ ಮತ್ತು ಕೊನೆಯ ಅಧ್ಯಾಯಗಳಲ್ಲಿನ ಉದ್ವೇಗ-ಉತ್ತೇಜ-ಉತ್ಕ್ಷೋಭಗಳ ರಂಗಕಥೆಯನ್ನು ಅರ್ಥಯಿಸಿಕೊಳ್ಳಲಿಕ್ಕೆ ಪುನಃ, ನನ್ನ ಮನಸ್ಸು ಶಿರಸಿಯನ್ನು ತಾಳೆ ನೋಡಲಿಟ್ಟುಕೊಳ್ಳುತ್ತದೆ. ಈಗ ಆ ಕಾಲ ಎನ್ನುವಷ್ಟು ಹಿಂದಿನದೆನ್ನಿಸುವ ಅವೊತ್ತಿನ ದಿನಗಳಲ್ಲಿ ನಾನು ನೋಡಿದ ಮತ್ತು ನೋಡುತ್ತಿದ್ದಂತೆ ಈ ಬೆರಗಿನ ಬಾಲಕನನ್ನು ಸೆರೆಗೊಳಿಸಿಟ್ಟ ನಾಟಕಗಳು — ಡಿ.ಎಲ್. ರಾಯ್, ಶೇಕ್ಸ್‌ಪಿಯರ್, ಭಾಸರ ಕೃತಿಗಳು



ಅಥವಾ ಅಲ್ಲಿನವನೇ ಆದ ಉತ್ಸಾಹಿ ತರುಣನೊಬ್ಬ ಆಗ ಬರೆದು ಮಾಡಿಸಿದ್ದ ನಾಟಕ — ಈಗ ನನ್ನ ನೆನಪಿನಲ್ಲಿ ಖಚಿತವಾಗಿ ಉಳಿದಿಲ್ಲ. ಆ ಶಿರಸಿಯ ಅವತ್ತಿನ ಜ್ವಾಲಾಮುಖಿ ವೇದಿಕೆಯ ಮೇಲೆ ಹೊಸ ಕಾಲದ ಒಬ್ಬ ಮರಿಭರತನು ಕೂತು ಮಾನವಚರಿತದ ಅಸಂಖ್ಯಾತ ಪರಿಗಳ ಬಗ್ಗೆ ಧ್ಯಾನಸ್ಥನಾಗಿರುವ ಚಿತ್ರವಷ್ಟೇ ನನ್ನಲ್ಲುಳಿದಿದೆ.

••• ••• •••

ನಮ್ಮ ಸಮುದಾಯಗಳೆನ್ನುವ ನನ್ನ ಕಲ್ಪನೆಗೆ ಶಿರಸಿಯು ಕೇಂದ್ರಪ್ರತಿಮೆ ಯಾಗಬಹುದೆಂದು ತೋರುತ್ತದೆ. ಈ ಸಮುದಾಯಗಳ ಸಾಂಸ್ಕೃತಿಕ ಚಿತ್ರಕ್ಕೆ ಸಂವಾದಿಯಾಗಿರುವ ರಾಜಕೀಯ ಚಿತ್ರವನ್ನು ಕೊಂಚ ಪರಿಶೀಲಿಸಬೇಕು ಅಂತ ನನ್ನ ಅಪೇಕ್ಷೆ. ಅಂಥದೊಂದು ಪರಿಶೀಲನೆಯಿಂದ ನನ್ನ ಎರಡನೆಯ ಭಾಷಣವನ್ನು ಪ್ರಾರಂಭಿಸುತ್ತೇನೆ.

ಕರ್ನಾಟಕ ಸರ್ಕಾರದ
ಪಂಪ ಪ್ರಶಸ್ತಿಗೆ
ಪಾತ್ರರಾದ
**ಡಾ. ಎಲ್. ಬಸವರಾಜು**
ಗುಬ್ಬಿ ವೀರಣ್ಣ ಪ್ರಶಸ್ತಿಗೆ
ಪಾತ್ರರಾದ
**ಶ್ರೀ ಎಚ್.ಎನ್.ಹೂಗಾರ**
ಕೇಂದ್ರ ಸಂಗೀತನಾಟಕ ಅಕಾಡೆಮಿ ಪ್ರಶಸ್ತಿಗೆ
ಪಾತ್ರರಾದ
**ಶ್ರೀ ಪ್ರಸನ್ನ**
ಇವರಿಗೆ
ನೀನಾಸಮ್‌ನ
**ಅಭಿನಂದನೆಗಳು**

# ನೀನಾಸಮ್ ವರದಿಗಳು

## ನೀನಾಸಮ್ ರಂಗಶಿಕ್ಷಣ ಕೇಂದ್ರ

ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಸೆಪ್ಟೆಂಬರ್ ಕೊನೆಯವಾರ (ದಿನಾಂಕ ೨೩-೨೬) ತಮ್ಮ ಅಭ್ಯಾಸಮಾಲಿಕೆಯ ಮೊದಲ ನಾಟಕವಾಗಿ 'ಕಥನ ಕುತೂಹಲ'ವನ್ನು ಪ್ರದರ್ಶಿಸಿದರು. ಶ್ರೀ ನಟರಾಜ ಹೊನ್ನವಳ್ಳಿಯವರು ನಿರ್ದೇಶಿಸಿದ ಈ ಪ್ರಯೋಗದಲ್ಲಿ ಶತಮಾನದ ವಸಾಹತು ಕಥನಗಳನ್ನು ಪ್ರತಿನಿಧಿಸುವ ಮೂರು ಪ್ರಮುಖ ಕಥೆಗಳನ್ನು ದಿ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಸಂಜೀವನ ಸ್ವಪ್ನ', ದಿ. ಸೇಡಿಯಾಪು ಕೃಷ್ಣಭಟ್ಟರ 'ನಾಗರ ಬೆತ್ತ' ಮತ್ತು ಶ್ರೀ ವಿವೇಕ ಶಾನಭಾಗ ಅವರ 'ಕಂತು'— ಬಳಸಿಕೊಳ್ಳಲಾಗಿತ್ತು. ಅಭ್ಯಾಸಮಾಲಿಕೆಯ ಎರಡನೇ ನಾಟಕವಾಗಿ ಡಾ. ಚಂದ್ರಶೇಖರ ಕಂಬಾರ ಅವರ ಪ್ರಸಿದ್ಧ ಕಾದಂಬರಿ 'ಸಿಂಗಾರೆವ್ವ ಮತ್ತು ಅರಮನೆ' ಯ ರಂಗಾವಿಷ್ಕಾರ-ತಾಲೀಮು ನಡೆಯುತ್ತಿದ್ದು, ಡಿಸೆಂಬರ್ ಮೊದಲವಾರ (೧,೨,೩,ಮತ್ತು ೪ರಂದು) ಪ್ರದರ್ಶನಗೊಳ್ಳಲಿದೆ. ಇದನ್ನು ಕೇರಳದ ತ್ರಿಚೂರು ಸ್ಕೂಲ್ ಆಫ್ ಡ್ರಾಮಾದ ಅಧ್ಯಾಪಕರಾದ ಶ್ರೀ ನರಿಪ್ಪಟ್ಟ ರಾಜು ಅವರು ನಿರ್ದೇಶಿಸುತ್ತಿದ್ದಾರೆ. (ಡಾ. ಕಂಬಾರರ ಕಾದಂಬರಿಯ ಮಲಯಾಳಂ ಅನುವಾದ – ಸಿ. ರಾಘವನ್ ರಿಂದ– ವನ್ನು ಆಧರಿಸಿ ಶ್ರೀ ಟಿ.ವಿ. ವೇಣುಗೋಪಾಲ್ ಮತ್ತು ಶ್ರೀ ನರಿಪ್ಪಟ್ಟ ರಾಜು ಅವರು ಇದನ್ನು ನಾಟಕ ರೂಪಕ್ಕೆ ಪರಿವರ್ತಿಸಿದ್ದಾರೆ.) ಈ ನಡುವೆ ವಿದ್ಯಾರ್ಥಿಗಳಿಗಾಗಿ ಶ್ರೀ ಬಿ.ಎನ್ ನಾರಾಯಣ (ನಾಣಿ) ಅವರಿಂದ 'ಮುಖವರ್ಣಿಕೆ' ಯ ಕುರಿತು ಹಾಗೂ ಶ್ರೀ ಎಂ.ಎಂ. ಕೃಷ್ಣಮೂರ್ತಿಯವರಿಂದ 'ರಂಗಪ್ರಕಾಶ'ದ ಕುರಿತು ಕಮ್ಮಟಗಳು ನಡೆದಿವೆ. ಅಕ್ಟೋಬರ್‌ನಲ್ಲಿ ನಡೆದ ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

## ನೀನಾಸಮ್ ಪ್ರತಿಷ್ಠಾನ

ಸೆಪ್ಟೆಂಬರ್ ೯ ಮತ್ತು ೧೦ ರಂದು ಗದಗದಲ್ಲಿ ತಾಲ್ಲೂಕು ಸಾಹಿತ್ಯ ಪರಿಷತ್ತು ಮತ್ತು ನೀನಾಸಮ್ ಪ್ರತಿಷ್ಠಾನ ಸಹಯೋಗದೊಂದಿಗೆ 'ಕಾವ್ಯ ಸಹೃದಯತೆ'ಯ ಕುರಿತು ಹಾಗೂ ಅಕ್ಟೋಬರ್ ೧ ಮತ್ತು ೨ರಂದು ಸಾಗರದಲ್ಲಿ ರೋಟರಿ ಸಂಸ್ಥೆ, ತಾಲೂಕು ಸಾಹಿತ್ಯ ಪರಿಷತ್ತು ಮತ್ತು ನೀನಾಸಮ್ ಪ್ರತಿಷ್ಠಾನ ಸಹಯೋಗದೊಂದಿಗೆ ಪಿ.ಲಂಕೇಶ್ ಸಾಹಿತ್ಯದ ಕುರಿತು ಅಧ್ಯಯನ ಶಿಬಿರಗಳು ನಡೆದವು. ಡಿಸೆಂಬರ್ ೨ ಮತ್ತು ೩ರಂದು



ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಕನ್ನಡ ನಾಟಕಗಳ ಕುರಿತು ಹಾಗೂ ಡಿಸೆಂಬರ್ ೨೪ ಮತ್ತು ೨೫ರಂದು ಸಾಗರದಲ್ಲಿ ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ 'ಶತಮಾನದ ತಿರುವಿನ ಬಿಕ್ಕಟ್ಟುಗಳು' ಎಂಬ ವಿಷಯದ ಕುರಿತು ಅಧ್ಯಯನ ಶಿಬಿರಗಳು ನಡೆಯಲಿವೆ.

## ನೀನಾಸಮ್ ಸಂಸ್ಕೃತಿ ಶಿಬಿರ ೨೦೦೦

ಈ ಸಾಲಿನ ಸಂಸ್ಕೃತಿ ಶಿಬಿರ ೨೦೦೦ ಅಕ್ಟೋಬರ್ ೧೫ರಿಂದ ೨೨ರ ವರೆಗೆ ಎಂಟು ದಿನಗಳ ಕಾಲ ನಡೆಯಿತು. ಡಾ. ಯು.ಆರ್. ಅನಂತಮೂರ್ತಿಯವರು ಶಿಬಿರದ ನಿರ್ದೇಶಕರಾಗಿದ್ದರು. 'ಹಳೆಯ ಶತಮಾನ ಮತ್ತು ಹೊಸ ಶತಮಾನ' ಎಂಬ ವಿಷಯದ ಸುತ್ತ ಶಿಬಿರದ ಪ್ರಮುಖ ಉಪನ್ಯಾಸ -ಚರ್ಚೆ-ಗೋಷ್ಠಿಗಳು ನಡೆದವು. ಈ ಬಾರಿ ಶಿಬಿರವನ್ನು ನಡೆಸಿಕೊಟ್ಟ ಸಂಪನ್ಮೂಲ ಅತಿಥಿಗಳು – ಶ್ರೀಯುತರಾದ ಶಮೀಕ್ ಬಂದೋಪಾಧ್ಯಾಯ, ಡಾ. ರಾಮಚಂದ್ರ ಗುಹಾ, ಪ್ರೊ. ಕಿ.ರಂ. ನಾಗರಾಜ್, ಶ್ರೀ ಬಿ.ವಿ. ಕಾರಂತ, ಶ್ರೀ ಗಿರೀಶ್ ಕಾಸರವಳ್ಳಿ, ಡಾ. ರಾಜೇಂದ್ರ ಚೆನ್ನಿ, ಮನು ಚಕ್ರವರ್ತಿ, ಪಂಡಿತ್ ಕೇಶವ ಗಿಂಡೆ, ಕವಿತಾ ಲಂಕೇಶ್ ಮುಂತಾದವರು. ಭಾಗವಹಿಸಿದ ಶಿಬಿರಾರ್ಥಿಗಳ ಸಂಖ್ಯೆ ೧೦೧; ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ೧೭ ಮಂದಿಯನ್ನು ಸೇರಿಸಿ ಒಟ್ಟು ೧೧೮.

ಯು.ಆರ್. ಅನಂತಮೂರ್ತಿಯವರ ಪೀಠಿಕಾ ಭಾಷಣದೊಡನೆ ಪ್ರಾರಂಭವಾದ ಶಿಬಿರವು ಶಮೀಕ್ ಬಂದೋಪಾಧ್ಯಾಯರ ಸಮಾರೋಪ ಭಾಷಣದೊಡನೆ ಮುಕ್ತಾಯವಾಯಿತು. ಒಟ್ಟು ಎಂಟು ದಿನಗಳಲ್ಲಿ – ಮೊದಲ ಕನ್ನಡ ಕಾದಂಬರಿಗಳಲ್ಲಿ ವಸ್ತು ಮತ್ತು ಸಂಘರ್ಷ ಹಾಗೂ ಕನ್ನಡ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ ಎಂಬ ವಿಷಯಗಳ ಕುರಿತು ಡಾ. ರಾಜೇಂದ್ರ ಚೆನ್ನಿ; ಬೇಂದ್ರೆಯವರ 'ಸಖೀಗೀತ', ಅಡಿಗರ 'ಭೂಮಿಗೀತ', ಕಂಬಾರರ 'ಹೇಳತೇನಿ ಕೇಳ' ಹಾಗೂ ಆಧುನಿಕ ಕನ್ನಡ ಕಾವ್ಯ ಎಂಬ ವಿಷಯದ ಕುರಿತು ಪ್ರೊ. ಕಿ.ರಂ. ನಾಗರಾಜ, ವಾಸ್ತವವಾದದ ಪರಿಕಲ್ಪನೆ ಹಾಗೂ ಚೆಖಾವ್ ನಾಟಕಗಳ ಕುರಿತು ಡಾ. ಶಮೀಕ್ ಬಂದೋಪಾಧ್ಯಾಯ; ಪೂರ್ವ-ಪಶ್ಚಿಮ ಮುಖಾಮುಖಿ – ಪ್ರೀತಿ ಮತ್ತು ದ್ವೇಷಗಳ ಸಂಬಂಧ ಎಂಬ ವಿಷಯದ ಬಗೆಗೆ ಡಾ. ರಾಮಚಂದ್ರ ಗುಹಾ; ರಾಷ್ಟ್ರೀಯತೆ, ನಾಗರಿಕಸಮಾಜ ಮತ್ತು ಪ್ರಭುತ್ವ ಎಂಬ ವಿಷಯದ ಬಗೆಗೆ ಮನು ಚಕ್ರವರ್ತಿ; ಭಾರತದಲ್ಲಿನ ಸಾಕ್ಷ್ಯಚಿತ್ರಗಳ ಇತಿಹಾಸದ ಬಗ್ಗೆ ಶ್ರೀ ಗಿರೀಶ್ ಕಾಸರವಳ್ಳಿ, ಭರತನಾಟ್ಯದ ಸ್ವರೂಪಗಳ ಬಗೆಗೆ ಎಂ.ಆರ್. ಕೃಷ್ಣಮೂರ್ತಿ ಮತ್ತು ತಂಡದವರು; ಸಂಗೀತ ಸಂವಹನೆ ಹಾಗೂ ಪನ್ನಾಲಾಲ್ ಘೋಷ್

ಪರಂಪರೆಯ ಕೊಳಲುವಾದನದ ಬಗ್ಗೆ ಪಂಡಿತ್ ಕೇಶವ ಗಿಂಡೆ; ತಾವು ನಡೆದು ಬಂದ ಹಾದಿ ಹಾಗೂ ಒಂದು ಸಂಸ್ಕೃತಿಯ ಉಳಿವಿನಲ್ಲಿ ರಂಗಭೂಮಿಯ ಪಾತ್ರ ಎಂಬ ಕುರಿತು ಶ್ರೀ ಬಿ.ವಿ. ಕಾರಂತರು – ಉಪನ್ಯಾಸಗಳನ್ನು ನೀಡಿದರು. ಈ ನಡುವೆ ಕವಿತಾ ಲಂಕೇಶ್ ಅವರು ನಿರ್ದೇಶಿಸಿದ 'ದೇವೀರಿ', ಮೃಲಾಲ್ ಸೇನರ 'ಕಂದಹಾರ್', ಅಡೂರ್ ಗೋಪಾಲಕೃಷ್ಣನ್ ಅವರ 'ಕಥಾಪುರುಷನ್' ಮೊದಲಾದ ಚಲನಚಿತ್ರಗಳು, ಆನಂದ ಪಟವರ್ಧನ್ ಅವರು ನಿರ್ಮಿಸಿದ 'ಇನ್ ದಿ ಮೆಮರಿ ಆಫ್ ಫ್ರೆಂಡ್ಸ್', ಮಧುಶ್ರೀ ಯವರ 'ಅಕ್ಕ', ಮಂಗೈಯವರ 'ಪಚ್ಚಮಣ್ಣು' ಮೊದಲಾದ ಸಾಕ್ಷ್ಯಚಿತ್ರಗಳು ನೀನಾಸಮ್ ನಿರ್ಮಿಸಿರುವ ಕನ್ನಡ ನಾಟಕ ಕನ್ನಡಿಯ ವೀಡಿಯೋ ಮಾಲಿಕೆ – ಇವುಗಳ ಪ್ರದರ್ಶನ, ಅವುಗಳಿಗೆ ಸಂಬಂಧಿಸಿ ಚರ್ಚೆ ಸಂವಾದಗಳೂ ನಡೆದವು.

ಪ್ರತಿದಿನ ಸಂಜೆ ಸಾರ್ವಜನಿಕರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಮೊದಲ ಮೂರು ದಿನಗಳಲ್ಲಿ ನೀನಾಸಮ್ ತಿರುಗಾಟದ ಮೂರು ನಾಟಕಗಳ ಪ್ರಥಮ ಪ್ರದರ್ಶನಗಳು ನಡೆದವು – 'ಶ್ಮಶಾನ ಕುರುಕ್ಷೇತ್ರಂ' (ರಚನೆ:ಕುವೆಂಪು, ನಿ: ಅಕ್ಷರ ಕೆ.ವಿ.), 'ಭಗವದಜ್ಜುಕೀಯ' (ಮಹೇಂದ್ರ ವಿಕ್ರಮ ವರ್ಮನ ನಾಟಕ, ಅನುವಾದ: ಕೆ.ವಿ. ಸುಬ್ಬಣ್ಣ, ನಿ: ಕಾವಾಲಂ ನಾರಾಯಣ ಪಣಿಕ್ಕರ್) 'ಮೂವರು ಅಕ್ಕತಂಗಿಯರು' (ಆ್ಯಂಟನ್ ಚೆಖಾವ್‌ನ 'ತ್ರೀ ಸಿಸ್ಟರ್ಸ್', ಅನುವಾದ: ವೈದೇಹಿ, ನಿ: ಚಿದಂಬರರಾವ್ ಜಂಬೆ). 'ಮಂತ್ರಶಕ್ತಿ' (ರಚನೆ ಸಂಸ, ಪ್ರಯೋಗ: ನೀನಾಸಮ್, ನಿ: ಅಕ್ಷರ ಕೆ.ವಿ), 'ಮಾಸ್ತಿ ಕಥೆ – ಮೂರು' (ಮಾಸ್ತಿಯವರ ಕಥೆಗಳ ಕಥಾನಾಟಕ, ಪ್ರಯೋಗ: ಪ್ರೊಥಿಯೂ ತಿಪಟೂರು, ನಿ: ನಟರಾಜ ಹೊನ್ನವಳ್ಳಿ) – ಈ ನಾಟಕಗಳ ಪ್ರದರ್ಶನಗಳು; ಎಂ.ಆರ್. ಕೃಷ್ಣಮೂರ್ತಿ ನೇತೃತ್ವದ ಬೆಂಗಳೂರು 'ಕಲಾಕ್ಷಿತಿ' ತಂಡದವರಿಂದ ಭರತನಾಟ್ಯ; ಸುಕನ್ಯಾ ಗಜಾನನ ಭಟ್‌ರವರಿಂದ ಗಮಕ-ಕಾವ್ಯವಾಚನ; ಚೆನ್ನೈನ ಶ್ರೀವಿಜಯಶಿವ ಅವರಿಂದ ಕರ್ನಾಟಕ ಸಂಗೀತ; ಪುಣೆಯ ಪ್ರೊ. ಪಂ. ಕೇಶವ ಗಿಂಡೆಯವರಿಂದ ಹಿಂದೂಸ್ತಾನಿ ಕೊಳಲು ವಾದನ – ಮುಂತಾದವು ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿದ್ದವು.

ಸಂಸ್ಕೃತಿ ಶಿಬಿರದ ಕಾರ್ಯಕ್ರಮಗಳ ನಡುವೆ ದಿನಾಂಕ ೨೦-೧೦-೨೦೦೦ ರಂದು ಯುವ ಕವಯಿತ್ರಿ ಶ್ರೀಮತಿ ಎಂ.ಆರ್. ಭಗವತಿಯವರಿಗೆ – ಅವರ 'ಏಕಾಂತದ ಮಳೆ' ಎಂಬ ಕವನ ಸಂಕಲನಕ್ಕೆ – ಮೊದಲ 'ಬಿ.ಎಂ.ಶ್ರೀ ಕಾವ್ಯ ಪ್ರಶಸ್ತಿ' ಯನ್ನು ಪ್ರದಾನ ಮಾಡಲಾಯಿತು. ಯು.ಆರ್. ಅನಂತಮೂರ್ತಿಯವರು ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಕಿ.ರಂ. ನಾಗರಾಜ್ ಹಾಗೂ ಅನಂತಮೂರ್ತಿ ಯವರು ಕವಿ-ಕವಿತೆ-ಪ್ರಶಸ್ತಿ ಎಂಬ ವಿಷಯದ ಸುತ್ತ ಮಾತನಾಡಿದರು. ಹೊಸ



ಬರಹಗಾರರೊಬ್ಬರ ಮೊದಲ ಕವನ ಸಂಗ್ರಹಕ್ಕೆ ಮೀಸಲಾದ ಬಿ.ಎಂ.ಶ್ರೀ ಕಾವ್ಯ ಪ್ರಶಸ್ತಿಯನ್ನು ಶಾ. ಬಾಲುರಾವ್ ದಂಪತಿಗಳು ಸ್ಥಾಪಿಸಿದ್ದು, ಅಕ್ಷರ ಪ್ರಕಾಶನ ಅದನ್ನು ನಿರ್ವಹಿಸುತ್ತದೆ.

**ಶಿಬಿರದ ಸ್ಥೂಲ ಜಮಾ-ಖರ್ಚು**

ಶಿಬಿರಾರ್ಥಿಗಳಿಂದ ತಲಾ ರೂ. ೭೦೦-೦೦ ರಂತೆ ಶುಲ್ಕ ಸಂಗ್ರಹಿಸಲಾಗಿದೆ. ಅದರಲ್ಲಿ ಸೀಸನ್ ಟಿಕೆಟ್ ಬಾಬ್ತು ರೂ. ೧೦೦-೦೦ ಕಳೆದು ಉಳಿದ ಹಣ ರೂ. ೬೦೦-೦೦ ಅವರ ಊಟ-ವಸತಿಗಳ ಭಾಗಶಃ ವೆಚ್ಚಕ್ಕಾಗಿ ತೆಗೆದುಕೊಂಡಿದೆ.

| | |
|---|---|
| **ಖರ್ಚು** | |
| ಶಿಬಿರಾರ್ಥಿಗಳ, ಅತಿಥಿಗಳ ಊಟ-ತಿಂಡಿ | ರೂ.೯೫೭೩೨-೦೦ |
| ಅತಿಥಿಗಳ ಪ್ರಯಾಣ, ಕಲಾವಿದರ ಸಂಭಾವನೆ | ರೂ.೩೪೦೭೭-೦೦ |
| ವಸತಿ ಮತ್ತಿತರ ವ್ಯವಸ್ಥೆ | ರೂ.೭೮೭೬೮-೦೦ |
| ಒಟ್ಟು ಖರ್ಚು | ರೂ.೨೦೮೫೭೭-೦೦ |
| **ಒಟ್ಟು ಜಮಾ** | ರೂ.೬೦೬೦೦-೦೦ |
| ನಿವ್ವಳ ವೆಚ್ಚ | ರೂ.೧೪೭೯೭೭-೦೦ |

ಇದನ್ನು ವಿವಿಧ ಧನಸಹಾಯ ಅನುದಾನ ದಾನಗಳ ಮೂಲಕ ತುಂಬಿಸಿ ಕೊಳ್ಳಬೇಕಾಗಿದೆ.

ಇತ್ತೀಚೆಗೆ ನಿಧನರಾದ

**ಪ್ರೊ. ಎಸ್.ವಿ. ಪರಮೇಶ್ವರ ಭಟ್ಟ**

ಹಾಗೂ

**ಡಾ। ಹಾ.ಮಾ. ನಾಯಕ**

ಇವರಿಗೆ ನೀನಾಸಮ್‌ನ

**ಶ್ರದ್ಧಾಂಜಲಿ**

**ಮಾತುಕತೆ ೫೬**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು

ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

**ನವೆಂಬರ್ ೨೦೦೦ ವರ್ಷ ಹದಿನಾಲ್ಕು ಸಂಚಿಕೆ ನಾಲ್ಕು**

| | |
|---|---|
| ೧. ಯುಗಪಲ್ಲಟ / ಯು.ಆರ್.ಅನಂತಮೂರ್ತಿ | ಪುಟ ೧ |
| ೨. ರಂಗಭೂಮಿ ಮತ್ತು ಸಮುದಾಯ / ಕೆ.ವಿ.ಸುಬ್ಬಣ್ಣ | ಪುಟ ೨೪ |
| ೩. ನೀನಾಸಮ್ ವರದಿಗಳು | ಪುಟ ೪೧ |

**MAATHUKATHE** NOV. 2000 (YEAR 14 ISSUE 4)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

**ಮಹಾಮಾಯಿ**
(ನಾಟಕ - ಚಂದ್ರಶೇಖರ ಕಂಬಾರ) ರೂ. ೬೦

**ಸಕ್ಕರೆ ಗೊಂಬೆ**
(ನಾಟಕ - ವಿವೇಕ ಶಾನಭಾಗ) ರೂ. ೫೫

**ಎರಡು ರಷ್ಯನ್ ನೀಳ್ಗತೆಗಳು**
(ಟಾಲ್‌ಸ್ಟಾಯ್ ಮತ್ತು ಗೊಗೋಲ್ ಅನುವಾದ - ಟಿ.ಪಿ. ಅಶೋಕ) ರೂ. ೫೫

**ರಂಗಪ್ರಯೋಗ**
(ಅಭಿನಯ, ರಂಗತಂತ್ರ, ರಂಗಸಿದ್ಧತೆಯ ಪರಿಚಯ - ಅಕ್ಷರ ಕೆ.ವಿ.) ರೂ.೨೦೦

**ಬಹುಮುಖ** (ಅಕ್ಷರ ಚಿಂತನ ಮಾಲೆ -
ಮನು ಚಕ್ರವರ್ತಿ, ಅನು: ಎಲ್. ಜಿ. ಮೀರಾ) ರೂ. ೫೫

**ಜಾಗತಿಕ ಪರಿಸರ ಚರಿತ್ರೆ** (ಅಕ್ಷರ ಚಿಂತನ ಮಾಲೆ -
ರಾಮಚಂದ್ರ ಗುಹಾ, ಅನು: ಮಾಧವ ಐತಾಳ) ರೂ. ೭೫

**ಹೊಸ ಪ್ರಕಟಣೆಗಳು**

**ರಂಗದಲ್ಲಿ ಅಂತರಂಗ**
(ಸ್ತಾನಿಸ್ಲಾವ್‌ಸ್ಕಿಯ ಆ್ಯನ್ ಆ್ಯಕ್ಟರ್ ಪ್ರಿಪೇರ್ಸ್
ಅನುವಾದ: ಕೆ.ವಿ. ಸುಬ್ಬಣ್ಣ) ರೂ. ೧೬೦

**ಅಮ್ಮಚ್ಚಿಯೆಂಬ ನೆನಪು**
(ಕಥೆಗಳು - ವೈದೇಹಿ) ರೂ. ೮೦

**ಸಿಂಗಾರೆವ್ವ ಮತ್ತು ಅರಮನೆ**
(ಕಾದಂಬರಿ-ಮರುಮುದ್ರಣ- ಚಂದ್ರಶೇಖರ ಕಂಬಾರ) ರೂ. ೮೫

**ಕಾರಂತ ಚಿಂತನ**
(ಕಡಲಾಚೆಯ ಕನ್ನಡಿಗರಿಂದ ಕಾರಂತರ ಕುರಿತ ಬರಹಗಳು) ರೂ. ೧೫೦

**ಕವಿರಾಜಮಾರ್ಗ ಮತ್ತು ಕನ್ನಡಜಗತ್ತು**
(ಕೆ.ವಿ.ಸುಬ್ಬಣ್ಣ) ರೂ. ೭೦

**ಭವ**
(ಕಾದಂಬರಿ-ಮರುಮುದ್ರಣ-
ಯು.ಆರ್. ಅನಂತಮೂರ್ತಿ) ರೂ. ೬೦